# ಹೆಜ್ಜೆಗಳು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು
2018–19




**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್**
ಅಪೂರ್ವ, ನೆಲಮಹಡಿ
ನಂ. 259, 4ನೇ ಕ್ರಾಸ್
ರಾಜಮಹಲ್ ವಿಲಾಸ್, 2ನೇ ಹಂತ
2ನೇ ಬ್ಲಾಕ್, ಬೆಂಗಳೂರು – 5600094

ದೂರವಾಣಿ : 87629 54080 080–2341 4681/82


ಹೆಜ್ಜೆಗಳು 2018–19


Over 20 Years of Celebrating the Arts
India Foundation for the Arts
I F A

ಕಲಿ-ಕಲಿಸು
AN ARTS EDUCATION INITIATIVE
KALI-KALISU


# ಹೆಜ್ಜೆಗಳು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು
2018–19












This publication is supported by the Singhal Iyer Family Foundation (SIFF)
www.siff.in



ಕಲಿ-ಕಲಿಸು
AN ARTS EDUCATION INITIATIVE
KALI-KALISU

# ಹೆಜ್ಜೆಗಳು

ಸರ್ಕಾರಿ ಶಾಲೆಗಳಲ್ಲಿ ಕಲಾ ಅಂತರ್ಗತ ಪ್ರಯೋಗಗಳು

**2018–19**

Over 20 Years of Celebrating the Arts
India Foundation for the Arts
I F A

Kali Kalisu - Hejjegalu:

A snapshot of our arts integrated interventions in Government Schools Karnataka during 2018-19

Complied by: Dr. Ningu Solagi & Kotresh B.

India Foundation for the Arts
`Apurva' Ground Floor, No 259, 4th Cross,
Raj Mahal Vilas 2nd stage, 2nd Block, Bengaluru
India - 560 094
Tel: 91-80-2341 4681 / 82 / 83

ಸಂಪಾದಕರು : **ಡಾ. ನಿಂಗು ಸೊಲಗಿ, ಕೊಟ್ರೇಶ ಬಿ.**
ಪ್ರಥಮ ಮುದ್ರಣ : 2019
ಹಕ್ಕುಗಳು : ಐಎಫ್ಎ, ಬೆಂಗಳೂರು
ಪುಟಗಳು : 71
ಆಕಾರ : 1/8 ಡೆಮಿ
ಕಾಗದ : 100 ಜಿ.ಎಸ್.ಎಂ. ಆರ್ಟ್‌ಬೋರ್ಡ್
ಪುಸ್ತಕ ವಿನ್ಯಾಸ : ನಾರಾಯಣ / ಕಿರಣ
ಮುದ್ರಣ : ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ವಿಠ್ಠಲ ಮಂದಿರ ರೋಡ,
ಗದಗ 582 101
ಮೊ. : 9448223602, 9036603998

## ಪರಿವಿಡಿ

**ಶುಭ ಸಂದೇಶ**

iv ಅರುಂಧತಿ ಘೋಷ್

**ಅವಲೋಕನ**

vi ಕೃಷ್ಣಮೂರ್ತಿ ಟಿ. ಎನ್.
viii ರಾಧಿಕಾ ಭಾರದ್ವಾಜ್

**ಸಂಪಾದಕೀಯ**

x ಡಾ. ನಿಂಗು ಸೊಲಗಿ
ಕೊಟ್ರೇಶ ಬಿ.

**ಶಿಕ್ಷಕರ ಯೋಜನೆಗಳು**

1 ಮಧುಕರ್ ಎಂ. ಎಲ್.
3 ಪ್ರಕಾಶ ಮೂಡಿತ್ತಾಯ
5 ಅಣ್ಣಪ್ಪ ಎಚ್. ಒಂಟಿಮಾಳಗಿ
7 ಎಂ. ಜೆ. ರಾಜೀವಗೌಡ
9 ಭಾರತಿ ಎ.
11 ಕಿಶನ್‌ರಾವ್ ಕುಲಕರ್ಣಿ

**ಕಲಾವಿದರ ಯೋಜನೆಗಳು**

13 ಕಾವ್ಯ ಸಿ
15 ಸಂತೋಷ ದಿಂಡಗೂರು
17 ಸಯ್ಯದ್ ಸಾಧಿಕ್
19 ಯುವರಾಜ ಎಚ್ ಪಿ.
21 ಪ್ರಶಾಂತಕುಮಾರ್
23 ಚಂದ್ರಹಾಸ ಯಲ್ಲಪ್ಪ
25 ಗಣೇಶ ಪಲವತ್ತು ನಾಡೋರ್
27 ವಿನೋದ್‌ಕುಮಾರ್ ಎಸ್.

**ಸಂಸ್ಥಾ ಯೋಜನೆಗಳು**

29 ಮಲೆನಾಡು ಶಿಕ್ಷಣ ಮತ್ತು
ಗ್ರಾಮೀಣ ಅಭಿವೃದ್ಧಿ ಸಂಸ್ಥೆ

**ಮುಖಾಮುಖಿ**

32 ವಿಚಾರ ಮಂಡಣೆ
67 ಯೋಜನೆಗಳ ಅಹ್ವಾನ

## ಶುಭ ಸಂದೇಶ



**ಅರುಂಧತಿ ಘೋಷ್**
ಮುಖ್ಯಸ್ಥರು
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಬೆಂಗಳೂರು

ಇಂಡಿಯಾ ಫೌಂಡೇಶನ್ ದಿ ಫಾರ್ ಆರ್ಟ್ಸ್ 'ಕಲಿ ಕಲಿಸು'– ಕಾರ್ಯಕ್ರಮವು, ತನಗಿಂತಲೂ ಮಿಗಿಲಾದ ಅರ್ಥ ಮತ್ತು ಮೌಲ್ಯಗಳನ್ನು ಹೊಂದಿದೆ.

ಮೊದಲನೆಯದಾಗಿ, ನಾವು ಜೀವನದುದ್ದಕ್ಕೂ ಜ್ಞಾನವನ್ನು ಅರಸುವವರಾಗಿ, ಜೊತೆಗೆ ನಮ್ಮ ಅನುಭವ ಮತ್ತು ಜ್ಞಾನಗಳ ಆಧಾರದ ಮೇಲೆ ಮತ್ತೊಬ್ಬರಿಗೆ ಕಲಿಸುತ್ತ ಜೀವಿಸಬಹುದು ಎಂಬ ಆಲೋಚನೆಯೇ ಬಲು ಕಾಳಜಿ ಮತ್ತು ಸಹಾನುಭೂತಿಯಿಂದ ಕೂಡಿರುವಂತಹದ್ದು. ಎರಡನೆಯದಾಗಿ, ಈ ಕಾರ್ಯಕ್ರಮವು ನಾವು ಪಠ್ಯದ ಮುಖಾಂತರ ಕಲಿಯುವದನ್ನು ನಮ್ಮ ಜೀವನ ವಿಧಾನಗಳಿಗೆ ಮತ್ತು ಸಮಾಜದ ಪದ್ಧತಿಗಳಿಗೆ ಅನ್ವಯಿಸುವುದನ್ನು ಕಲಿಸಲು ಬಳಸುವ ಮಾರ್ಗಗಳು ನಮಗೆ ನೆಲದಲ್ಲಿ ಗಟ್ಟಿಯಾಗಿ ಬೇರೂರಲು ಅವಕಾಶ ಮಾಡಿ ಕೊಟ್ಟಂತೆಯೇ, ಆಗಸದಲ್ಲಿ ಹಾರಲು ರೆಕ್ಕೆಗಳನ್ನೂ ಸಹ ನೀಡುತ್ತವೆ. ಮೂರನೆಯದಾಗಿ, ಈ ಕಾರ್ಯಕ್ರಮವು ಶಾಲೆಗಳನ್ನು ನಮ್ಮ ಸಮುದಾಯಗಳ ಕೇಂದ್ರಬಿಂದುಗಳನ್ನಾಗಿ ಮಾಡುವ ಮೂಲಕ ಶಿಕ್ಷಣವು ನಮ್ಮ ಒಳತಿಗೆ ಮತ್ತು ಬೆಳವಣಿಗೆಯಲ್ಲಿ ಬಹುಮುಖ್ಯವಾದ ಮತ್ತು ಅವಿಭಾಜ್ಯ ಅಂಗ ಎಂಬುದನ್ನು ಸಾರುತ್ತ, ನಮ್ಮ ಜೀವನದೊಳಗೆ ಶಿಕ್ಷಣಕ್ಕೊಂದು ವಿಶೇಷ ಮತ್ತು ಸಮಗ್ರ ಸ್ಥಾನಮಾನವನ್ನು ರೂಪಿಸುತ್ತದೆ.

'ಕಲಿ–ಕಲಿಸು' ಕಾರ್ಯಕ್ರಮವು ಜೀವನದ ಕುರಿತಾದ ದೃಷ್ಟಿಕೋನವನ್ನು, ಆಲೋಚನೆಯನ್ನು, ಅನುಭವಗಳನ್ನು ಬದಲಾಯಿಸಲಿ ಎಂದು ಆಶಿಸುತ್ತೇನೆ. ಪ್ರಸ್ತುತತೆಯ ಕುರಿತು ಕಠಿಣ ಪ್ರಶ್ನೆಗಳನ್ನು ಕೇಳಲು, ಎಲ್ಲರಿಗೂ ಸುರಕ್ಷಿತ ಮತ್ತು ಸೌಹಾರ್ದಯುತ ಭವಿಷ್ಯವನ್ನು ಕಲ್ಪಿಸಿಕೊಳ್ಳುವುದನ್ನು ಈ ಕಾರ್ಯಕ್ರಮವು ಸಾಧ್ಯಗೊಳಿಸಲಿ ಎಂದು ಆಶಿಸುತ್ತೇನೆ. ಎಲ್ಲದಕ್ಕಿಂತ ಮುಖ್ಯವಾಗಿ ಅದು ಕಲಿಕೆಯ ಕಲೆಗಳಿಗೆ ಕುತೂಹಲವನ್ನು ಮರಳಿ ತರಬಹುದು ಎಂದು ಭಾವಿಸುತ್ತೇನೆ.

ಈ ಕಾರ್ಯಕ್ರಮದ ಅಡಿಯಲ್ಲಿ ಯೋಜನೆಗಳನ್ನು ಕೈಗೆತ್ತಿಕೊಂಡಂತಹ ಎಲ್ಲ ಶಿಕ್ಷಕ ಮತ್ತು ಕಲಾವಿದರಿಗೆ ಯಶಸ್ಸನ್ನು ಹಾರೈಸುತ್ತೇನೆ. ಈ ಸಂಚಿಕೆಯ ಸಂಪಾದನೆ ಹಾಗೂ ವಿನ್ಯಾಸದ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಡಾ. ನಿಂಗು ಸೊಲಗಿ ಹಾಗೂ ಕೊಟ್ರೇಶ ಬಿ. ಇವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಐಎಫ್‌ಎ ತಂಡದ ನಮ್ಮೆಲ್ಲರಿಗೂ, ಮುಖ್ಯವಾಗಿ ಕೃಷ್ಣ ಮತ್ತು ರಾಧಿಕಾ ಇವರಿಗೆ, ಭವಿಷ್ಯದಲ್ಲಿ ಸಂಭ್ರಮದ ಪಥ ಸಿಗಲಿ ಎಂದು ಆಶಿಸುತ್ತೇನೆ.



ಅವಲೋಕನ

**ಕೃಷ್ಣಮೂರ್ತಿ ಟಿ. ಎನ್.**
ಕಾರ್ಯಕ್ರಮ ಅಧಿಕಾರಿ – ಕಲಾಶಿಕ್ಷಣ
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಬೆಂಗಳೂರು



ಪಾವಗಡದಲ್ಲಿ ಮಧುಗಿರಿ ಶೈಕ್ಷಣಿಕ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ಶಿಕ್ಷಕರ ತರಬೇತಿ ನಡೆದು ವರ್ಷವೇ ಆಯಿತು. ಶಿಕ್ಷಕರಾದ ಗೋಪಾಲ ಕೃಷ್ಣ ಅವರ 'ಗೀಜ ಗೀಜ ಗೀಜಾಗ' ಹಾಡು ಇನ್ನು ಗುಂಗನ್ನು ಅಳಿಸಿಲ್ಲ! ಕುಣಿಗಲ್ಲಿನ ಸರ್ಕಾರಿ ಶಾಲೆಯನ್ನು ಕುರಿತಂತೆ ದಿನ ಪತ್ರಿಕೆಯ ಚಿಕ್ಕ ಚೂರೊಂದು ಕಲಾ ಅಂತರ್ಗತ ಪ್ರಯೋಗವಾಗಿ ಬದಲಾಯಿತು ಅನ್ನುವ ಕುತೂಹಲ ಮಾಸುತ್ತಿಲ್ಲ.!!.

'ಗ್ರಂಥಾಯಣ' ಪ್ರದರ್ಶನದಲ್ಲಿ ನಟಿಸಿದ ಆ ಬಾಲಕ ಬಾಲಕಿಯ ಅದ್ಭುತ ನಟನೆ ಚಲಚಿತ್ರವೊಂದರ ಫ್ರೇಮ್ ಅನ್ನಿಸುತ್ತದೆ. ೨೦೧೮–೧೯ ರ ಶೈಕ್ಷಣಿಕ ಅವಧಿಯಲ್ಲಿ ನಮ್ಮ ಸಂಸ್ಥೆಯು ನೀಡಿದ ತರಬೇತಿಗಳು ಹಾಗು ಸ್ವೀಕರಿಸಿದ ಪ್ರಸ್ತಾವನೆಗಳಿಂದ ಕಲಿ ಕಲಿಸು ಕಾರ್ಯಕ್ರಮವು ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ತನ್ನ ನೆಲೆಯನ್ನು ವಿಸ್ತರಿಸುವಲ್ಲಿ ಯಶಸ್ವಿಯಾಗಿದೆ. ಇದಕ್ಕೆ ಬೆಂಬಲವಾಗಿ ಅನುದಾನವನ್ನು ಕೋರಿ ನೂರಕ್ಕೂ ಹೆಚ್ಚಿನ ಪ್ರಸ್ತಾವನೆಗಳು ಈ ವರ್ಷ ನಮಗೆ ಸಲ್ಲಿಕೆಯಾದವು. ಒಂದೊಂದನ್ನು ಓದುವಾಗಲೂ ಹೊರ ಬರುತ್ತಿದ್ದ ಕುತೂಹಲಗಳು ಮತ್ತಷ್ಟು ಆಧಾರಗಳನ್ನು ಸಂಶೋಧಿಸುವ ಆಸಕ್ತಿಗೆ ದೂಡಿದವು. ಸಣ್ಣ ವಿಚಾರವಾದರೂ ಶಾಲೆಯ ವ್ಯವಸ್ಥೆಯೊಳಗೆ ಬಂದಾಗ ಏನೆಲ್ಲಾ ರೂಪಾಂತರಗೊಳ್ಳಬಹುದು ಅನ್ನುವುದಕ್ಕೆ ಸಾಕ್ಷ್ಯಗಳಾಗಿ ಕಂಡವು.

ನಡೆಸಿದ ಮೂರು ತರಬೇತಿಗಳಿಂದ ಈ ಯಶಸ್ಸು ಕಂಡಿತು ಅಂದರೆ ತಪ್ಪಾಗುತ್ತದೆ. ಕಲಿ ಕಲಿಸು ಕಾರ್ಯಕ್ರಮವನ್ನು ಶಾಲೆಗಳಿಗೆ ತಲುಪಿಸುವ ಕಾರ್ಯದಲ್ಲಿ ಸಂಸ್ಥೆಯ ಅನುದಾನವನ್ನು ಪಡೆದ ಶಿಕ್ಷಕರು ಹಾಗು ಕಲಾವಿದರ ಪಾತ್ರ ದೊಡ್ಡದು. ಇವರುಗಳ ಸಕಾರಾತ್ಮಕ ನಡೆಗೆ ಸಂಸ್ಥೆಯು ಆಭಾರಿಯಾಗಿದೆ. ಮೊದಲೆಲ್ಲಾ ವಿಭಾಗ ಮಟ್ಟದಲ್ಲಿ ನಡೆಯುತ್ತಿದ್ದ ಶಿಕ್ಷಕರ ತರಬೇತಿಗಳು ಜಿಲ್ಲಾ ಮಟ್ಟದಲ್ಲಿ ಬದಲಾಯಿತು. ಈ ಬದಲಾವಣೆಯು ಜಿಲ್ಲೆಯೊಂದರ ಸ್ಥಳೀಯ





ಸಂಪನ್ಮೂಲಗಳನ್ನು ಗುರುತಿಸುವಲ್ಲಿ ಸಹಕಾರಿಯಾದವು. ಹೊಸ ಹೊಸ ಜಾನಪದ ಕಥಾನಕಗಳು, ಐತಿಹ್ಯಗಳು, ಸಮುದಾಯಗಳ ವಿಷಯ ಜ್ಞಾನಪರಂಪರೆಗಳು, ವಿದ್ಯಾರ್ಥಿಗಳ ದಿನನಿತ್ಯದ ಅನುಭವಗಳ ಹಿನ್ನೆಲೆಯಲ್ಲಿ, ಶಾಲಾ ವ್ಯವಸ್ಥೆಯೊಳಗೆ ಹೇಗೆ ತರಬಹುದು ಅನ್ನುವುದಕ್ಕೆ ಗಟ್ಟಿಯಾದ ಕೊಂಡಿಗಳಾಗಿ ಕಂಡವು.

ಕಲಾ ಅಂತರ್ಗತ ಪ್ರಯೋಗಗಳಲ್ಲಿ ತೊಡಗಿಸಿಕೊಂಡಿದ್ದ ಹಲವಾರು ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳನ್ನು ಮಾತನಾಡಿಸುವ ಅವಕಾಶಗಳು ದೊರಕಿತು. ಆ ಘಮಲು ಪಟ್ಟಣದ ಶಾಲೆಗಳಲ್ಲಿ ಕಂಡಿಲ್ಲ. ಅವರ ಆತ್ಮಸ್ಥೈರ್ಯ, ಮಾತನಾಡುವ ಪರಿ ಹಾಗೂ ತಮನ್ನು ತಾವು ಪ್ರತಿನಿಧಿಸುವ ರೀತಿಗಳು ತಿದ್ದಿ ತೀಡಿ ಬೆಳಸಿದ 'ನಾಗರೀಕಾ' ವಿದ್ಯಾರ್ಥಿಗಳಂತಲ್ಲ. ಭಾಷೆಯ ಹಿಂಜರಿಕೆ ಅನ್ನುವುದನ್ನು ಬಿಟ್ಟರೆ ಅವರೆಲ್ಲ ಚೈತನ್ಯ ಮೂರ್ತಿಗಳು. ಆಶಾಜೀವಿಗಳು. ಕನಸುಗಳನ್ನು ಹುಟ್ಟು ಹಾಕುವವರು.

**ಎಷ್ಟು ಚಂದ ನಮ್ಮ ಸರ್ಕಾರಿ ಶಾಲೆಗಳು**

ಕಲೆಯನ್ನು ಅಭ್ಯಾಸ ಮಾಡುವುದು– ಶಿಕ್ಷಣದಲ್ಲಿ ಕಲೆಯನ್ನು ಬಳಸುವುದು – ಕಲೆಯನ್ನು ಸಂಯೋಜಿತೆಗೊಳಿಸುವುದು. ಎಲ್ಲದರ ವ್ಯಾಪ್ತಿಯೂ ಬೇರೆ ಬೇರೆಯೇ. ಪರಿಚಯಿಸುವಾಗ ಸ್ವಲ್ಪ ಎಚ್ಚರಿಕೆವಹಿಸದಿದ್ದಲ್ಲಿ ತಪ್ಪು ಸಂದೇಶ ರವಾನೆಯಾಗುವ ಅಪಾಯವು ಇದೆ. ಕಳೆದ ಹತ್ತು ವರ್ಷಗಳಲ್ಲಿ ಸಂಸ್ಥೆಯು ನಡಿಸಿದ ಕಲಾ ಸಂಯೋಜಿತ ಚಟುವಟಿಕೆಗಳು ಸರ್ಕಾರಿ ಶಾಲೆಗಳಲ್ಲಿ ಹೊಸ ಸಾಧ್ಯತೆಗಳನ್ನು ಹುಟ್ಟು ಹಾಕುತ್ತಿದೆ. ನಮ್ಮ ಪ್ರಯತ್ನದಲ್ಲಿ ಸಹಾಯ ಹಸ್ತವನ್ನು ಚಾಚಿದ ಇಲಾಖೆಯ ಎಲ್ಲ ಅಧಿಕಾರಿಗಳಿಗೂ, ಸಮುದಾಯದ ಪ್ರತಿನಿಧಿಗಳಿಗೂ ಹೃದಯ ಪೂರ್ವಕ ವಂದನೆಗಳು.





ಅವಲೋಕನ
**ರಾಧಿಕಾ ಭಾರದ್ವಾಜ್**
ಸಹಾಯಕ ಕಾರ್ಯಕ್ರಮ ಅಧಿಕಾರಿಗಳು
ಕಲಾಶಿಕ್ಷಣ
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಬೆಂಗಳೂರು

## ಕಲಾ ಸಂಯೋಜಿತ ತರಬೇತಿಗಳು ಮತ್ತು ಕಲಾಯಾತ್ರೆಗಳು 2018-19

ಕಲಿಕಲಿಸು' ಯೋಜನೆಯನ್ನು ಶಿಕ್ಷಣವಲಯಕ್ಕೆ ತಲುಪಿಸುವ ನಿಟ್ಟಿನಲ್ಲಿ ರಾಜ್ಯದ ಮೂರು ಜಿಲ್ಲೆಗಳಾದ ದಾವಣಗೆರೆ, ಕೋಲಾರ ಮತ್ತು ಮಧುಗಿರಿಯ ಪಾವಗಡದಲ್ಲಿ ಶಿಕ್ಷಕರ ಸನಿವಾಸ ತರಬೇತಿಗಳನ್ನು ಆಯೋಜಿಸಲಾಗಿತ್ತು. ಪ್ರತೀ ತರಬೇತಿಯಲ್ಲಿ ೫೦ಕ್ಕು ಹೆಚ್ಚು ಶಿಕ್ಷಕರು ಸಕ್ರಿಯವಾಗಿ ಭಾಗವಸಿ ಕಲಾಶಿಕ್ಷಣದ ಕುರಿತು ಪ್ರಶ್ನೆಗಳು ಹಾಗೂ ಚರ್ಚೆಗಳನ್ನು ನಡೆಸಿದರು. ೨೦೧೮-೧೯ರ ಮತ್ತೊಂದು ಕಾರ್ಯಕ್ರಮ 'ಕಲಾಯಾತ್ರೆ', ಹೊನ್ನಾವರ, ಹಳಿಯಾಳ, ಶಿವಮೊಗ್ಗ ಹಾಗೂ ಶಿಡ್ಲಘಟ್ಟ ಹೀಗೆ ನಾಲ್ಕು ಸ್ಥಳಗಳಲ್ಲಿ ಕಲಾಯಾತ್ರೆಗಳನ್ನು ಹಮ್ಮಿಕೊಳ್ಳಲಾಗಿತ್ತು. ನಮ್ಮ ಸಂಸ್ಥೆಯ ಅನುದಾನ ಪಡೆದ ಕೆಲವು ಶಿಕ್ಷಕರು ಹಾಗು ಕಲಾವಿದರು ಸಂಪನ್ಮೂಲವ್ಯಕ್ತಿಗಳಾಗಿ ಈ ನಾಲ್ಕು ಊರುಗಳ ೧೦ರಿಂದ೧೫ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ ಶಿಕ್ಷಕರಿಗೆ, ಮಕ್ಕಳಿಗೆ ಹಾಗು ಸುತ್ತ ಮುತ್ತಲಿನ ಸಮುದಾಯದವರಿಗೆ ಕಲಿಕಲಿಸು ಸುಯೋಜನೆಯ ಪರಿಚಯ ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಿದರು. ಈ ಕಾರ್ಯಕ್ರಮವು ಶಾಲೆಯಲ್ಲಿ ಕಲೆಯ ಮೂಲಕ ಕಲಿಕೆಯ ವಾತಾವರಣ ಸೃಷ್ಟಿಸಿತ್ತು ಎಂದರೆ ತಪ್ಪಲ್ಲ. ಈ ಕಲಾ ಸಂಯೋಜಿತ ತರಬೇತಿಗಳು ಹಾಗೂ ಕಲಾಯಾತ್ರೆಗಳು ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುಮೋದನೆಯಲ್ಲಿ ದಾಖಲಾದವು. ಕಲಾ ಅಂತರ್ಗತ ಕಲಿಕೆಯು ಏಕೆ? ಹೇಗೆ? ಮತ್ತು ಅದರ ಸಾಧ್ಯತೆಗಳೇನು ಅನ್ನುವ ಉದ್ದೇಶಗಳನ್ನು ಹೊಂದಿದ ಈ ಸನಿವಾಸ ತರಬೇತಿಗಳಲ್ಲಿ ಹಾಗೂ ಕಲಾಯಾತ್ರೆಗಳಲ್ಲಿ ಭಾಗವಹಿಸಿದ ಶಿಕ್ಷಕರ ಬೋಧನಾ ಕೌಶಲ್ಯಗಳಿಗೆ ಬದಲಾವಣೆಯ ಯೋಚನೆಗಳನ್ನು ಕಲ್ಪಿಸುವಲ್ಲಿ ಯಶಸ್ವಿಯಾಯಿತು. ಐ.ಎಫ್.ಎ ಸಂಸ್ಥೆಯ ಕಲಾಶಿಕ್ಷಣ ವಿಭಾಗದಡಿಯಲ್ಲಿ ಅನುದಾನ ಪಡೆದ ವಿವಿಧ ಕಲಾವಿದರು, ಶಿಕ್ಷಣ ತಜ್ಞರು, ಕಲಾ ಸಂಶೋಧಕರು, ಜಾನಪದ ತಜ್ಞರು, ರಂಗ ಕರ್ಮಿಗಳು ಹಾಗು ಶಿಕ್ಷಕರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ತಮ್ಮ ಕಾರ್ಯಕ್ಷೇತ್ರದ ಸಾಧ್ಯತೆಗಳ ಮೂಲಕ ಶಿಭಿರಾರ್ಥಿಗಳಿಗೆ ಕಲಾ ಅಂತರ್ಗತ ಕಲಿಕೆಯ ಸಂಪೂರ್ಣ ಪರಿಚಯ ಮಾಡಿಕೊಟ್ಟರು ಎಂಬುದು ಹೆಮ್ಮೆಯ ವಿಷಯ. ದಾವಣಗೆರೆ ತರಬೇತಿಯಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಕುರಿತಂತೆ ಶಿಕ್ಷಕರಲ್ಲಿ ಹೆಚ್ಚಿನ ಮಾಹಿತಿ ಇಲ್ಲದಿರುವುದು ಅನುಭವವಾಯಿತು. ಅವರನ್ನು ಪ್ರೋತ್ಸಾಹಿಸಲು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ರಾಜೀವಗೌಡರು, ಸ್ಥಳೀಯ ಜನಪದ ಗಣಿತ ತಜ್ಞರಾದ ಜೀವನಹಳ್ಳಿ ಸಿದ್ದಲಿಂಗಸ್ವಾಮಿಯವರ ಗಣಿತೀಯ ಭಾಷೆಯನ್ನು ಕುರಿತಂತೆ ವಿಶೇಷವಾಗಿ ಪರಿಚಯಿಸಿದರು. ಇನ್ನೂ ಪಾವಗಡ ತರಬೇತಿಯಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ಸಂಪನ್ಮೂಲವ್ಯಕ್ತಿಗಳಾಗಿ ಆಗಮಿಸಿದ ಚಂದ್ರಪ್ಪ ಸೊಬಟಿ ಹಾಗು ಜನಪದ ಕಲಾವಿದರಾದ ಮೋಹನಕುಮಾರ ಅವರು ಪಾವಗಡದ ಕಾಡುಗೊಲ್ಲರ ಜನಪದ ಪರಂಪರೆಯ ಹಾಡುಗಳನ್ನು ಹಂಚಿಕೊಂಡಿದ್ದು ಶಿಕ್ಷಕರಲ್ಲಿ ಕುತೂಹಲವನ್ನು ಹುಟ್ಟು ಹಾಕಿತು. ಈ ಕಾರ್ಯಕ್ರಮಗಳು ರಾಜ್ಯದ ಸರ್ಕಾರಿ ಶಾಲಾ ಶಿಕ್ಷಕರಿಗೆ ಶಾಲಾ ಕೊಠಡಿಯಲ್ಲಿ ತಾವು ಕೈಗೊಳ್ಳುವ ಕಲಾ ಶಿಕ್ಷಣದ ನೂತನ ಚಟುವಟಿಕೆಗಳನ್ನು ಬೇರೆ ಶಿಕ್ಷಕರೊಂದಿಗೆ ಹಂಚಿಕೊಳ್ಳಲು ಹಾಗೂ ಚರ್ಚಿಸಲು ಒಂದು ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ. ಈ ರೀತಿಯ ಕಾರ್ಯ ಯೋಜನೆಗಳು ನಿರಂತರವಾಗಿ ಮಕ್ಕಳ ಕಲಿಕಾ ಸಾಮರ್ಥ್ಯಗಳನ್ನು ಹೆಚ್ಚಿಸಲಿ ಹಾಗೂ ಅವರಲ್ಲಿ ಸೃಜನಶೀಲ ಚಿಂತನೆಯನ್ನು ಹುಟ್ಟು ಹಾಕಲಿ ಎಂಬುದು ನಮ್ಮ ಆಶಯ.

ಈ ನಮ್ಮ ಪ್ರಯತ್ನಕ್ಕೆ ಅನುವು ಮಾಡಿಕೊಟ್ಟ ದಾವಣಗೆರೆ, ಕೋಲಾರ, ಪಾವಗಡ, ಹೊನ್ನಾವರ, ಹಳಿಯಾಳ, ಶಿವಮೊಗ್ಗ ಹಾಗೂ ಶಿಡ್ಲಘಟ್ಟದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗೆ ಹಾಗು ಡಿ.ಎಸ್.ಇಆರ್.ಟಿ ಇಲಾಖೆಯ ಅಧಿಕಾರಿಗಳಿಗೆ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯ ಪರವಾಗಿ ಅನಂತ ಧನ್ಯವಾದಗಳು ಹಾಗೂ ಅಭಿನಂದನೆಗಳು.







## ಸಂಪಾದಕೀಯ

**ಡಾ. ನಿಂಗು ಸೊಲಗಿ**
ಮುಖ್ಯೋಪಾಧ್ಯಾಯರು
ಎಸ್.ಎಂ.ಬಿ. ಸ. ಹಿ. ಪ್ರಾ. ಶಾಲೆ,
ಮುಂಡರಗಿ ಜಿ. ಗದಗ
೯೪೪೮೬೪೦೨೧೩
ningusolagi@gmail.com

**ಕೊಟ್ರೇಶ ಬಿ.**
ಶಿಕ್ಷಕರು
ಸ. ಮಾ. ಹಿ. ಪ್ರಾ. ಶಾಲೆ, ಬೆಳಗುರ್ಕಿ
ತಾ. ಸಿಂಧನೂರ ಜಿ. ರಾಯಚೂರ
೮೩೧೦೦೨೯೯೪೭
kotreshbhavihalli@gmail.com

ಶಿಕ್ಷಕ ಬದಲಾವಣೆಯ ಕಾಲಘಟ್ಟಕ್ಕೆ ತಕ್ಕುದಾಗಿ ಅಭ್ಯಾಸ ಮತ್ತು ನಾವಿನ್ಯಯುತ ಪ್ರಯೋಗಗಳೊಂದಿಗೆ ತಾನೂ ಕಲಿತು ತನ್ನ ವಿದ್ಯಾರ್ಥಿಗಳಿಗೆ ಕಲಿಸಬೇಕು. ಇಂಥದೊಂದು ಪರಿಕಲ್ಪನೆಯೊಂದಿಗೆ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯು 'ಕಲಿ–ಕಲಿಸು' ಶೀರ್ಷಿಕೆಯಲ್ಲಿ ದೇಶದ ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ 'ಕಲಾ ಅಂತರ್ಗತ ಕಲಿಕೆ'ಯನ್ನು ಅನುಷ್ಠಾನಗೊಳಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮನ್ವಂತರಕ್ಕೆ ನಾಂದಿ ಹಾಡಿದೆ.

ಕಲಾ ಅಂತರ್ಗತ ಕಲಿಕೆಯೆಂದರೆ, ಸೂಕ್ತವಾದ ಕಲಾ ಮಾಧ್ಯಮವನ್ನು ಸಂರ್ಭಕ್ಕೆ ತಕ್ಕುದಾಗಿ ಅಳವಡಿಸಿಕೊಳ್ಳುತ್ತ; ಕಲೆಯೊಂದಿಗೆ ಕಲಿಕೆಯನ್ನು ಸಂಲಗ್ನಗೊಳಿಸಿ, ಒತ್ತಡದ ಕಲಿಕೆಯನ್ನು ಆಸಕ್ತಿದಾಯಕವಾಗಿಸುವುದು. ಇಂಥ ಆಸಕ್ತಿದಾಯಕ ಯೋಜನೆಯಲ್ಲಿ ವರ್ಷದಿಂದ ವರ್ಷಕ್ಕೆ ಶಿಕ್ಷಕರು ಮತ್ತು ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ನಾವಿನ್ಯಯುತ ಆಲೋಚನೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿ; ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಮೂಲಕ ಕಲಾ ಅಂತರ್ಗತ ಕಲಿಕೆಯನ್ನು ವಿಸ್ತರಿಸುತ್ತಿದ್ದಾರೆ.

೨೦೧೮–೧೯ ನೇ ಸಾಲಿನಲ್ಲಿ ಆರು ಜನ ಶಿಕ್ಷಕರು, ಎಂಟು ಜನ ಕಲಾವಿದರೂ ಹಾಗೂ ಒಂದು ಸಂಸ್ಥಾ ಯೋಜನೆ ಸೇರಿದಂತೆ ಹದಿನೈದು ಹೊಸ ಯೋಜನೆಗಳು ಅನುಷ್ಠಾನಗೊಂಡಿವೆ. ಇವುಗಳ ಸಂಕ್ಷೇಪ





ಪರಿಚಯದೊಂದಿಗೆ ಕಲಾ ಸಂಯೋಜಿತ ತರಬೇತಿಗಳು ಹಾಗೂ ಕಲಾ ಯಾತ್ರೆಗಳು ನಡೆದ ವರದಿಯನ್ನು, ಕುಪ್ಪಳಿಯಲ್ಲಿ ನಡೆದ 'ಮುಖಾ ಮುಖಿ' ಸಂವಾದ ಚರ್ಚೆ ವಿಚಾರ ಮಂಡಣೆಗಳ ಸಾರವನ್ನು, ಈ 'ಹೆಜ್ಜೆಗಳು ೨೦೧೮–೧೯'ರಲ್ಲಿ ಕಟ್ಟಿಕೊಡಲು ಪ್ರಯತ್ನಿಸಿದ್ದೇವೆ.

ಕೈಗೊಂಡ ಯೋಜನೆಗಳು ಒಂದಕ್ಕಿಂತ ಒಂದು ಭಿನ್ನವಾಗಿವೆ. ಶಿಕ್ಷಕರೊಬ್ಬರು ಅವಸಾನದ ಅಂಚಿನಲ್ಲಿರುವ ಗೊಂಬೆ ಕಲೆ ಬಳಸಿ 'ಗೊಂಬೆಯೊಂದಿಗೆ ಸುಲಭ ಪಾಠ' ಕಲಿಸಿದರೆ, ವಲಸಿಗರು ಹೋಗುವಾಗ ತಮ್ಮೊಟ್ಟಿಗೆ ರೂಢಿ, ಸಂಪ್ರದಾಯಗಳು, ಪದ್ಧತಿಗಳು ಹಾಗೂ ಸಂಸ್ಕೃತಿಗಳನ್ನು ತೆಗೆದುಕೊಂಡು ಹೋಗುವುದು ಹಾಗೂ ಸ್ಥಳೀಯತೆಗೆ ಒಗ್ಗಿಕೊಂಡು ಬದಲಾಗುವುದನ್ನು ಆಧಾರವಾಗಿಟ್ಟುಕೊಂಡು ಇತಿಹಾಸ ತಿಳಿಸಲು ಇನ್ನೊಬ್ಬ ಶಿಕ್ಷಕರು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಗಣಿತದಲ್ಲಿ 'ಸಂಖ್ಯಾ ಪ್ರಸಂಗ' ಕಟ್ಟಿ ಪ್ರದರ್ಶನ ನೀಡಿದ್ದಾರೆ. ಕೆರೆಯಂಗಳ ಕುರಿತು ಅಧ್ಯಯನ ನಡೆಸಿದ್ದಾರೆ.

ಸೃಜನಾತ್ಮಕ ಚಲನೆಯಿಂದ ಕೌಶಲ್ಯ ಪೂರ್ಣ ನಡೆ, ಕಲ್ಪನಾಶಕ್ತಿ, ಸೃಜನಶೀಲತೆ ಬೆಳೆಸುವುದು, ದೇಸಿ ಕಲೆಯ ಮುಖೇನ ಪತ್ಯದ ಅಭಿವ್ಯಕ್ತಿ, ಸೃಜನಾತ್ಮಕ ಓದು–ಬರಹ, ಜನಪದದಲ್ಲಿ ನೀರಿನ ಕುರಿತು ಇರುವ ಜಲಪದಗಳ ಮೂಲಕ ಕಲಿಕೆ, ಪ್ರೇಕ್ಷಕ ಸಮೂಹ ಹೇಳಿದ ಕತೆ ಮತ್ತು ಘಟನೆಗಳನ್ನು ತಕ್ಷಣವೇ ದೃಶ್ಯೀಕರಿಸಿ ಅಭಿಯಿಸುವ 'ಪ್ಲೇಬ್ಯಾಕ್ ಥಿಯೇಟರ್' ಭಾಷೆ ಹಾಗೂ ವಿಜ್ಞಾನಗಳ ಮೇಳೈಸುವಿಕೆಯೊಂದಿಗೆ ಹಕ್ಕಿಗಳ ಕುರಿತು ಸೃಜನಾತ್ಮಕ ಅಭಿವ್ಯಕ್ತಿಗೆ ಎಡೆಮಾಡಿಕೊಡುವ 'ಹಕ್ಕಿ ಹಾರುತಿದೆ ನೋಡಿದಿರಾ...' ಯೋಜನೆ, ಹೀಗೆ ಮಕ್ಕಳ ಸೃಜನಶೀಲತೆ ಪೋಷಿಸುವಲ್ಲಿ ಹಲವು ಯೋಜನೆಗಳು ನೆರವಾಗಿವೆ.

ಶಾಲೆಯ ಇತಿಹಾಸವನ್ನು ರಂಗ ಮುಖೇನ ಚಿತ್ರಿಸುವ 'ದಶಕ ಎಂಟು ದೃಶ್ಯ ಎಂಟು' ರಂಗಪ್ರದರ್ಶನ, ಮರದಚ್ಚು ಮುದ್ರಣದ ಮೂಲಕ ಬಹಮನಿ ಕಾಲದ ಕಲಾ ಇತಿಹಾಸ ಪರಿಚಯಿಸುವುದು, ಬಿ.ಜಿ.ಎಲ್. ಸ್ವಾಮಿಯವರ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕಾ' ಕೃತಿ ಬಳಸಿಕೊಂಡು ಆಹಾರ ಸಂಸ್ಕೃತಿಯ ಅರಿವು ಮೂಡಿಸುವುದು; ಆಪ್ತ ರಂಗಭೂಮಿ ಚಟುವಟಿಕೆ ಹೀಗೆ ಶಿಕ್ಷಕರು–ಕಲಾವಿದರು ತಮ್ಮದೇ ಕಲ್ಪನೆ ಆಲೋಚನೆಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವ ಮೂಲಕ ಕಲಿಕೆಯಲ್ಲಿ ಹೊಸತನ ತರಲು ಪ್ರಯತ್ನಿಸಿದ್ದಾರೆ. ಸಿರಸಿಯ ಚಂದನ ಶಾಲೆ ಸಂಸ್ಥಾ ಯೋಜನೆ ರೂಪಿಸಿ ಸ್ಥಳೀಯ ಜನಸಂಸ್ಕೃತಿಯ ಮಾದರಿಯಾಗಿರುವ ಜನಪದ ಗಣಿ ಹಾಲಕ್ಕಿ ಸುಕ್ರಿ ಬೊಮ್ಮಗೌಡರ ಜೀವನ ಕಥಾನಕವನ್ನು ಮಕ್ಕಳಿಗೆ ತೆರೆದಿಡುವ ಮೂಲಕ ನೆಲ ಸಂಸ್ಕೃತಿಯ ಹಿರಿಮೆಯನ್ನು ಮಕ್ಕಳಿಗೆ ತಿಳಿಯುವಂತೆ ಮಾಡಿದ್ದಾರೆ.

ವಿಶ್ವಾಸವಿಟ್ಟು ಈ ಎಲ್ಲ ಕಾರ್ಯಯೋಜನೆಗಳ ಪರಾಮರ್ಶೆಯೊಂದಿಗೆ ಪರಿಶೀಲಿಸಿ, ಈ ಕೃತಿಯ ಸಂಪಾದನೆಯ ಜವಾಬ್ದಾರಿ ವಹಿಸಿಕೊಟ್ಟ; ಐ.ಎಫ್.ಎ.ಗೆ ಅನಂತ ಕೃತಜ್ಞತೆಗಳು.



**ಮಧುಕರ್ ಎಂ. ಎಲ್.**
ಸಹಶಿಕ್ಷಕರುಸ.ಹಿ.ಪ್ರಾ ಶಾಲೆ
ಗುಂಬಳ್ಳಿ ಜಿ. ಚಾಮರಾಜನಗರ
9880390406
madhukaramalavalli@gmail.com

# ಗೊಂಬೆಯೊಂದಿಗೆ ಸುಲಭ ಪಾಠ

ಮಧುಕರ್ ಎಂ. ಎಲ್. ಇವರು ಚಾಮರಾಜ ನಗರ ಜಿಲ್ಲೆಯ ಗುಂಬಳ್ಳಿ ಸರಕಾರಿ ಪ್ರೌಢಶಾಲೆಯ ನಾಟಕ ಶಿಕ್ಷಕರು. ಶಿಕ್ಷಣದಲ್ಲಿ ರಂಗಭೂಮಿ ಚಟುವಟಿಕೆಗಳನ್ನು ಅಳವಡಿಸುವಲ್ಲಿ ಪ್ರಯೋಗಶೀಲರು. ಮಕ್ಕಳಲ್ಲಿ ಕಲಾ ಕೌಶಲ ಬೆಳೆಸುವ ಉದ್ದೇಶ ಹೊಂದಿರುವ ಮಧುಕರ್ ಅವರು ಪ್ರಸ್ತುತ 'ಗೊಂಬೆಯೊಂದಿಗೆ ಪಾಠ' ಯೋಜನೆ ಅನುಷ್ಠಾನಗೊಳಿಸಿದ್ದಾರೆ. ಗುಂಬಳ್ಳಿ ಪ್ರೌಢಶಾಲೆಯೊಂದಿಗೆ ಹತ್ತಿರದ ಮೂರು ಶಾಲೆಯಿಂದ ಮಕ್ಕಳು ಮತ್ತು ಶಿಕ್ಷಕರನ್ನು ತೊಡಗಿಸಿಕೊಂಡು ಕಾರ್ಯ ಪ್ರವೃತ್ತರಾಗಿದ್ದಾರೆ. ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಯಶಸ್ವಿಯಾಗಿ ರಂಗಶಿಬಿರಗಳನ್ನು ಸಂಘಟಿಸಿದ್ದಾರೆ. ಪಾಠಗಳನ್ನು ನಾಟಕವಾಗಿಸಲು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ದದರ್ಶನ ನೀಡಿದ್ದರಿಂದ ಮಕ್ಕಳೇ ಸ್ಕ್ರಿಪ್ಟ್ ತಯಾರಿಸಿದ್ದಾರೆ. ಮಕ್ಕಳು ಈ ರೀತಿ ಪಠ್ಯದ ಕತೆಗಳನ್ನು ಬೊಂಬೆಯಾಟಕ್ಕೆ ಪೂರಕವಾಗಿ ಕಲಾತ್ಮಕವಾಗಿ ಅಳವಡಿಸಿ, ಸ್ಕ್ರಿಪ್ಟ್ ತಯಾರಿಸಿ; ತಮ್ಮದೇ ಸ್ಕ್ರಿಪ್ಟ್‌ಗಳನ್ನು ಅಭಿನಯಿಸಿ ಆಡುತ್ತ-ಹಾಡುತ್ತ ಕಲಿಯುತ್ತಿದ್ದಾರೆ.



ಮಕ್ಕಳನ್ನು ಈ ಪ್ರಕ್ರಿಯೆಯಲ್ಲಿ ತೊಡಗಿಸಿರುವುದರಿಂದ ವಿದ್ಯಾರ್ಥಿಗಳಲ್ಲಿ ಬರೆಯುವ ಕೌಶಲದೊಂದಿಗೆ ಭಾಷಾ ಸಾಮರ್ಥ್ಯ ಹೆಚ್ಚಿದೆ. ಸೃಜನಾತ್ಮಕ ಚಿಂತನೆಗೆ ಅಣಿಗೊಳಸಲು ಸಾಧ್ಯವಾಗಿದೆ. ಮೌಖಿಕ ಸಂವಹನಾಭಿವ್ಯಕ್ತಿಯಲ್ಲಿ ಕೂಡ ಒಂದಷ್ಟು ಪ್ರಾವಿಣ್ಯತೆ ಪಡೆಯಲು ಸಾಧ್ಯವಾಗಿದೆ ಎನ್ನುತ್ತಾರೆ ಮಧುಕರ್.



ಬೊಂಬೆಯಾಟ ಮಕ್ಕಳಿಗೆ ಹೆಚ್ಚು ಮುದ ನೀಡುವ ಕಲೆ. ಅವರ ಅರಿವಿನ ಪರಿಧಿಯನ್ನು ವಿಸ್ತರಿಸುತ್ತಾ ಹೋಗುತ್ತದೆ. ಇದೊಂದು ಸಂಯುಕ್ತ ಕಲೆಯಾದ್ದರಿಂದ ಪ್ರತಿಯೊಂದು ಮಗುವು ತನಗೆ ಆಸಕ್ತಿ ಇರುವ ವಿಷಯದಲ್ಲಿ ಭಾಗವಹಿಸಬಹುದಾಗಿದೆ. ಶಿಕ್ಷಕ ಬೊಂಬೆ ಕಲಾವಿದ ಸಿದ್ದಪ್ಪ ಬಿರಾದಾರ, ಗಣೇಶ್ ನೀನಾಸಂ ಅವರೊಟ್ಟಿಗೆ ಸ್ಥಳಿಯ ಕಲಾವಿದರನ್ನು ಬಳಸಿಕೊಳ್ಳುವ ಮೂಲಕ ತರಬೇತಿ ನೀಡಿದ್ದಾರೆ. ಸಮುದಾಯ, ಶಿಕ್ಷಕರು ಮತ್ತು ಮಕ್ಕಳ ಸಮ್ಮುಖದಲ್ಲಿ ಪ್ರದರ್ಶನ ನೀಡುವ ಮೂಲಕ ಯೋಜನೆ ಸಮಾರೋಪಗೊಳ್ಳಲಿದೆ.



## ಬೊಂಬೆ ಹೇಳುತ್ತೈತೆ, ಇಲ್ಲಿ ಪಾಠ ಹೇಳುತ್ತೈತೆ

8ನೇ ತರಗತಿ ವಿದ್ಯಾರ್ಥಿಗಳಿಗೆ ತೊಗಲು ಗೊಂಬೆಗಳ ಮೂಲಕ ಪಾಠ ■ ಇದೊಂದು ವಿನೂತನ ಪ್ರಯತ್ನ

ಬೊಂಬೆ ತಯಾರಿಗೆ ಮೇಕೆಗಳ ಚರ್ಮ ಬಳಕೆ

> "ಬೊಂಬೆಯಾಟ ಶಿಕ್ಷಕನಿಗೆ ಮಕ್ಕಳ ವಿಶ್ವಾಸ ಸಾಧಿಸಲು ಮತ್ತು ಅವರ ಸ್ವಭಾವವನ್ನು ಅರಿತು ಅವರಲ್ಲಿ ಇರುಬಹುದಾದ ನಕಾರಾತ್ಮಕ ಗುಣಗಳನ್ನು ಗುರುತಿಸಿ ಸೂಕ್ತ ಮಾರ್ಗದರ್ಶನ ನೀಡಲು ಅನುಕೂಲಕರವಾಗಿದೆ."
> – ಮಧುಕರ್



**ಪ್ರಕಾಶ ಮೂಡಿತ್ತಾಯ**
ಸಹಶಿಕ್ಷಕರುಸ.ಹಿ.ಪ್ರಾ ಶಾಲೆ
ಪಾಪೆಮಜಲು. ದ.ಕನ್ನಡ.ಜಿಲ್ಲೆ
9449831600
moodisullia@gmail.com

# ಗಣಿತದಲ್ಲಿ ರಂಗಕಲೆ

ಕರ್ನಾಟಕ ಸರಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಜ್ಞಾನ ಮತ್ತು ಗಣಿತ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ ಕಾರ್ಯ ಮಾಡಿರುವ ಪ್ರಕಾಶ ಮೂಡಿತ್ತಾಯ ಇವರು ದಕ್ಷಿಣ ಕನ್ನಡ ಜಿಲ್ಲೆಯ ಪಾಪೆಮಜಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಜ್ಞಾನ ಮತ್ತು ಗಣಿತ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಯಕ್ಷಗಾನ ಮತ್ತು ರಂಗಭೂಮಿ ಕಲಾವಿದರೂ ಆಗಿದ್ದಾರೆ.

ವಿದ್ಯಾರ್ಥಿಗಳು ಸಾಮಾನ್ಯವಾಗಿ ಗಣಿತವನ್ನು ಕಠಿಣ ವಿಷಯವೆಂದು ಪರಿಗಣಿಸುತ್ತಾರೆ. ಈ ಮನಸ್ಥಿತಿಯನ್ನು ಬದಲಿಸಿ ನೆಚ್ಚಿನ ವಿಷಯವಾಗಿ ಒಪ್ಪಿಕೊಳ್ಳುವಂತೆ ಮಾಡಲು ಪ್ರಕಾಶ ಅವರು 'ಗಣಿತದಲ್ಲಿ ರಂಗಕಲೆ' ಯೋಜನೆ ಅನುಷ್ಠಾನಗೊಳಿಸಿದ್ದಾರೆ. ಈ ಯೋಜನೆಯಲ್ಲಿ ಪ್ರೌಢ ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಿ ಸಮಸ್ಯೆಗಳನ್ನು ಸರಳವಾಗಿ ಬಿಡಿಸುವ ಕಲೆಯನ್ನು ಅನುಲಕ್ಷಿಸಿ ಕೆಲಸ ಮಾಡಿದ್ದಾರೆ. ಯಕ್ಷಗಾನ- ತಾಳಮದ್ದಲೆ, ಏಕಪಾತ್ರಾಭಿನಯ ಮತ್ತು ಕರಕುಶಲ ಕಲೆಯೊಟ್ಟಿಗೆ ಹೊಂದಿಸಬಹುದಾದ ಪಠ್ಯಗಳನ್ನು ಆಯ್ಕೆ ಮಾಡಿಕೊಂಡು ಪ್ರಯೋಗ ಮಾಡಿದ್ದಾರೆ. ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ, ಹಲವು ಕಾರ್ಯಾಗಾರಗಳನ್ನು ಏರ್ಪಡಿಸುವ ಮೂಲಕ, ಗಣಿತದಲ್ಲಿನ ಆಸಕ್ತಿಯನ್ನು ಕೆರಳಿಸುವ ಪ್ರಯತ್ನ ಮಾಡಿದ್ದಾರೆ. 'ಗಣಿತ ನ್ಯಾಯಾಲಯುವೆಂಬ ನಾಟಕ,' ಹಾಗೂ ಸಂಖ್ಯಾಪದ್ಧತಿಯನ್ನು ಮಿಳಿತಗೊಳಿಸಿ ಪ್ರಯೋಗಿಸಿದ 'ಸಂಖ್ಯಾ ಪ್ರಸಂಗ', ಪ್ರದರ್ಶನಗಳು ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಸಮುದಾಯದ ಪ್ರತಿನಿಧಿಗಳನ್ನು ಹಾಗೂ ಪೋಷಕರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿವೆ.







ರಂಗಕಲೆಯ ತಂತ್ರಗಳನ್ನು ಸೂಕ್ತ ಪರಿಷ್ಕರಣೆಯ ಮೂಲಕ ತರಗತಿಗಳಲ್ಲಿ ಅಳವಡಿಸಿಕೊಳ್ಳಬಹುದು ಎಂಬುದು ಖಾತ್ರಿಯಾಯಿತು. ವರ್ಷವಿಡೀ ಮಕ್ಕಳು ಅತ್ಯಂತ ಕುತೂಹಲದಿಂದ ಭಾಗವಹಿಸುವ ಮೂಲಕ ಕಲಿಕೆ ಆಸಕ್ತಿದಾಯಕವೂ ಸಂತಸದಾಯಕವೂ ಆಯಿತು. ಗಣಿತೀಯ ಪರಿಕಲ್ಪನೆ ಮೂಡಿಸಲು ರಂಗಭೂಮಿ ಪರಿಣಾಮಕಾರಿ ಮಾಧ್ಯಮ ಎಂಬುದು ಶಿಕ್ಷಕರಿಗೆ ಮನವರಿಕೆಯಾಯಿತು. ಗಣಿತ ಕಲಿಕೆಯಲ್ಲೂ ಕಲೆಗಳನ್ನು ಪರಿಣಾಮಕಾರಿಯಾಗಿ ಅಂತರ್ಗತಗೊಳಬಹುದೆಂಬುದು ನನ್ನ ಈ ಪ್ರಯೋಗದಿಂದ ದೃಢಪಟ್ಟಿತು.

– ಪ್ರಕಾಶ ಮೂಡಿತ್ತಾಯ



ಮೈಮ್, ಅಭಿನಯಗೀತೆ, ಯಕ್ಷಗಾನ, ನಾಟಕಗಳಿಂದ ನಮಗೆ ಕಷ್ಟಕರ ಎನಿಸಿದ ಹಲವು ಲೆಕ್ಕಗಳಿಗೆ ಸುಲಭ ಪರಿಹಾರ ಕಂಡುಕೊಂಡಿದ್ದೇನೆ.
– ಪ್ರೀತಿ ಎಸ್. ಎಸ್. 8 ನೇ ತರಗತಿ



**ಅಣ್ಣಪ್ಪ ಎಚ್. ಒಂಟಮಾಳಗಿ**
ಸಹಶಿಕ್ಷಕರು, ಸ.ಹಿ.ಪ್ರಾ ಶಾಲೆ
ಆಲದಹಳ್ಳಿ ಜಿ. ಶಿವಮೊಗ್ಗ
9902235073
annappa.ontamaalagi@gmail.com

# ಕೆರೆಯಂಗಳದಿ ಬೆಳದಿಂಗಳು

ನಟರಾಗಿ ನಿರ್ದೇಶಕರಾಗಿ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು ಶಿಕ್ಷಕ ಅಣ್ಣಪ್ಪ ಎಚ್. ಒಂಟಮಾಳಗಿಯವರು. ಇವರು ಬೇಸಿಗೆ ಮತ್ತು ದಸರಾ ರಜೆಗಳಲ್ಲಿ ಮಕ್ಕಳಿಗಾಗಿ ಹಲವು ಶಿಬಿರಗಳನ್ನು ಆಯೋಜಿಸುತ್ತ ಬಂದಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಆಲದಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳನ್ನು ದೃಶ್ಯಾತ್ಮಕ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸುವ 'ಕೆರೆಯಂಗಳದಿ ಬೆಳದಿಂಗಳು' ಯೋಜನೆಯನ್ನು ಅನುಷ್ಠಾನಗೊಳಿಸಿದ್ದಾರೆ. ಶಿವಪ್ಪನಾಯಕರ ಕಾಲದಲ್ಲಿ ಶಿವಮೊಗ್ಗ ಜಿಲ್ಲೆ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ನಿರ್ಮಿಸಲಾಗಿರುವ ಕೆರೆಗಳನ್ನು ಕೇಂದ್ರವಾಗಿಟ್ಟುಕೊಂಡು ಚಟುವಟಿಕೆಗಳನ್ನು ರೂಪಿಸಿದ್ದಾರೆ. 'ಕೆರೆಯು ಪರಿಸರದ ಜೀವಿಗಳ ಜೀವಾಳಗಿದೆ' ಎಂಬುದನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಡಲು; ಕೆರೆಗಳ ಸಂದರ್ಶನ, ಕಥೆ-ಕವನ ರಚನೆ, ಚಿತ್ರಬರಹದೊಂದಿಗೆ ಮಕ್ಕಳನ್ನು ಈ ಕಾರ್ಯದಲ್ಲಿ ತೊಡಗಿಸಿದ್ದಾರೆ.

ವಿದ್ಯಾರ್ಥಿಗಳು ಶಿವಪ್ಪನಾಯಕರ ಕಾಲದ ಕೆರೆಗಳಿಗೆ ಭೇಟಿ ನೀಡಿ ಅವುಗಳ ಚಿತ್ರ-ನಕ್ಷೆಗಳನ್ನು ತಯಾರಿಸುವಂತೆ ಉತ್ತೇಜಿಸಿದ್ದಾರೆ. ಸಂಗ್ರಹಿಸಿದ ವಿಷಯಾಂಶಗಳನ್ನು ಮಕ್ಕಳೊಟ್ಟಿಗೆ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಜೊತೆಗೆ ಈ ಕೆರೆಗಳ ಕುರಿತಾದ ಕತೆ-ಕವಿತೆಗಳನ್ನು ಕಟ್ಟಲು ಪ್ರೋತ್ಸಾಹಿಸಿದ್ದಾರೆ. ಈ ಚಟುವಟಿಕೆಗಳು ವಿದ್ಯಾರ್ಥಿಗಳ ಕಲ್ಪನಾಶಕ್ತಿಯನ್ನು ಬೆಳೆಸುವ ಮೂಲಕ, ಪಠ್ಯದಲ್ಲಿನ ಪರಿಸರದ ಕುರಿತಾದ ವಿಷಯಗಳನ್ನು ಸುಲಭವಾಗಿ ಗ್ರಹಿಸಲು ಸಹಾಯ ಮಾಡಿವೆ. ಅಂತರ್ಜಲ ಸಂರಕ್ಷಣೆ ಮತ್ತು ಪ್ರಕೃತಿ ಚಕ್ರದ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ವಿಶೇಷ ತಜ್ಞ ಸಂಪನ್ಮೂಲ ವ್ಯಕ್ತಿಗಳ ನೆರವು ಪಡೆದುಕೊಂಡಿದ್ದಾರೆ. ಅಲ್ಲದೇ ವಿದ್ಯಾರ್ಥಿಗಳಿಗೆ ಈ ಕೆರೆಯ ಸುತ್ತಲಿನ ಪರಿಸರದ ಸ್ಥಳೀಯ ಕತೆಗಳು ಮತ್ತು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಸಂಗ್ರಹಿಸಿದ ಕತೆ, ಹಾಡು ಮತ್ತು ರೂಪಕಗಳನ್ನು ಸಮುದಾಯದ ಮಧ್ಯ ಪ್ರಸ್ತುತಪಡಿಸುವ ಮೂಲಕ ಕೆರೆಗಳ ಸಾಂಸ್ಕೃತಿಕ ನೆಲೆ ಹಾಗೂ ಸಾಮಾಜಿಕ ನೆಲೆಗಳನ್ನು ಪ್ರಚುರಪಡಿಸಲಿದ್ದಾರೆ.









ಕೆರೆಗಳ ನಿರ್ಮಾಣದ ಅನ್ವೇಷಣೆಯನ್ನು ಗುರಿಯಾಗಿಟ್ಟುಕೊಂಡು ನಡೆಸಿರುವ ಈ ಯೋಜನೆಯಲ್ಲಿ ಮಕ್ಕಳು ಕೆರೆಗಳ ಹಿನ್ನೆಲೆಯಲ್ಲಿನ ಸಾಂಸ್ಕೃತಿಕ ನೆಲೆಗಳನ್ನು, ಕೆರೆಗೆ ಹಾರ ಸೇರಿದಂತೆ ಕೆರೆಗೆ ಸಂಬಂಧಿಸಿದ ಹಾಡು, ರೂಪಕಗಳನ್ನು ಸಂಗ್ರಹಿಸಿ ಚರ್ಚಿಸಲು ಸಾಧ್ಯವಾಯಿತು. ನೀರಿನ ಮೂಲಗಳಾದ ಕೆರೆಗಳು ಜೀವ ಸಂಕುಲಗಳ ಆಶ್ರಯತಾಣ ಎಂಬುದನ್ನು ಮನವರಿಕೆ ಮಾಡಿಕೊಳ್ಳಲು ಈ ಯೋಜನೆ ಸಹಕಾರಿಯಾಯಿತು.

– ಅಣ್ಣಪ್ಪ



**ಎಂ. ಜೆ. ರಾಜೀವಗೌಡ**
ಸಹಶಿಕ್ಷಕರು, ಸ.ಹಿ.ಪ್ರಾ ಶಾಲೆ
ಚೀಮಂಗಲ ಚಿಕ್ಕಬಳ್ಳಾಪುರ ಜಿಲ್ಲೆ
9945408359
mjrajeev.gowda@gmail.com

# ವಲಸೆ ಅನುಬಂಧದ ಕಥೆ-ವ್ಯಥೆ

ರಾಜೀವಗೌಡರು ಮೂರು ದಶಕದ ವೃತ್ತಿ ಅನುಭವ ಹೊಂದಿರುವ ಕ್ರಿಯಾಶೀಲ ಶಿಕ್ಷಕರು. ಇವರು ಕರ್ನಾಟಕ ಶಿಕ್ಷಣ ಇಲಾಖೆಯ ಗಣಿತ ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರಾಗಿಯೂ ಕಾರ್ಯ ಮಾಡಿದ್ದಾರೆ. ಇವರು 'ಸಮಾನಾಂತರ ನೆಲೆಗಳಲ್ಲಿ ಇತಿಹಾಸದ ಮರು ಅಧ್ಯಯನ' ವಿಷಯವಾಗಿ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿದ್ದಾರೆ.


ಸದ್ಯದ ಅವಶ್ಯಕತೆಗಾಗಿಯೋ ಅಥವಾ ಉತ್ತಮ ಜೀವನವನ್ನು ಅರಸಿಯೋ ಜನರು ವಲಸೆ ಹೋಗುವುದು ಹಿಂದಿನಿಂದಲೂ ನಡೆದು ಬಂದಿದೆ. ಈ ವಲಸೆಯು ಅವರ ಮೂಲ ಸ್ಥಳ ಮತ್ತು ನೆಲೆ ನಿಲ್ಲುವ ಸ್ಥಳ ಎರಡೂ ಕಡೆಗೆ ಸಮಾಜ ಮತ್ತು ಪರಿಸರಗಳ ಮೇಲೆ ಪ್ರಭಾವ ಬೀರುತ್ತವೆ. ಜನರು ಪರ್ವತಗಳು, ನದಿಗಳು ಹಾಗೂ ಮರಭೂಮಿಗಳಂತಹ ಪ್ರಾಕೃತಿಕ ಗಡಿಗಳನ್ನು, ರಾಜ್ಯಗಳ ರಾಜಕೀಯ ಗಡಿಗಳನ್ನೂ ದಾಟಿದ್ದಾರೆ. ಒಂಟಿಯಾಗಿ ಅಥವಾ ಒಂದು ಕುಟುಂಬವಾಗಿ ಅಥವಾ ಒಂದು ಸಮುದಾಯವಾಗಿಯೂ ವಲಸೆ ಹೋಗಿದ್ದಾರೆ. ಹೋಗುವಾಗ ತಮ್ಮೊಟ್ಟಿಗೆ ತಮ್ಮ ಹವ್ಯಾಸಗಳು, ಪದ್ಧತಿಗಳು ಹಾಗೂ ಸಂಸ್ಕೃತಿಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಹಾಗಾಗಿ ಮಕ್ಕಳು ಈ ಯೋಜನೆಯ ಮೂಲಕ, ಚೀಮಂಗಲ ಗ್ರಾಮದ ತಮ್ಮ ಸಮುದಾಯಗಳ ಮೇಲೆ ಗಮನ ಹರಿಸಿ ಕಾರ್ಯ ಮಾಡುತ್ತಿದ್ದಾರೆ. ತಮ್ಮ ಸಮುದಾಯದ ಹಿರಿಯರ ಜೊತೆಗಿನ ಸಂದರ್ಶನಗಳ ಮೂಲಕ ತಮ್ಮದೇ ವಲಸೆಯ ಕತೆಗಳನ್ನು ಕೇಳಿ, ಆ ವಲಸೆಗಳ ಭೌಗೋಳಿಕ ನಕ್ಷೆ ತಯಾರಿಸಿದ್ದಾರೆ. ಈ ವಲಸೆಯ ಕತೆಗಳು ರಾಜ್ಯ ಮತ್ತು ದೇಶಗಳ ಇತಿಹಾಸಗಳಲ್ಲಿ ತಮ್ಮ ವೈಯಕ್ತಿಕ ಮತ್ತು ಸಮುದಾಯದ ಅಸ್ತಿತ್ವಗಳ ಕುರಿತು ಯೋಚಿಸಲು ಸಹಾಯ ಮಾಡುತ್ತವೆ. ಈ ಕತೆಗಳು ಮತ್ತು ನಕ್ಷೆಗಳ ಸಂಕಲನವೊಂದು ಈ ಯೋಜನೆಯಿಂದ ಹೊರಬರಲಿದೆ.











ಕುಟುಂಬಗಳ ಇತಿಹಾಸ, ಅವುಗಳ ವಲಸೆಯ ಕತೆಗಳು ಮತ್ತು ಅವುಗಳಿಂದ ಸ್ಥಳೀಯ ಇತಿಹಾಸದ ಮೇಲಿನ ಪ್ರಭಾವವನ್ನು ಈ ಯೋಜನೆಯಲ್ಲಿ ಅಭ್ಯಸಿಸುವ ಗುರಿ ಹೊಂದಿ ಅನುಷ್ಠಾನಗೊಳಿಸಿದ್ದಾರೆ.

– ರಾಜೀವಗೌಡ



**ಭಾರತಿ ಎ.**
ಸಹಶಿಕ್ಷಕರು, ಸ.ಕಿ.ಪ್ರಾ ಶಾಲೆ
ಸಣ್ಣಕೆರೆ ಜಿ. ಚಿಕ್ಕಮಗಳೂರು
9480531141
bharathikoppa101@gmail.com

# ಸೃಜನಾತ್ಮಕ ಓದು-ಬರಹ

ಭಾರತಿಯವರು ಚಿಕ್ಕಮಗಳೂರು ಜಿಲ್ಲೆಯ ಸಣ್ಣಕೆರೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿದ್ದಾರೆ. ಪ್ರಸ್ತುತ ಮಕ್ಕಳಲ್ಲಿ ಸೃಜನಾತ್ಮಕ ಬರವಣಿಗೆಯ ಕೌಶಲ ರೂಢಿಸುವ ಉದ್ದೇಶದಿಂದ ಯೋಜನೆ ರೂಪಿಸಿದ್ದು ಕೌಶಲ ಪೂರ್ಣ ಓದು ಮತ್ತು ಬರವಣಿಗೆ ಸಾಧಿಸಲು ಸಮುದಾಯದ ಸಹಭಾಗಿತ್ವದಲ್ಲಿ ಯೋಜನೆ ಅನುಷ್ಠಾನಗೊಳಿಸಿದ್ದಾರೆ. ಅಂತೆಯೇ ಕೊಪ್ಪ ಸುತ್ತಲಿನ ಪರಿಸರದ ಕಥೆಗಳನ್ನು ಮಕ್ಕಳಿಗೆ ಹೇಳಿಕೊಡುವುದಲ್ಲದೇ ಓದಿ ತಿಳಿಯುವಂತೆ ಪ್ರೋತ್ಸಾಹಿಸಿದ್ದಾರೆ. ಈ ಕಥೆಗಳ ಕುರಿತಾಗಿ ಅನುಭವ ಹಂಚಿಕೊಳ್ಳಲು, ಅಭಿಪ್ರಾಯಗಳನ್ನು ಮುಕ್ತವಾಗಿ ಬರಹದ ಮೂಲಕ ದಾಖಲಿಸಿಕೊಳ್ಳಲು ಪ್ರೋತ್ಸಾಹಿಸಲಾಗಿದೆ.

"ಯಾವದೇ ಮಾಹಿತಿ ಹಾಗೂ ಯಾರದೋ ಆಲೋಚನೆಗಳನ್ನು ಯಥಾವತ್ತಾಗಿ ದಾಖಲಿಸಿಟ್ಟುಕೊಳ್ಳುವುದಕ್ಕೆ ಸೀಮಿತಗೊಳಿಸದೇ ತನ್ನದೇ ಆಲೋಚನೆ ಅಭಿಪ್ರಾಯಗಳನ್ನು ತನ್ನದೇ ಸ್ಥಳೀಯ ಭಾಷೆಯಲ್ಲಿ ಚಿಕ್ಕದಾಗಿ ಚೊಕ್ಕದಾಗಿ ನಿರ್ಬಂಧರಹಿತವಾಗಿ ಬರಹದ ಮೂಲಕ ಅಭಿವ್ಯಕ್ತಿಸಲು ಅವಕಾಶ ಮಾಡಿಕೊಡಬೇಕು" ಎಂಬುದು ಭಾತಿಯವರ ನಿಲುವು.

ಇದಕ್ಕಾಗಿ ಆರಂಭದಲ್ಲಿ ಒಂದರಿಂದ ಐದನೆಯ ತರಗತಿಯ ವಿದ್ಯಾರ್ಥಿಗಳಿಗೆ ತಮ್ಮ ಸುತ್ತಲಿನ ಸಮುದಾಯದಿಂದ ಸ್ಫೂರ್ತಿದಾಯಕವಾದ ಅಭಿಪ್ರಾಯ ಆಲೋಚನೆಗಳನ್ನು ಅರಸುವಂತೆ ತೊಡಗಿಸಿಕೊಂಡಿದ್ದಾರೆ. ಸಮುದಾಯದ ಆಹಾರ ಪದ್ಧತಿ ಮತ್ತು ತಯಾರಿಕಾ ವಿಧಾನ ಮುಂತಾದವುಗಳ ಕುರಿತಾದ ಕತೆಗಳು, ಜನರ ಅನುಭವದ, ಸಂಸ್ಕೃತಿ ಮತ್ತು ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ವೈಯಕ್ತಿಕ ಕತೆಗಳು, ವಾಸ್ತವದ ಕತೆಗಳು ಹೀಗೆ ವೈವಿಧ್ಯತೆಯಿಂದ ಕೂಡಿದ ಕತೆಗಳನ್ನು ಅರಿಯುವಲ್ಲಿ ಮಕ್ಕಳನ್ನು ಪ್ರೋತ್ಸಾಹಿಸಿದ್ದಾರೆ. ಈ ಮೂಲಕ, ಮಕ್ಕಳ



ಕಲಿ-ಕಲಿಸು
ಹೆಜ್ಜೆಗಳು

ಸೃಜನಶೀಲತೆ ಮತ್ತು ಕಲ್ಪನಾಶಕ್ತಿಯನ್ನು ಬೆಳೆಸಿ, ಅವರ ಹಿಂದಿನ ಜ್ಞಾನವನ್ನು ಹೊಸ ಹುಡುಕಾಟಗಳೊಂದಿಗೆ ರೂಪಾಂತರಗೊಳಿಸಲು ಪ್ರಯತ್ನಿಸಲಾಗಿದೆ. ಯೋಜನೆಯ ಅನುಷ್ಠಾನದಿಂದಾಗಿ ಮಕ್ಕಳು ವಿಮರ್ಶಾತ್ಮಕವಾಗಿ ಯೋಚಿಸುತ್ತಿದ್ದಾರೆ. ಈ ಮೂಲಕ ಮಕ್ಕಳಲ್ಲಿ ತಮ್ಮ ಪಠ್ಯಪುಸ್ತಕದ ಇತಿಹಾಸ, ಮತ್ತು ಸಂಸ್ಕೃತಿಗಳ ಕುರಿತು ವಿಮರ್ಶಿಸುವ ಗುಣ ಬೆಳೆಸಿಕೊಳ್ಳುತ್ತಿದ್ದಾರೆ.

ಈ ಯೋಜನೆಯ ಪ್ರಕ್ರಿಯೆಯು, ಮಾಸಿಕ ಭಿತ್ತಿ ಚಿತ್ರದ ಪ್ರಕಟಣೆ ಮತ್ತು ಸಹ ಶಿಕ್ಷಕರನ್ನು ಶಿಕ್ಷಣದಲ್ಲಿ ಕಲೆಯನ್ನು ಬಳಸುವಂತೆ ಹುರುದುಂಬಿಸುವ ಕಾರ್ಯಗಳನ್ನು ಒಳಗೊಂಡಿದ್ದು; ಅಂತಿಮವಾಗಿ ಮಕ್ಕಳ ಬರಹಗಳನ್ನು ಒಳಗೊಂಡ ಒಂದು ಕೃತಿಯು ಹೊರಬರಲಿದೆ.







**ಕಿಶನ್‌ರಾವ್ ಕುಲಕರ್ಣಿ**
ಸಹಶಿಕ್ಷಕರು, ಸರ್ಕಾರಿ ಪದವಿ ಪೂರ್ವ
ಕಾಲೇಜು (ಪ್ರೌಢಶಾಲಾ ವಿಭಾಗ)
ಹನುಮಸಾಗರ ಜಿ. ಕೊಪ್ಪಳ
9448693998
kishanraokulkarni2@gmail.com

# ಜಲಪದ ಜನಪದ

ಕೊಪ್ಪಳ ಜಿಲ್ಲೆಯ ಹನುಮಸಾಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಸಮಾಜ ವಿಜ್ಞಾನ ಶಿಕ್ಷಕರಾಗಿರುವ ಕಿಶನ್ ರಾವ್ ಸಂವೇದನಾಶೀಲ ಲೇಖಕರು. ಜಲ ಸಂರಕ್ಷಣೆಯ ಕುರಿತು ವಿದ್ಯಾರ್ಥಿಗಳಲ್ಲಿ ಮತ್ತು ಸಮುದಾಯದಲ್ಲಿ ಅರಿವು ಮೂಡಿಸಲು **'ಜಲಪದ ಜನಪದ'** ಯೋಜನೆ ರೂಪಿಸಿ ಅನುಷ್ಠಾನಗೊಳಿಸುತ್ತಿದ್ದಾರೆ.

ಈ ಯೋಜನೆಗೆ ಎಂಟನೇ ತರಗತಿಯ ವಿದ್ಯಾರ್ಥಿಗಳನ್ನು ತೊಡಗಿಸಿಕೊಂಡಿದ್ದಾರೆ. ಸಾಂಪ್ರದಾಯಿಕ ಜಲ ನಿರ್ವಹಣಾ ಪದ್ಧತಿಗಳನ್ನು ಹುಡುಕಿ ದಾಖಲೀಕರಿಸುವುದು, ನೈಸರ್ಗಿಕವಾಗಿರುವ ಜನ ಮತ್ತು ಜಲದ ನಡುವಿನ ಸಂಬಂಧದ ಕುರಿತು ಅರಿಯುವುದು ಈ ಯೋಜನೆಯ ಉದ್ದೇಶವಾಗಿದೆ. ಹಾಗಾಗಿ ನೀರಿಗೆ ಸಂಬಂಧಿಸಿದಂತೆ ಜೋಕುಮಾರ, ಗುಳ್ಳವ್ವ ಮೊದಲಾದ ಜನಪದ ಕತೆಗಳು, ನಂಬಿಕೆಗಳು, ಲಾವಣಿ, ರಿವಾಯಿತಿ, ಡೊಳ್ಳಿನ ಪದಗಳು, ಮೊದಲಾದ ಸಾಹಿತ್ಯವನ್ನು ಮಕ್ಕಳಿಗೆ ಸಂಗ್ರಹಿಲು ಪ್ರೇರೇಪಿಸಿದ್ದಾರೆ. ಇದಲ್ಲದೇ ಮಕ್ಕಳು ತಾವೇ ಸ್ವತಃ ಈ ಬಗ್ಗೆ ಕತೆ ಕವಿತೆಗಳನ್ನು ಬರೆದಿದ್ದಾರೆ. ಕಲ್ಯಾಣ ಕರ್ನಾಟಕದ ಪ್ರದೇಶಗಳಲ್ಲಿ ಮಳೆನೀರಿನ ದೇವತೆಯೆಂದು ನಂಬಿರುವ ಗುಳ್ಳವ್ವನ ಕುರಿತು ಸಾಂಸ್ಕೃತಿಕ ಅರಿವು ಪಡೆದಿದ್ದಾರೆ. ಜಲ ಸಂರಕ್ಷಣೆಯ ಹಳೆಯ ಪದ್ಧತಿಗಳನ್ನು ಅರಿತಿದ್ದಾರೆ. ಈ ಯೋಜನೆಯ ಫಲಶ್ರುತಿಯಾಗಿ ಸಮುದಾಯದ ಸಮ್ಮುಖದಲ್ಲಿ ಪ್ರದರ್ಶನ ನಡೆಯುವುದಲ್ಲದೆ ಅಂತಿಮವಾಗಿ ಕೃತಿಯೊಂದನ್ನು ಪ್ರಕಟಿಸಲಾಗುತ್ತಿದೆ.



ಕಲಿ-ಕಲಿಸು
ಹೆಜ್ಜೆಗಳು

'ಕಲಿ–ಕಲಿಸು ಯೋಜನೆ ಆರಂಭವಾದಾಗಿನಿಂದ ಶಾಲೆಯಲ್ಲಿ ಒಂದು ಸಂತಸದ ಬೆಳಕು ಕಾಣುತ್ತಿದೆ. ವಿದ್ಯಾರ್ಥಿಗಳಲ್ಲಿ ಕಲಿಕಾ ಆಸಕ್ತಿ ಇಮ್ಮಡಿಸಿದೆ. ಹಾಜರಾತಿ ಉತ್ತಮವಾಗಿದೆ. ಒಟ್ಟಾರೆ ಮಕ್ಕಳಲ್ಲಿ ಲವಲವಿಕೆ ತುಂಬಿದೆ".

– ಮಹಾಂತೇಶ ಅರಳಿ, ಹಿರಿಯ ಶಿಕ್ಷಕರು.



"ಪ್ರೌಢ ಶಾಲೆಗೆ ಬಂದಿದ್ದರೂ ಬಹುತೇಕ ಮಕ್ಕಳಿಗೆ ಓದು ಬರಹ ಅಷ್ಟಕ್ಕಷ್ಟೇ. ಯಾವಾಗ ಮಕ್ಕಳನ್ನು ಈ ಯೋಜನೆಯಲ್ಲಿ ತೊಡಗಿಸಿಕೊಂಡರೋ ಆಗ ಸಾಹಿತ್ಯ ಸಂಗ್ರಹಿಸುವ, ಸಂದರ್ಶನದಲ್ಲಿ ಪ್ರಶ್ನೆಕೇಳುವ, ವೇಗವಾಗಿ ಉತ್ತರ ಬರೆದುಕೊಳ್ಳುವ, ಮಾತನಾಡುವ, ಮತ್ತೊಬ್ಬರನ್ನು ಪ್ರಶ್ನಿಸುವಾಗ ಗಂಭೀರತೆ ತೋರುವ, ಗಮನವಿಟ್ಟು ಆಲಿಸುವ ಸಾಮರ್ಥ್ಯ ಹೆಚ್ಚುತ್ತ ಹೋಯಿತು. ಈಗೀಗ ಮಕ್ಕಳ ಪಾಲಕರು ತಮ್ಮ ಮಗುವಿನ ನುಡುವಳಿಕೆಯಲ್ಲಿ ಆದ ಬದಲಾವನೆ ಕಂಡು ಹೆಮ್ಮೆ ಪಡುತ್ತಿದ್ದಾರೆ".

– ಕಿಶನ್ ರಾವ್





**ಕಾವ್ಯ ಸಿ.**
ನೃತ್ಯ ಕಲಾವಿದರು
ಬೆಂಗಳೂರು
9972944186
kavyac2112@gmail.com

# ಸೃಜನಾತ್ಮಕ ಚಲನೆ

ಬೆಂಗಳೂರಿನಲ್ಲಿ ಇಂಚರ ಕಲಾನಿಕೇತನ ಎಂಬ ನೃತ್ಯ ಶಾಲೆಯನ್ನು ನಡೆಸುತ್ತಿರುವ ಕಾವ್ಯ ಸಿ. ಭರತನಾಟ್ಯ ಸಂಗೀತ ಹಾಗೂ ರಂಗಭೂಮಿ ಕಲಾವಿದರಾಗಿದ್ದಾರೆ. ಸೃಜನಾತ್ಮಕ ಚಲನೆಯ ತಜ್ಞೆಯಾಗಿಯೂ (Creative Movement specialist) ಕಾರ್ಯನಿರ್ವಹಿಸುತ್ತಿದ್ದಾರೆ.

ಇವರು 'ಮಕ್ಕಳ ಸಂತಸದಾಯಕ ಕಲಿಕಾ ಮಾರ್ಗವಾದ ಸಂಗೀತ, ನೃತ್ಯ, ನಾಟಕ ಮೊದಲಾದ ಸೃಜನಶೀಲ ಚಲನೆಗಳಿಂದ ದೈಹಿಕ ಕೌಶಲಗಳ ಅಭಿವೃದ್ಧಿ ಹಾಗೂ ಕಲ್ಪನಾ ಶಕ್ತಿ ಉತ್ತೇಜಿಸಿ ಪ್ರೋತ್ಸಾಹಿಸುವ ಅನ್ವೇಷಣಾ ಕಾರ್ಯಯೋಜನೆ' ಹಮ್ಮಿಕೊಂಡಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿಡದಿ ಸಮೀಪದಲ್ಲಿನ ಕರೇನಹಳ್ಳಿ ಗ್ರಾಮದ ಮುದ್ದಾಪೂರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ೪ ಮತ್ತು ೫ನೇ ತರಗತಿ ವಿದ್ಯಾರ್ಥಿಗಳನ್ನು ಈ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

"ಮಕ್ಕಳಿಗೆ ದೈಹಿಕವಾಗಿ ಅಭಿವೃದ್ಧಿ ಹೊಂದಲು ಹಾಗೂ ಅವರ ಸೃಜನಶೀಲ ಶಕ್ತಿಯನ್ನು ಬೆಳಸಿಕೊಳ್ಳಲು ಉತ್ತೇಜಿಸಿ ಕ್ರಮಬದ್ಧ ದಾರಿಯಲ್ಲಿ ಕರೆದೊಯ್ಯಲು ಆನಂದದಾಯಕವಾದ ಮಾರ್ಗ ಇದಾಗಿದೆ" ಎನ್ನುತ್ತಾರೆ. ದೈಹಿಕ ಕೌಶಲಗಳನ್ನು ಬಳಸಿಕೊಂಡು ಮಕ್ಕಳ ಕಲ್ಪನೆ ಮತ್ತು ಭಾವನೆಗಳನ್ನು ಹೊಂದಾಣಿಕೆ ಮಾಡಲು ಈ ಯೋಜನೆ ಸಹಕಾರಿಯಾಗಿದೆ. ಕಾವ್ಯ, ಈ 'ಸೃಜನಾತ್ಮಕ ಚಲನೆ' ಯೋಜನೆಯನ್ನು ಭಾಷೆ ಹಾಗೂ ವಿಜ್ಞಾನ ಪಠ್ಯದೊಂದಿಗೆ ಜೋಡಿಸುವ ಕಾರ್ಯ ಮಾಡಿದ್ದಾರೆ.

ಕಾವ್ಯ ಅವರು ಈ ದೆಸೆಯಲ್ಲಿ ಪಾಲಕ, ವಿದ್ಯಾರ್ಥಿ ಹಾಗೂ ಶಿಕ್ಷಕ ವರ್ಗದವರಿಗೆ ಕಾರ್ಯಾಗಾರಗಳನ್ನು ನಡೆಸಿದ್ದಾರೆ. ಈ ಯೋಜನೆಯ ಅನುಷ್ಠಾನದಿಂದಾಗಿ ವಿದ್ಯಾರ್ಥಿಗಳಿಂದ ಹಲವು ನೃತ್ಯ, ರೂಪಕ, ನಾಟಕಗಳು ನಿರ್ಮಾಣಗೊಂಡು ಸಮುದಾಯ ಮತ್ತು ಶಿಕ್ಷಕರ ಸಮ್ಮುಖದಲ್ಲಿ ಪ್ರದರ್ಶನಗೊಳ್ಳಲಿವೆ.







"ಮಕ್ಕಳಲ್ಲಿ ಸೃಜನ ಚಲನೆಯಿಂದ ಕೌಶಲ್ಯ ಪೂರ್ಣ ನಡೆ, ಕಲ್ಪನಾಶಕ್ತಿ, ಸ್ವ ಅಭಿವ್ಯಕ್ತಿ, ಸೃಜನಶೀಲತೆ ಹೆಚ್ಚು ಎತ್ತರಕ್ಕೇರಲ್ಪಡುತ್ತದೆ"

– ಕಾವ್ಯ.



"ಸೃಜನ ಚಲನೆ ಅಭ್ಯಾಸದಿಂದ ನಾನು ಬಹಳಷ್ಟು ಕಲಿತೆ. ಸಂಗೀತ, ನೃತ್ಯ, ಆಕ್ಟಿಂಗ್, ಕ್ರಾಫ್ಟ್ ಮೊದಲಾದ ಚಟುವಟಿಕೆಗಳ ಮೂಲಕ ನನ್ನ ಪಠ್ಯ ವಿಷಯ ಕಲಿಕೆಯೂ ಸಂತಸದಾಯಕ ಹಾಗೂ ಸುಲಭವೆನಿಸಿತು".

– ಲಿಖಿತಾ, 7ನೇ ತರಗತಿ, ಎಂ. ಕರೇನಹಳ್ಳಿ.



**ಸಂತೋಷ ದಿಂಡಗೂರು**
ರಂಗಭೂಮಿ ಕಲಾವಿದರು
ಹಾಸನ ಜಿಲ್ಲೆ
7259868690
santhoshninasam@gmail.com

# ದೇಸಿ ಕಲೆಯ ಮುಖೇನ ಪಠ್ಯದ ಅಭಿವ್ಯಕ್ತಿ

ರಂಗಭೂಮಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವ ಸಂತೋಷ್ ಡಿ. ಇವರು ಚನ್ನರಾಯಪಟ್ಟಣ ತಾಲೂಕಿನ ದಿಂಡಗೂರು ಗ್ರಾಮದವರು. 'ನೀನಾಸಂ'ದ ಡಿಪ್ಲೊಮಾ ಪದವೀಧರರು. ಗ್ರಾಮೀಣ ಕಲೆಯಾದ ಸೋಮನ ಕುಣಿತದ ಗಂಭೀರ ಅಭ್ಯಾಸಿಗರಾಗಿರುವ ಇವರು, ಪ್ರಸ್ತುತ ಸೋಮನ ಕುಣಿತದ ಪ್ರಕ್ರಿಯೆಯಲ್ಲಿ ಶಾಲಾ ಪಠ್ಯವನ್ನು ಮಿಳಿತಗೊಳಿಸಿ ವ್ಯಾಖ್ಯಾನಿಸುವ ಪ್ರಯತ್ನ ಮಾಡಿದ್ದಾರೆ.

ಈ ಪ್ರಯೋಗಕ್ಕೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ದಿಂಡಗೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ೪ ರಿಂದ ೭ನೇ ತರಗತಿಯ ೩೦ವಿದ್ಯಾರ್ಥಿಗಳನ್ನು ಆಯ್ಕೆಮಾಡಿಕೊಂಡಿದ್ದಾರೆ. ಸೋಮನ ಕುಣಿತವು ಒಂದು ಸಾಂಪ್ರದಾಯಿಕ ಆಚರಣೆ ಹಿನ್ನೆಲೆಯ ಪ್ರದರ್ಶನ ಕಲೆಯಾಗಿದ್ದು; ಎರಡು ಮೂರು ಕಲಾವಿದರು ವಿಸ್ತಾರವಾದ ಕೆಂಪು, ನೀಲಿ ಹಾಗೂ ಹಳದಿ ಬಣ್ಣದ ಮುಖವಾಡಗಳನ್ನು ಧರಿಸಿಕೊಂಡು; ರಾಗ, ತಾಳ ಲಯಗಳಿಗೆ ಬದ್ಧವಾಗಿ ವಾದ್ಯ ಸಂಯೋಜನೆಯನ್ನನುಸರಿಸಿ ಕುಣಿಯುತ್ತಾರೆ. ಸಂತೋಷ್ ಅವರು ಇದನ್ನೊಂದು ಅಪ್ಪಟ ಕಲಾ ಪ್ರಕಾರವಾಗಿ ಸ್ವೀಕರಿಸಿ; ಮಕ್ಕಳು ಪ್ರದರ್ಶಿಸಬಹುದಾದ ವೈವಿಧ್ಯಮಯ ಸೃಜನಾತ್ಮಕ ಸಾಧ್ಯತೆಗಳನ್ನು ಗುರುತಿಸಿ ಪ್ರಯೋಗಿಸಿದ್ದಾರೆ.

ಈ ಕಲೆಯೊಂದಿಗೆ ಪಠ್ಯವನ್ನು ಅಂತರ್ಗತಗೊಳಿಸಲಾಗಿದೆ. ಅಲ್ಲದೇ ಸೋಮನ ಕುಣಿತ ಹಿನ್ನೆಲೆಯ ಕತೆಗಳನ್ನು ಸಂಗ್ರಹಿಸುವುದು, ರಂಗ ರೂಪಕಗಳನ್ನು ರಚಿಸುವುದು, ಮುಖವಾಡಗಳನ್ನು ತಯಾರಿಸುವುದು ಹಾಗೂ ಸೋಮನ ಕುಣಿತದ ಹೆಜ್ಜೆಗಳನ್ನು ರೂಢಿಸುವುದು ಸೇರಿದಂತೆ ಹಲವು ಚಟುವಟಿಕೆಗಳನ್ನು ಸಂಘಟಿಸಿದ್ದಾರೆ. ಸೋಮನ ಕುಣಿತವು ಕರ್ನಾಟಕದ ಸಾಂಸ್ಕೃತಿಕ ಜೀವನದಿಂದಲೇ ವೇಗವಾಗಿ ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ಪಠ್ಯ ಕಲಿಕೆಯ ಹೊಸರೂಪದೊಂದಿಗೆ ಹೊಸ ಪೀಳಿಗೆ ಕೊಂಡೊಯ್ಯುವಂತೆ ಮಾಡುತ್ತಿರುವುದು ಶ್ಲಾಘನೀಯವಾಗಿದೆ.







"ಮಕ್ಕಳೇ ಸ್ವತಃ ಗದ್ದೆಯಿಂದ ಜೇಡಿ ಮಣ್ಣನ್ನು ತಂದು ಚೆನ್ನಾಗಿ ಕಲೆಸಿ ಹದಮಾಡಿ ಸೋಮನ ಮುಖವಾಡ ತಯಾರಿಸಿ ; ಸೋಮನ ಕುಣಿತದ ಸುತ್ತ ಇರುವ ಕತೆಗಳನ್ನು ದೃಶ್ಯ ರೂಪ ಕಟ್ಟುವ ಕೆಲಸ ಮಾಡಿದರು. ಸಮುದಾಯದ ಸಮ್ಮುಖದಲ್ಲಿ ನಡೆದ ಮಕ್ಕಳ ಪ್ರದರ್ಶನ ಕಂಡು ಊರಿನವರಿಗೆ ಸೋಜಿಗವೆನಿಸಿತು".

– ಸಂತೋಷ್





**ಸಯ್ಯದ್ ಸಾಧಿಕ್**
ರಂಗಭೂಮಿ ಕಲಾವಿದರು
ಮೈಸೂರು ಜಿಲ್ಲೆ
9743621655
riyazsihimoge@gmail.com

# ಪ್ಲೇಬ್ಯಾಕ್ ಥಿಯೇಟರ್ ಮೂಲಕ ಮಕ್ಕಳ ಮನೋವಿಕಾಸ

ಮೈಸೂರಿನ ರಂಗಭೂಮಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವ ಸೈಯದ್ ಸಾದಿಕ್ ಇವರು 'ನೀನಾಸಂ' ಹಾಗೂ ಮೈಸೂರು ರಂಗಾಯಣದ ಥಿಯೇಟರ್ ಡಿಪ್ಲೋಮಾ ಪದವೀಧರರಾಗಿದ್ದಾರೆ. ಹಲವು ರಂಗ ತಂಡಗಳಲ್ಲಿ ಕಲಾವಿದರಾಗಿ ಹಾಗೂ ಬೆಳಕು ವಿನ್ಯಾಸಕಾರರಾಗಿ ಕಾರ್ಯ ಮಾಡಿದ್ದಾರೆ.

ಸೈಯದ್ ಅವರು ಮೈಸೂರಿನ ಕುವೆಂಪು ನಗರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ೭ನೇ ತರಗತಿಯ ವಿದ್ಯಾರ್ಥಿಗಳನ್ನು ತಮ್ಮ ಯೋಜನೆಗೆ ತೊಡಗಿಸಿಕೊಂಡಿದ್ದು; 'ಪ್ಲೇಬ್ಯಾಕ್ ಥಿಯೇಟರ್ ಮೂಲಕ ಮಕ್ಕಳ ಮನೋವಿಕಾಸ' ಯೋಜನೆಯನ್ನು ಅನುಷ್ಠಾನಗೊಳಿಸಿದ್ದಾರೆ. ಈ ಮೂಲಕ ಪ್ಲೇಬ್ಯಾಕ್ ಥಿಯೇಟರ್‌ನಿಂದ ಪಾಶ್ಚಾತ್ಯ ರಂಗಭೂಮಿಯವರೆಗಿನ ರಂಗ ಚಟುವಟಿಕೆಗಳನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ.

'ಪ್ಲೇಬ್ಯಾಕ್ ಥಿಯೇಟರ್' ಎನ್ನುವುದು ಪರಸ್ಪರ ಸೇರಿಕೊಂಡು; ಪ್ರೇಕ್ಷಕ ಸಮೂಹ ಹೇಳಿದ ಕತೆಗಳನ್ನು, ಘಟನೆಗಳನ್ನು ತಕ್ಷಣವೇ ದೃಶ್ಯ ಸೃಷ್ಟಿಸಿಕೊಂಡು ಅಭಿಯಿಸುವ ಒಂದು ರಂಗ ಪ್ರಕ್ರಿಯೆಯಾಗಿದೆ. ಈ ಮೂಲಕ ಪ್ರೇಕ್ಷಕರು ತಮ್ಮ ಜೀವನದ ಘಟನೆಗಳನ್ನು ರಂಗದ ಮೇಲೆ ನೋಡಬಹುದಾಗಿದೆ. ಇದು ನಿರ್ವಾಹಕ, ಸಂಗೀತಗಾರ ಹಾಗೂ ನಟರನ್ನು ಒಳಗೊಂಡಿದ್ದು; ಪ್ರೇಕ್ಷಕರಿಂದ ತಕ್ಷಣವೇ ಶಕ್ತಗೊಳಿಸುವ ಸಂಭಾಷಣೆಗಳನ್ನು ಪಡೆದುಕೊಂಡು ನಟನೆ ಮಾಡುವಂತದ್ದಾಗಿದೆ.

'ವಿದ್ಯಾರ್ಥಿಗಳಿಗೆ ತಮ್ಮ ಮನೋಭಾವನೆಗಳನ್ನು ಅಭಿವ್ಯಕ್ತಗೊಳಿಸುವುದರ ಮೂಲಕ ತಮ್ಮ ಮನೋದೃಡತೆ ಹೆಚ್ಚಿಸಿಕೊಳ್ಳುವಲ್ಲಿ ಇದೊಂದು ಒಳ್ಳೆಯ ವೇದಿಕೆಯಾಗಲಿದೆ' ಎಂಬುದು ಸೈಯದ್ ಅವರ ಬಲವಾದ ನಂಬಿಕೆ. ಇದನ್ನು ಸಾಧಿತಗೊಳಿಸಲು ವಿದ್ಯಾರ್ಥಿಗಳ ಪಾಲಕರು, ಶಿಕ್ಷಕರು ಹಾಗೂ ಸಮುದಾಯವನ್ನು ಜೊತೆಗಿಟ್ಟುಕೊಂಡು ಈ ಯೋಜನೆಯನ್ನು ನಾಲ್ಕು



ಕಲಿ-ಕಲಿಸು
ಹೆಜ್ಜೆಗಳು

ಹಂತದಲ್ಲಿ ಅನುಷ್ಠಾನಗೊಳಿಸುತ್ತಿದ್ದಾರೆ. ಈ ಪ್ರಕ್ರಿಯೆಯ ಮೂಲಕ ವಿದ್ಯಾರ್ಥಿಗಳು ಪಠ್ಯ ವಿಷಯದ ಪರಿಶೋಧನೆಯಲ್ಲಿ ತೊಡಗುವಂತೆ ಮಾಡಿದ್ದಾರೆ. ಥಿಯೇಟರ್ ಗೇಮ್ಸ್‌ನೊಂದಿಗೆ ಮಕ್ಕಳಿಂದ ಇಂಪ್ರುವೈಜೇಶನ್ ಮಾಡಿಸಿದ ವಿಷಯ ವಸ್ತುಗಳನ್ನಿಟ್ಟುಕೊಂಡು ಶಿಕ್ಷಕರು ಹಾಗೂ ಸಮುದಾಯದ ಮಧ್ಯ ಪ್ರದರ್ಶನ ಏರ್ಪಡಿಸಿ ಪ್ಲೇಬ್ಯಾಕ್ ಥಿಯೇಟರ್‌ನಿಂದ ಮಕ್ಕಳ ಕಲಿಕೆಯಲ್ಲಾದ ಬದಲಾವಣೆಯನ್ನು ಪ್ರಚುರಪಡಿಸಲಾಗುತ್ತಿದೆ.







**ಯುವರಾಜ ಎಚ್. ಪಿ.**
ರಂಗಭೂಮಿ ಕಲಾವಿದರು
ಬಳ್ಳಾರಿ ಜಿಲ್ಲೆ
9886539282
yuvarajbellary25@gmail.com

# ಎಂಟು ದಶಕ ಎಂಟು ದೃಶ್ಯ

ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಯುವರಾಜ ಅವರು ಬಳ್ಳಾರಿ ಜಿಲ್ಲೆಯವರಾಗಿದ್ದು ರಂಗಭೂಮಿ ಡಿಪ್ಲೋಮಾ ಪದವೀಧರರಾಗಿದ್ದಾರೆ. ನಾಟಕ ರಚನಾಕಾರರೂ ಆಗಿದ್ದು ಎರಡು ನಾಟಕ ಕೃತಿಗಳು ಪ್ರಕಟಗೊಂಡಿವೆ. 'ನುಡಿ ತಿರುಗುತಾ' ಎಂಬ ಹೆಸರಿನಲ್ಲಿ ರಂಗಭೂಮಿ ಚಟುವಟಿಕೆಗಳ ಸುಗಮಕಾರರಾಗಿ ಕರ್ನಾಟಕದ ೧೦೦ಕ್ಕೂ ಹೆಚ್ಚು ಶಾಲೆಗಳಿಗೆ ಭೇಟಿ ನೀಡಿ ರಂಗಭೂಮಿ ಪರಿಚಯಿಸಿಕೊಟ್ಟಿದ್ದಾರೆ.

ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಸರ್ಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯ ಎಂಬತ್ತೆಂಟು ವರ್ಷದ ಇತಿಹಾಸವನ್ನು ಸಾರುವ 'ಎಂಟು ದಶಕ ಎಂಟು ದೃಶ್ಯ' ಎಂಬ ಶೀರ್ಷಿಕೆಯ ನಾಟಕವನ್ನು ಪ್ರಸ್ತುತಪಡಿಸಿದುದು ವಿಶಿಷ್ಟ ಹಾಗೂ ವಿಭಿನ್ನವಾಗಿದೆ. ಶಾಲೆಯ ಇತಿಹಾಸವನ್ನು ನಾಟಕ ಮಾಧ್ಯಮದ ಮೂಲಕ ಭಾವನಾತ್ಮಕವಾಗಿ ಹೆಣೆದು ಸಮುದಾಯದ ಮಧ್ಯ ಪ್ರದರ್ಶಿಸುವುದು ಒಂದು ಐತಿಹಾಸಿಕ ಘಟನೆಯೇ ಎಂದು ಪರಿಭಾವಿಸಬೇಕಾಗುತ್ತದೆ.

ಇವರು ಈ ಯೋಜನೆಯಲ್ಲಿ ಶಾಲೆಗೆ ಸಂಬಂಧ ಪಟ್ಟಂತೆ ಸಮುದಾಯದ ಸದಸ್ಯರನ್ನು, ವಿದ್ಯಾರ್ಥಿಗಳನ್ನು, ಶಿಕ್ಷಕರನ್ನು, ಹಳೆಯ ವಿದ್ಯಾರ್ಥಿಗಳನ್ನು ಸಂಪರ್ಕಿಸಿದ್ದಾರೆ. ಇವರಿಂದ ಶಾಲೆಯ ಬಗೆಗಿನ ವಿಭಿನ್ನ ಕಥಾನಕಗಳು, ಅನುಭವ, ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಪ್ರೇರೇಪಿಸಿದ್ದಾರೆ. ಈ ಎಲ್ಲ ಅಂಶಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ಸ್ಕ್ರಿಪ್ಟ್ ತಯಾರಿಸಲು ಪ್ರೇರೇಪಿಸಿ, ಮಾರ್ಗದರ್ಶನ ನೀಡಿ; ಬರವಣಿಗೆಯಲ್ಲಿ ತೊಡಗಿಸಿದ್ದಾರೆ.



ಇದರ ಜೊತೆಯಲ್ಲಿಯೇ ಸ್ಥಳೀಯ ಜಾನಪದ ನೃತ್ಯ ಹಾಗೂ ಕೋಲಾಟಗಳನ್ನು ಶಾಲಾ ಪಠ್ಯದೊಂದಿಗೆ ಸಮೀಕರಿಸಿ ಕಾರ್ಯಾಗಾರಗಳನ್ನು ಹಮ್ಮಿಕೊಂಡು ವಿಭಿನ್ನ ದೃಶ್ಯಗಳನ್ನು ಕಟ್ಟಿಕೊಳ್ಳಲು ಸುಗಮಕಾರರಾಗಿ ಕಾರ್ಯ ಮಾಡಿದ್ದಾರೆ. ಹಳೆಯ ವಿದ್ಯಾರ್ಥಿಗಳೂ ಸೇರಿದಂತೆ ಸಮುದಾಯದ ಸಮ್ಮುಖದಲ್ಲಿ ಪ್ರದರ್ಶನ ನೀಡಿದ್ದಾರೆ. ಈ ಮೂಲಕ ಸಮುದಾಯಕ್ಕೆ ಹಾಗೂ ವಿದ್ಯಾರ್ಥಿಗಳಿಗೆ ಶಾಲೆಯ ಐತಿಹಾಸಿಕ ಮಹತ್ವದ ಅರಿವಾಯಿತು. ಹಾಗೆಯೇ ಮಕ್ಕಳ ಸೃಜನಶೀಲ ಬರವಣಿಗೆಗೆ ಪ್ರೇರಣೆಯೂ ಆಯಿತು.



"ಈ ಯೋಜನೆಯ ಚಟುವಟಿಕೆಯಲ್ಲಿ ಸಕ್ರಿಯವಾದ ವಿದ್ಯಾರ್ಥಿಗಳು ಉತ್ಸಾಹಿಗಳಾಗಿ, ಕ್ರಿಯಾಶೀಲರಾಗಿ, ಸೃಜನಶೀಲರಾಗಿ ವಿಚಾರ ಮಾಡ ತೊಡಗಿದ್ದಾರೆ. ಹಾಗೆಯೇ ಸೃಜನಶೀಲ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ."
– ಯುವರಾಜ್ ಎಚ್. ಪಿ.





**ಪ್ರಶಾಂತಕುಮಾರ್**
ರಂಗಭೂಮಿ ಕಲಾವಿದರು
ಮೈಸೂರು ಜಿಲ್ಲೆ
9901177727
prashanthkumar.mys@gmail.com

# ಪಠ್ಯದಿಂದ ಆಪ್ತರಂಗಕ್ಕೆ

ಪ್ರಶಾಂತ ಕುಮಾರ ಮೈಸೂರಿನ ರಂಗಭೂಮಿ ಕಲಾವಿದರು. ಇವರು ಬೇಸಿಗೆಯ ರಜಾ ದಿನಗಳಲ್ಲಿ ಮಕ್ಕಳಿಗಾಗಿ ಅನೇಕ ಶಿಬಿರಗಳನ್ನು ಸಂಘಟಿಸಿದ್ದಾರೆ. ರಂಗಾಯಣದ ಹಲವು ನಾಟಕಗಳಲ್ಲಿ ನಟರಾಗಿ, ನಿರ್ದೇಶಕರಾಗಿ ಸಕ್ರಿಯವಾಗಿ ತೊಡಗಿಕೊಂಡು ಕಾರ್ಯ ಮಾಡಿದ್ದಾರೆ. ವಿಭಿನ್ನ ಸೆಟ್ ಹಾಗೂ ಬೆಳಕಿನ ವಿನ್ಯಾಸದ ಮೂಲಕ ಆಪ್ತ ರಂಗಭೂಮಿ ಶೈಲಿಯಲ್ಲಿ ನಾಟಕಗಳನ್ನು ಪ್ರಸ್ತುತಪಡಿಸುವಲ್ಲಿ ವಿಶೇಷತೆಯನ್ನು ಸಾಧಿಸಿದ್ದಾರೆ.

ಇವರು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಅಕ್ಕಿಹೆಬ್ಬಾಳು ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಆಪ್ತ ರಂಗಭೂಮಿ ಪರಿಕಲ್ಪನೆಯನ್ನು ಪರಿಚಯಿಸಿ, ಪಠ್ಯದ ಪಾಠಗಳನ್ನು ಅಳವಡಿಸಿಕೊಂಡು ಕಲಿಯಲು ಪ್ರೇರೇಪಿಸುವಂತೆ 'ಪಠ್ಯದಿಂದ ಆಪ್ತರಂಗಕ್ಕೆ' ಯೋಜನೆಯನ್ನು ರೂಪಿಸಿದ್ದಾರೆ. ಆಪ್ತ ರಂಗಭೂಮಿಯಲ್ಲಿ ಯಾವುದೇ ನಿರ್ದಿಷ್ಟ ಜಾಗದ ಅಗತ್ಯವಿಲ್ಲ. ಹಿಂಬಾಗದಲ್ಲಿ ಪ್ರವೇಶ ದ್ವಾರವಿದ್ದು; ಪ್ರೇಕ್ಷಕರ ಸಮ್ಮುಖದಲ್ಲಿ ವೇದಿಕೆಯು ಅರ್ಧಗೋಲದಂತಿರುವ ಭಾಗದಲ್ಲಿ ನಾಟಕ ಪ್ರದರ್ಶನಗೊಳಿಸಬಹುದು.

ವಿದ್ಯಾರ್ಥಿಗಳು ಈ ಆಪ್ತರಂಗ ಶೈಲಿ ಬಳಸಿಕೊಂಡು ಪ್ರಯೋಗಿಸಲು ೮ನೇ ತರಗತಿ ಪಠ್ಯಪುಸ್ತಕದ ನೇಮಿಚಂದ್ರ, ಎ. ಕೆ. ರಾಮಾನುಜನ್, ಬಾಗಲೋಡಿಯ ದೇವರಾಯರು, ಕನಕದಾಸರು ಮೊದಲಾದ ಪ್ರಬುದ್ಧ ಲೇಖಕ-ಕವಿಗಳು ರಚಿಸಿದ ನಾಲ್ಕು ಪಾಠಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಆಯ್ಕೆ ಮಾಡಿಕೊಂಡ ನಾಲ್ಕೂ ಪಾಠಗಳನ್ನು ಒಂದು ಕೊಲಾಜ್ ರಂಗಪಠ್ಯವಾಗಿ ರೂಪಾಂತರಿಸಿ, ನಿರ್ಮಿಸಿ; ಪ್ರದರ್ಶನ ನೀಡಿದ್ದಾರೆ.





> "ಈ ಪ್ರಯೋಗವು ಮಕ್ಕಳಲ್ಲಿ ಆತ್ಮವಿಶ್ವಾಸ, ಕೂಡಿ ಕೆಲಸ ಮಾಡುವ ನೈಪುಣ್ಯತೆ, ಕಲಿಯುವಿಕೆಯಲ್ಲಿ ಪ್ರಗತಿ, ಪ್ರಪಂಚವನ್ನು ನೋಡುವ ದೃಷ್ಟಿಕೋನಗಳನ್ನು ಬೆಳೆಸುವುದರೊಂದಿಗೆ ಸದಾ ಕಲಿಯುವಿಕೆಯನ್ನು ಪ್ರಚೋದಿಸುವಲ್ಲಿ ನಿರೀಕ್ಷಿತ ಯಶ ಕಂಡಿದೆ."
> – ಪ್ರಶಾಂತ್ ಕುಮಾರ

ಸಂಪನ್ಮೂಲ ವ್ಯಕ್ತಿಗಳನ್ನು ಆಮಂತ್ರಿಸಿ ತರಬೇತಿ ಶಿಬಿರಗಳನ್ನು ನಡೆಸಿ; ಸಾಫಲ್ಯತೆಯನ್ನು ಕಂಡಿದ್ದಾರೆ. ಈ ಎಲ್ಲ ಕಾರ್ಯಚಟುವಟಿಕೆಗಳನ್ನು ವಿದ್ಯಾರ್ಥಿಗಳೇ ನಡೆಸಿಕೊಟ್ಟಿದ್ದು; ಅಧ್ಯಾಪಕರ ಹಾಗೂ ಸಮುದಾಯದ ಸಮ್ಮುಖದಲ್ಲಿ ಪ್ರದರ್ಶನಗಳು ಜರುಗಲಿವೆ.







**ಚಂದ್ರಹಾಸ ಯಲ್ಲಪ್ಪ**
ದೃಶ್ಯ ಕಲಾವಿದರು
ಗುಲಬರ್ಗಾ
9448181637
yjchandrahas@gmail.com

# ಕೈಬರಹದ ಕಲಾತ್ಮಕತೆ

ಫೈನ್ ಆರ್ಟ್ ಪದವೀಧರರಾಗಿರುವ ಚಂದ್ರಹಾಸ ಯಲ್ಲಪ್ಪ ಇವರು ಕಲಬುರ್ಗಿಯ ಎಂ.ಎಂ.ಕೆ. ಕಾಲೇಜಿನಲ್ಲಿ ದೃಶ್ಯಕಲೆಯ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಶಾಂತಿನಿಕೇತನದಿಂದ ಗ್ರಾಫಿಕ್ ವಿಭಾಗದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪದವಿಯನ್ನೂ ಪಡೆದಿದ್ದಾರೆ.

ಚಂದ್ರಹಾಸ ಅವರು ತಮ್ಮ ಯೋಜನೆಯ ಮುಖಾಂತರ ಸರ್ಕಾರಿ ಪ್ರಾಥಮಿಕ ಶಾಲೆ ಕಲಬುರಗಿಯ ೮ನೇ ತರಗತಿ ವಿದ್ಯಾರ್ಥಿಗಳಿಗೆ 'ಕಲಬುರಗಿಯ ಬಹಮನಿ ಕಾಲದ ಇತಿಹಾಸ ಹಾಗೂ ವಾಸ್ತು ಶಿಲ್ಪದ ಕುರಿತು ದೃಶ್ಯ ಮಾಧ್ಯಮದ ಮುಖೇನ ತಿಳಿಸಿ; ಮಕ್ಕಳಲ್ಲಿ ಇವುಗಳ ಬಗೆಗೆ ಮೆಚ್ಚುಗೆಯನ್ನು ಬೆಳಸಿಕೊಳ್ಳುವಂತೆ ಮಾಡುವ ಉದ್ದೇಶ ಹೊಂದಿದ್ದಾರೆ. ಈ ಮೂಲಕ ವಿದ್ಯಾರ್ಥಿಗಳಿಗೆ ಬಹುಮನಿ ಸುಲ್ತಾನರ ಕಾಲದ ಕೈಬರಹ, ಚಿತ್ರಕಲೆ, ವಾಸ್ತುಶಿಲ್ಪ, ಮರದಚ್ಚು ಮುದ್ರಣದ ಬಗ್ಗೆ ಕಲಾತ್ಮಕವಾಗಿ ತಯಾರಿಸುತ್ತಿದ್ದ ವಸ್ತುಗಳ ಬಗ್ಗೆ ತಿಳಿದು ಅಭ್ಯಸಿಸಲು ಅವಕಾಶ ಮಾಡಿ ಕೊಡಲಾಗಿದೆ.

ಸಮಾಜ ವಿಜ್ಞಾನ ಪಠ್ಯದ ವಿಷಯಕ್ಕೆ ಸಮನ್ವಯಿಸಿಕೊಂಡು ಬಹಮನಿ ಕಾಲದಲ್ಲಿ ಕಟ್ಟಿಗೆಯಲ್ಲಿ 'ಮರದಚ್ಚು' ತಯಾರಿಸಿ ಕೌಶಲ್ಯಪೂರ್ಣವಾಗಿ ಪ್ರಿಂಟ್ ತೆಗೆಯುವುದನ್ನು ವಿದ್ಯಾರ್ಥಿಗಳಿಗೆ ಕಲಿಸುವ ಮೂಲಕ ಈ ಕಲೆಯನ್ನು ಪರಿಚಯಿಸುತ್ತಿದ್ದಾರೆ.

ವಿದ್ಯಾರ್ಥಿಗಳನ್ನು ಕೈಬರಹ, ಚಿತ್ರಕಲೆ, ಪ್ರತಿಕೃತಿ ನಿರ್ಮಾಣ, ಕಥೆ ಹೇಳುವ ಕೌಶಲ ಮೊದಲಾದ ವೈವಿದ್ಯಮಯ ಕೌಶಲಾಭಿವೃದ್ಧಿ ಬೆಳವಣಿಗೆಯ ಚಟುವಟಿಕೆಗಳಲ್ಲಿ ತೊಡಗಿಸಿ; ಸ್ಥಳೀಯವಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಇವುಗಳ ಮಹತ್ವ ದಾಖಲಿಸಲು ಪ್ರಯತ್ನಿಸಿದ್ದಾರೆ. ಇವೆಲ್ಲವುಗಳೊಂದಿಗೆ ವಿದ್ಯಾರ್ಥಿಗಳನ್ನು ಸ್ಮಾರಕಗಳು ಹಾಗೂ ಮ್ಯೂಜಿಯಂಗಳ ಭೇಟಿಯೊಂದಿಗೆ ವಿಭಿನ್ನ ಚಟುವಟಿಕೆಗಳಲ್ಲಿ







ಸಕ್ರಿಯವಾಗಿಸುವ ಮೂಲಕ ಆ ಕಾಲಘಟ್ಟದ ಜನಜೀವನದ ಅವಲೋಕನ-ಅಧ್ಯಯನ ಮಾಡಿಸಲಾಗಿದೆ. ಅಂತಿಮವಾಗಿ ವಿದ್ಯಾರ್ಥಿಗಳು ರಚಿಸಿದ ಮುದ್ರಣ ಕಲಾಕೃತಿಗಳನ್ನು ಮತ್ತು ಬರಹಗಳನ್ನು ಶಾಲಾ ಆವರಣದಲ್ಲಿ ಪ್ರದರ್ಶಿಸಲಾಗುತ್ತದೆ.

"ಗ್ರಾಪಿಕ್ ಪ್ರಿಂಟ್‌ನ ಪ್ರಾಯೋಗಿಕ ಹಾಗೂ ವಿಸ್ತೃತವಾದ ಅಭ್ಯಾಸದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವುದರಿಂದ ಅವರ ವಿಕ್ಷಣಾ ಸಾಮರ್ಥ್ಯ, ಕಲ್ಪನಾ ಶಕ್ತಿ, ಸೃಜನಶೀಲತೆ, ದೈಹಿಕ ಮತ್ತು ತಾಂತ್ರಿಕ ಕೌಶಲ್ಯಗಳು ಅಭಿವೃದ್ಧಿ ಹೊಂದುತ್ತವೆ. ಅಲ್ಲದೇ ಕಲೆಯ ಬಗೆಗಿನ ಜ್ಞಾನ ಅಭಿವೃದ್ಧಿಯಾಗುತ್ತದೆ. ಎಂಬುದನ್ನು ಈ ಯೋಜನೆಯ ಅನುಷ್ಠಾನದಿಂದ ಕಂಡುಕೊಂಡಿದ್ದೇನೆ."
-ಚಂದ್ರಹಾಸ್





**ಗಣೇಶ ಪಲವತ್ತು ನಾಡೋರ್**
ಬರಹಗಾರರು
ಉತ್ತರ ಕನ್ನಡ ಜಿಲ್ಲೆ
9480797752
gpnador@gmail.com

# ಹಕ್ಕಿ ಹಾರುತಿದೆ ನೋಡಿದಿರಾ....

ಶಿಕ್ಷಣದಲ್ಲಿ ಪದವೀಧರರಾಗಿರುವ ಕ್ರಿಯಾಶೀಲ ಬರಹಗಾರ ಮತ್ತು ಪರಿಸರವಾದಿಯಾಗಿರುವ ಗಣೇಶ ಪಿ. ನಾಡೋರ್ ಅವರು ಉತ್ತರ ಕನ್ನಡ ಜಿಲ್ಲೆಯವರು. ಮಕ್ಕಳ ಕತೆಗಾರರು, ಕಾದಂಬರಿಕಾರರು ಆಗಿದ್ದು ಹಲವು ಕೃತಿಗಳು ಪ್ರಕಟಗೊಂಡಿವೆ.

ಉತ್ತರ ಕನ್ನಡ ಜಿಲ್ಲೆ ಅನಗೋಡ ಸರ್ಕಾರಿ ಪ್ರೌಢಶಾಲೆಯ ಎಂಟನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಭಾಷೆ ಹಾಗೂ ವಿಜ್ಞಾನಗಳ ಮೇಳೈಸುವಿಕೆಯೊಂದಿಗೆ 'ಹಕ್ಕಿ ಹಾರುತಿದೆ ನೋಡಿದಿರಾ...' ಯೋಜನೆ ರೂಪಿಸಿ ಕಾರ್ಯ ಮಾಡುತ್ತಿದ್ದಾರೆ. ಯೋಜನೆಯ ಆರಂಭದಲ್ಲಿಯೇ ಪಕ್ಷಿಗಳನ್ನು ಗುರುತಿಸಿ ದಾಖಲಿಸುವ ಕುರಿತು ಮಾರ್ಗದರ್ಶನ ನೀಡಿ ಮಕ್ಕಳನ್ನು ಪಕ್ಷಿವೀಕ್ಷಣೆಯ ಕಾರ್ಯದಲ್ಲಿ ತೊಡಗಿಸಿದ್ದಾರೆ. ಮಕ್ಕಳು ಸ್ವತಃ ಕುತೂಹಲಿಗಳಾಗಿ ಪಕ್ಷಿಗಳನ್ನು ವೀಕ್ಷಿಸುತ್ತ ಮೊದಲ ದಿನವೇ ೨೨ ಹಕ್ಕಿಗಳನ್ನು ಗುರುತಿಸಿ; ಉತ್ಸಾಹದಿಂದ ಪ್ರತಿಕ್ರಿಯಿಸುತ್ತ ಅನುಭವ ಹಂಚಿಕೊಂಡಿದ್ದಾರೆ. ಮಕ್ಕಳು ಈ ರೀತಿ ಪಕ್ಷಿ ವೀಕ್ಷಣೆ ಹಾಗೂ ಇತರ ಮಾಹಿತಿ ಸಂಗ್ರಹಣೆಗಾಗಿ ಆರು ಭಾರಿ ಕಾಡಿನಲ್ಲಿ ಸಂಚರಿಸಿದ್ದಾರೆ.

ಇದರ ಮುಂದುವರಿಕೆಯಾಗಿ ವನ್ಯ ಜೀವಿ ಹಾಗೂ ಪರಿಸರ ಸಂಬಂಧಿ ನಿಯತ ಕಾಲಿಕೆಗಳನ್ನು ಓದಿ, ಓದಿಸಿ ತರಗತಿಯಲ್ಲಿ ಪೂರಕ ಚಟುವಟಿಕೆಗಳನ್ನು ಮಾಡಿಸುವ ಮೂಲಕ ವಿದ್ಯಾರ್ಥಿಗಳು ಹಕ್ಕಿಗಳ ಬಗ್ಗೆ ಬೆರಗುಗಣ್ಣಿನಿಂದ ನೋಡಿ ಅವಲೋಕಿಸಿ ಬರೆಯುವಂತೆ ಪ್ರೇರೆಪಿಸುತ್ತಿದ್ದಾರೆ. ಪಕ್ಷಿಗಳ ಕುರಿತಾದ ಸಾಕ್ಷಚಿತ್ರ ಪ್ರದರ್ಶನ, ಸ್ಥಳೀಯ ಜನಪದ ತಜ್ಞರಿಂದ, ಅರಣ್ಯಾಧಿಕಾರಿಗಳಿಂದ, ಪಕ್ಷಿಗಳ ಕುರಿತಾಗಿ ಮಾಹಿತಿ ಸಂಗ್ರಹ ಮಾಡಲು ತೊಡಗಿಸಿ ಮಕ್ಕಳು ಹಾಗೂ ಶಿಕ್ಷಕರ ಅನುಭವ ಹಂಚಿಕೆ ಕಾರ್ಯಾಗಾರ ಸಂಘಟಿಸಿದ್ದಾರೆ.



ಕಲಿ-ಕಲಿಸು ಹೆಜ್ಜೆಗಳು

ಈ ಮೂಲಕ ಮಕ್ಕಳು ತಮ್ಮ ಅನ್ವೇಷಣೆ–ಅನುಭವ ಬಳಸಿಕೊಂಡು ಕತೆ–ಕವಿತೆ ರಚಿಸುತ್ತಿದ್ದಾರೆ. ಅಂತಿಮವಾಗಿ ಗಣೇಶ ಅವರು ಶಿಕ್ಷಕರು ಮತ್ತು ಮಕ್ಕಳು ಪಠ್ಯಕ್ಕೆ ಪೂರಕವಾಗಿ ಬಳಸಿಕೊಳ್ಳಲು ನೆರವಾಗುವಂತೆ ಹಕ್ಕಿಗಳ ಕುರಿತಾದ ಪಠ್ಯ ಸಂಬಂಧಿ ಜನಪದ ಹಾಡು–ಕತೆಗಳು, ಈ ಕುರಿತು ಮಕ್ಕಳು ಬರೆದ ಕತೆ–ಕವಿತೆಗಳನ್ನು ಸಂಗ್ರಹಿಸಿ, ಸಂಪಾದಿಸುತ್ತಿದ್ದಾರೆ.



"ಪ್ರಕೃತಿ ದತ್ತವಾದ ಮೋಹಕ ರೂಪ, ಬಣ್ಣಗಳಿಂದ ಆಕರ್ಷಿಸುತ್ತ ನಮ್ಮ ಸುತ್ತ ರೆಕ್ಕೆ ಬಡಿಯುತ್ತ ಹಾರುತ್ತಿರುವ ಹಕ್ಕಿಗಳನ್ನು ನೋಡಿ ಸಾಕಷ್ಟು ಕಲಿಯಬಹುದು. ಮಕ್ಕಳನ್ನು ನಾಲ್ಕು ಗೋಡೆಗಳ ಮಧ್ಯ ಬಂಧಿಯಾಗಿಸದೇ ಅದನ್ನು ಮುರಿದು ಹೊರಬಂದು ಕಲಿತಾಗ ಮಕ್ಕಳ ಸೃಜನಶೀಲತೆ ಬೆಳೆಯುತ್ತದೆ."

– ಗಣೇಶ ಪಿ. ನಾಡೋರ್





**ವಿನೋದ್‌ಕುಮಾರ್ ಎಸ್.**
ರಂಗಭೂಮಿ ಕಲಾವಿದರು
ಕೊಪ್ಪಳ ಜಿಲ್ಲೆ
9742014709
vinodaranga22@gmail.com

# ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕಾ

ಕೃಷಿ ಪದವೀಧರರಾಗಿರುವ ಕೊಪ್ಪಳದ ವಿನೋದ್ ಕುಮಾರ್ ರಂಗಾಯಣದ ಹಳೆಯ ವಿದ್ಯಾರ್ಥಿಯಾಗಿದ್ದು, ಸಾಹಿತ್ಯ ಮತ್ತು ರಂಗಭೂಮಿ ಒಲವಿನೊಂದಿಗೆ ಮಕ್ಕಳಿಗೋಸ್ಕರ ನಿರಂತರವಾಗಿ ರಂಗಭೂಮಿ ಕಾರ್ಯಾಗಾರಗಳನ್ನು ಆಯೋಜಿಸುತ್ತ ಬಂದಿದ್ದಾರೆ.

ಇವರು ಮೈಸೂರು ಜಿಲ್ಲೆಯ ಹೊಮ್ಮರಗಳ್ಳಿ ಗ್ರಾಮದ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳೊಟ್ಟಿಗೆ, 'ಆಹಾರ ಚರಿತ್ರೆ' ಕುರಿತು ಯೋಜನೆ ಕೈಗೊಂಡಿದ್ದು; ಬಿ.ಜಿ.ಎಲ್. ಸ್ವಾಮಿಯವರ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕಾ' ಕೃತಿಯನ್ನು ಆಧರಿಸಿ ಕಾರ್ಯ ಮಾಡುತ್ತಿದ್ದಾರೆ. ಈ ಕೃತಿಯಲ್ಲಿ ವಿಜ್ಞಾನ, ಇತಿಹಾಸ, ಕಥೆ, ಹಾಡು, ಹಾಸ್ಯ ಸೇರಿದಂತೆ ಆಹಾರ ಸಂಸ್ಕೃತಿಯ ರಸಪಾಕವಿದೆ. ಇದೆಲ್ಲವನ್ನೂ ಮಕ್ಕಳಿಗೆ ಈ ಕೃತಿಯ ಓದಿನೊಂದಿಗೆ, ಚರ್ಚೆ ವಿಶ್ಲೇಷಣೆಯೊಂದಿಗೆ ತಿಳಿಸಿಕೊಡುತ್ತ; ರಂಗಪಠ್ಯವಾಗಿಸಿ ರಂಗದ ಮೇಲೆ ಪ್ರದರ್ಶನಗೊಳಿಸುವ ಮೂಲಕ ಸುಲಭವಾಗಿ ಗ್ರಾಹ್ಯವಾಗುವಂತೆ ಮಾಡಿದ್ದಾರೆ. ಈ ಮೂಲಕ ಬಿ. ಜಿ. ಎಲ್. ಸ್ವಾಮಿ ಅವರಿಗಿದ್ದ ಅಪಾರ ಜ್ಞಾನವನ್ನು ಈ ತಲೆಮಾರಿನ ವಿದ್ಯಾರ್ಥಿಗಳಿಗೆ ಕಲಾತ್ಮಕವಾಗಿಸಿ ತಲುಪಿಸಲು ಪ್ರಯತ್ನಿಸಿದ್ದಾರೆ.

ಗಿಡಗಳ ನೈಸರ್ಗಿಕ ಮೂಲ ಸ್ಥಾನಗಳ ಕುರಿತು, ಹಾಗೂ ಅವುಗಳೊಂದಿಗೆ ಕೂಡಿಕೊಂಡಿರುವ ವೈಜ್ಞಾನಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ವಿಚಾರಗಳ ಕುರಿತು ಗಮನಹರಿಸುವಂತೆ ಮಾಡಿದ್ದಾರೆ. ಇದು ಮಕ್ಕಳು ಮನೆಯಲ್ಲಿ ಸೇವಿಸುವ ಆಹಾರ ಮತ್ತು ತರಗತಿಯಲ್ಲಿ ಕಲಿಯುವುದರ ನಡುವೆ ಸಂಬಂಧ ಬೆಸೆಯಲು ಸಹಾಯ ಮಾಡಲಿದೆ. ವಿಜ್ಞಾನ ಪಠ್ಯಕ್ರಮಕ್ಕೆ ಸಂಬಂಧಪಟ್ಟಂತೆ, ಈ ಕೃತಿಯ ಆಯ್ದ ಭಾಗಗಳನ್ನು ರಂಗಕ್ಕೆ ರೂಪಾಂತರಿಸಿ, ವಿದ್ಯಾರ್ಥಿಗಳನ್ನು ತರಬೇತುಗೊಳಿಸಿ, ಸರಣಿ ಪ್ರದರ್ಶನ ಏರ್ಪಡಿಸುವ ಮೂಲಕ ಯೋಜನೆ ಮುಕ್ತಾಯಗೊಳ್ಳಲಿದೆ.







"ಬಿ. ಜಿ. ಎಲ್. ಸ್ವಾಮಿಯವರ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕ' ಕೃತಿಯನ್ನು ರಂಗ ರೂಪ ಮಾಡುವ ಸಿದ್ಧತಾ ಪ್ರಕ್ರಿಯೆಯಲ್ಲಿ ಅವರ ಸಾಹಿತ್ಯವನ್ನು ಮಕ್ಕಳು ತುಂಬಾ ಆಸಕ್ತಿಯಿಂದ ಆಸ್ವಾದಿಸಿದರು. ಈ ಪ್ರಯೋಗ ನನ್ನ ಅನುಭವ ವಿಸ್ತಿರಿಸಿತು."

– ವಿನೋದ್ ಕುಮಾರ್ ಎಸ್.



**ಮಲೆನಾಡು ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ**
'ಚಂದನ ಶಾಲೆ' ನರಬೈಲು, ಶಿರಸಿ
ಉತ್ತರ ಕನ್ನಡ ಜಿಲ್ಲೆ
9482555705
chandanaschoolsirsi@gmail.com



ಜಂಸ್ಥಾ ಯೋಜನೆ

# ಹಾಲಕ್ಕಿ ಒಕ್ಕಲು-ಸುಕ್ರಿ ಬೊಮ್ಮಗೌಡ

ಮಲೆನಾಡು ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಚಂದನ ಶಾಲೆಯು, ಸಿರಸಿ ತಾಲೂಕಿನ ನರೇಬೈಲ್‌ನ ಪ್ರಾಕೃತಿಕ ಮಡಿಲಿನಲ್ಲಿದೆ. ಯಲ್ಲಾಪುರ, ಸಿರಸಿ, ಮುಂಡಗೋಡ, ಸಿದ್ದಾಪುರ, ಸೊರಬ ತಾಲೂಕಿನ ವಿವಿಧ ಗ್ರಾಮ ಮತ್ತು ಪಟ್ಟಣಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದಾರೆ.

ನಿರ್ಲಕ್ಷಿತ ಮತ್ತು ಅಜ್ಞಾತ ಜನ ಸಮುದಾಯಗಳ ಸೃಜನ ಶೀಲತೆ ಸಾಂಸ್ಕೃತಿಕ ಮೌಖಿಕ ಪರಂಪರೆಯಲ್ಲಿರುವ ದೇಸಿ ಜ್ಞಾನ ಪರಂಪರೆಯನ್ನು ದಾಖಲಿಸುವ ಮತ್ತು ಅನುಭವ ಶ್ರೀಮಂತಿಕೆಯನ್ನು ಪರಿಚಯಿಸುವ ಯೋಜನೆ ಇದಾಗಿದೆ.

ಎಂಟನೆಯ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ 'ಸುಕ್ರಿ ಬೊಮ್ಮ ಗೌಡ' ಎಂಬ ಪಾಠವನ್ನೇ ಮೊದಲಾಗಿಸಿಕೊಂಡು ಅಂಕೋಲ ತಾಲೂಕಿನ ಭೌಗೋಳಿಕ ವಾತಾವರಣ, ಇತಿಹಾಸ, ಮಳೆಯ ಜೊತೆ ರೈತರ ಸಂಬಂಧ ಮೊದಲಾದುದರ ಬಗ್ಗೆ ವಿವರವಾಗಿ ತಿಳಿದುಕೊಳ್ಳುತ್ತಿದ್ದಾರೆ. ಈ ತಾಲೂಕಿನ ಪರಿಸರದಲ್ಲಿ ಬೆಳೆಯುವ ಮರಗಿಡಗಳ ಮಾಹಿತಿಯನ್ನು, ಅಲ್ಲಿನ ಜನಾಂಗದ ಜೀವನ ವಿಧಾನ ತಿಳಿಸುವ ಉದ್ದೇಶ ಹೊಂದಿ ಕಾರ್ಯಪ್ರವೃತ್ತರಾಗಿದ್ದಾರೆ.

ಪ್ರಸ್ತುತ ಯೋಜನೆಯ ಮೂಲಕ ಮಕ್ಕಳು ಸುಕ್ರಿ ಬೊಮ್ಮ ಗೌಡರನ್ನು ಅವರ ನೆಲದಲ್ಲೇ ಕಂಡು ಅವರೊಟ್ಟಿಗೆ ನಡೆದಾಡಿ; ಅವರನ್ನು ಶಾಲೆಗೆ ಕರೆಸಿ ಸಂದರ್ಶನ ಸಂವಾದ ನಡೆಸಿ ಪರಿಚಯಿಸಿಕೊಂಡಿದ್ದಾರೆ. ಹೀಗೆ ಪರಿಚಯಿಸಿಕೊಳ್ಳುತ್ತ; ಹಾಲಕ್ಕಿಗಳ ಮೂಲಸ್ಥಾನ, ಹಾಲಕ್ಕಿ ಜನ ಸಮುದಾಯ ನೆಲೆ ಹಾಗೂ ಅವರ ಸ್ಥಿತಿ ಗತಿ ಬದಲಾವಣೆಗಳ ವಿವರಣೆಗಳನ್ನು ತಿಳಿದಿದ್ದಾರೆ. ಹಲವು ಬಾರಿ ಮಕ್ಕಳನ್ನು ಪ್ರಕೃತಿಯ ಮಡಿಲಿಗೆ ಕರೆದೊಯ್ಯುವ ಕಾರ್ಯ ಮಾಡಿದ್ದಾರೆ. ಇದರಿಂದ ಮಕ್ಕಳಿಗೆ ಜನಪದ ಸಾಹಿತ್ಯ ಕೇಳಲು, ಓದಿ ತಿಳಿಯಲು ಮತ್ತು ಸಾಹಿತ್ಯ ರಚಿಸಲು ಸ್ಫೂರ್ತಿ ಪ್ರೇರಣೆಯಾಗಿದೆ.





ಹಾಲಕ್ಕಿಗಳ ಅದರಲ್ಲೂ ವಿಶೇಷವಾಗಿ ಸುಕ್ರಿ ಬೊಮ್ಮಗೌಡ ಹಾಡಿರುವ ಜನಪದ ಹಾಡು, ಕತೆಗಳನ್ನು ಸಂಗ್ರಹಿಸುವುದು ಮತ್ತು ಸಂಗ್ರಹವಾದ ಕಥೆಗಳನ್ನು ಮಕ್ಕಳ ಕೈಬರಹದ ಮೂಲಕ ಬರೆಸಿ ದಾಖಲಿಸುವುದು ಹಾಗೂ ಹಾಡುಗಳ ಧ್ವನಿಮುದ್ರಣ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಹಾಲಕ್ಕಿ ಜನಾಂಗದ ಆಟಗಳ ಹೆಸರನ್ನು ಮಕ್ಕಳೇ ಬರೆದು ಚಿತ್ರಿಸುವುದು, ನೃತ್ಯ ಮಾಡಿಸುವುದು ಹಾಗೂ ತಾವೂ ಅವರೊಟ್ಟಿಗೆ ಹೆಜ್ಜೆ ಹಾಕಿ ಕಲಿಯುವುದು. ಈ ರೀತಿ ಶಾಲಾ ಕಲಿಕೆಗೆ ಪೂರಕವಾಗಿ ಸಮಯ ಹೊಂದಾಣಿಕೆ ಮಾಡಿಕೊಂಡು, ಕ್ರಿಯಾ ಯೋಜನೆ ರೂಪಿಸಿಕೊಂಡು ಯಶಸ್ವಿ ಅನುಷ್ಠಾನಕ್ಕೆ ಎಲ್ಲರೂ ಕೈಜೋಡಿಸಿ ಕಾರ್ಯ ಮಾಡುತ್ತಿದ್ದಾರೆ.



"ಈ ನೆಲದ ಸಂವೇದನೆ ತಿಳಿಯಲು ಸುಕ್ರಿಯವರೇ ಒಂದು ಬಹುದೊಡ್ಡ ಆಕರ ಗ್ರಂಥ. ಶಾಲೆ ಕಲಿಯದ ಸುಕ್ರಿ ಹಾಡಲು ತೊಡಗಿದರೆ ಕನ್ನಡ ಜನಪದ ಸಾಹಿತ್ಯ ಭಾಂಡಾರದ ಕೀಲಿ ತನ್ನಷ್ಟಕ್ಕೆ ತಾನೇ ತೆರೆದು ಕೊಂಡಂತೆ ಭಾಸವಾಗುವುದು. ಇವರ ಕುರಿತು ಅಭ್ಯಸಿಸುವುದೆಂದರೆ ಈ ನೆಲ ಸಂಸ್ಕೃತಿಯನ್ನು ಅಭ್ಯಸಿಸಿದಂತೆ. ಮಕ್ಕಳು ತುಂಬಾ ಉತ್ಸಾಹದಿಂದ ಕಲಿತರು."

– ಲಕ್ಷ್ಮಿ ಭಟ್



# ಮುಖಾ ಮುಖಿ



# ಮುಖಾ ಮುಖಿ

ಭವಿಷ್ಯದಲ್ಲಿ ಸಾಗುವ ದಾರಿಯನ್ನು ನೋಡುವಾಗ ಭೂತಕಾಲದ ಸಾಧನೆಗಳನ್ನು ಅಥವಾ ನಡೆದು ಬಂದ ಹಾದಿಯ ವಿಮರ್ಶೆ ಮಾಡುವ ಅನಿವಾರ್ಯತೆ ಇರುತ್ತದೆ, ಅಂತೆಯೇ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯು ತನ್ನ ಕಾರ್ಯಸಾಧನೆಗಳನ್ನು ಮೆಲಕು ಹಾಕುತ್ತಾ ಹೊಸ ಆಲೋಚನೆಗಳನ್ನು ಮಕ್ಕಳ ಕಲಿಕೆಯ ದೃಷ್ಟಿಯಲ್ಲಿ ತಿಳಿಯಲು ಕುಪ್ಪಳ್ಳಿಯಲ್ಲಿ  ಮುಖಾ–ಮುಖಿ ಹೆಸರಿನಲ್ಲಿ ೨೦೧೯ನೇ ಅಕ್ಟೊಬರ್ ೧೬ ರಿಂದ ೧೮ ವರೆಗೆ ೩ ದಿನಗಳ ಕಾಲ, ಕಳೆದ ೫ ವರ್ಷಗಳಲ್ಲಿ ಐ. ಎಫ್. ಎ. ಯಿಂದ ಕಲಾ ಶಿಕ್ಷಣ ವಿಭಾಗದಲ್ಲಿ ಅನುದಾನ ಪಡೆದ ೩೪  ಶಿಕ್ಷಕರು ಹಾಗೂ ೨೧ ಕಲಾವಿದರನ್ನು ಒಂದೆಡೆ ಸೇರಿಸಿ ಚರ್ಚೆ, ಸಂವಾದ, ವಿಮರ್ಶೆ ನಡೆಯುವಂತೆ ಅವಕಾಶ ಮಾಡಿಕೊಡಲಾಗಿತ್ತು.

ಈ ಪುನರ್ಮನನ ಶಿಬಿರದಲ್ಲಿ ವಿಶೇಷವಾಗಿ ಸಮಕಾಲೀನ ಅವಶ್ಯಕತೆಗಳಿಗೆ ಅನುಗುಣವಾದ ಸಾಹಿತ್ಯ, ಚಲನಚಿತ್ರ ಅಧ್ಯಯನ ಮತ್ತು ಸಂಗೀತ ಮೊದಲಾದ ವೈವಿಧ್ಯಮಯ ವಿಷಯಗಳ ಕುರಿತು ಸಂವಾದ ಪ್ರಾತ್ಯಕ್ಷಿಕೆ ಆಯೋಜಿಸಲಾಗಿತ್ತು. ಡಾ. ಜಾನಕಿ ಶ್ರೀನಿವಾಮೂರ್ತಿ(ವೈದೇಹಿ), ಶ್ರೀ ನವೀನ ಪದ್ಮನಾಭ. ಶ್ರೀ ರಾಜು ಹಿತ್ತಲಮನಿ ಹಾಗೂ ಶ್ರೀ ಸಾಯಿತೇಜಸ್ ಚಂದ್ರಶೇಖರ್  ಅವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಿಸಿದ್ದರು.

ಈ ಶಿಬಿರದಲ್ಲಿ ಮೂರು ವಿಷಯಗಳನನ್ನು ಕೇಂದ್ರವಾಗಿಟ್ಟುಕೊಂಡು ಶಿಕ್ಷಕರು ಹಾಗೂ ಕಲಾವಿದರಿಂದ ವಿಚಾರ ಮಂಡನೆ ನಡೆಯಿತು. ತಾವು ಕೈಗೊಂಡ ಯೋಜನೆಯ ಅನುಷ್ಠಾನದ ಹಿನ್ನೆಲೆಯಲ್ಲಿ ಎದುರಿಸಿದ ಸವಾಲುಗಳು, ವೈಯುಕ್ತಿಕ ಅನುಭವಗಳು ಹಾಗೂ  ಮಕ್ಕಳು ಮತ್ತು ಸಮುದಾಯದ ಪ್ರತಿಕ್ರಿಯೆಗಳನ್ನು ಹಂಚಿಕೊಂಡರು.

## ಮೊದಲನೆಯ ದಿನ

ಆರಂಭದ 'ಅವಲೋಕನ'ದಲ್ಲಿ ಟಿ. ಎನ್. ಕೃಷ್ಣಮೂರ್ತಿಯವರು ಶಿಬಿರದ ಉದ್ದೇಶ ಹಾಗೂ ರೂಪುರೇಷೆಗಳನ್ನು ಪರಿಚಯ ಮಾಡಿಕೊಟ್ಟರು. ಕುಂದಾಪುರದ ಸದಾನಂದ ಬೈಂದೂರ್ ಅವರ ನೇತೃತ್ವದಲ್ಲಿ ವಿಚಾರ ಮಂಡನೆಯ ಮೊದಲ ವಿಷಯ 'ಕಲಾ ಅಂತರ್ಗತ ಆಲೋಚನೆಗಳು ಮತ್ತು ನಿರಂತರ ಕಲಿಕೆಯಲ್ಲಿ ಭಾಷೆ ಮತ್ತು ಸಾಹಿತ್ಯದ ಪಾತ್ರಗಳು ಮತ್ತು ಅವಶ್ಯಕತೆ' ಕುರಿತು ಚರ್ಚೆ ನಡೆಯಿತು. ನಂತರ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ. ವೈದೇಹಿ ಅವರ 'ಮನದಾಳದ



ಮಾತುಗಳು' ಹೊರಹೊಮ್ಮಿದವು. "ಕನ್ನಡ ಭಾಷೆಯ ಮೂಲಕ ಸ್ಥಳೀಯ ಕಲೆಯು ಮಕ್ಕಳ ಮನಸ್ಸನ್ನು ತಟ್ಟುವ ಹಾಗೆ ಉತ್ತೇಜಿಸುವುದು ಶಿಕ್ಷಕರ ಜವಾಬ್ದಾರಿ" ಎಂದರು. ಮಧ್ಯಾಹ್ನ 'ಸಿನಿಮಾ ನೋಡೋಣ' ಚರ್ಚೆಯನ್ನು ನಡೆಸಲು ದೃಶ್ಯ ಕಲಾವಿದರಾದ ನವೀನ್ ಪದ್ಮನಾಭನ್ ಅವರು, ಸಮಕಾಲೀನ ಸಂದರ್ಭದಲ್ಲಿ ಮಕ್ಕಳ ಕಲಿಕಾ ಸಾಧ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಚಲನಚಿತ್ರಗಳ 'ಭಾಷೆಯನ್ನು' ಅರಿತುಕೊಳ್ಳುವ ಅವಶ್ಯಕತೆ ಇದೆ. ಈ ಮೂಲಕ ಅವರಲ್ಲಿ ನಿರಂತರ ಕಲಿಕೆಯ ಕುತೂಹಲಗಳನ್ನು ಹೇಗೆ ಬೆಳೆಸಬಹುದು ಎನ್ನುವ ಆಲೋಚನೆಗಳನ್ನು ಹುಟ್ಟುಹಾಕಿದರು.

## ಎರಡನೆಯ ದಿನ

ಎರಡನೆಯ ದಿನದ ಆರಂಭಕ್ಕೆ ಬೆಂಗಳೂರಿನ ಸಂಗೀತಗಾರರಾದ ಸಾಯಿತೇಜಸ್ ಚಂದ್ರಶೇಖರ್ ಅವರು 'ಕಲಾ ಅಂತರ್ಗತ ಪ್ರಯೋಗಗಳಲ್ಲಿ ಸಂಗೀತದ ಬಳಕೆ ಏಕೆ ಮತ್ತು ಹೇಗೆ? ವಿಷಯವನ್ನು ಸಂಗೀತದ ಪ್ರಾತ್ಯಕ್ಷಿತೆಗಳ ಮೂಲಕ ಶಿಕ್ಷಕರ ಗಮನ ಸೆಳೆದರು. ಶಿವಮೊಗ್ಗಾದ ಆಲದಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಅಣ್ಣಪ್ಪ ಒಂಟಿಮಾಳಗಿ ಅವರ ಮುಂದಾಳತ್ವದಲ್ಲಿ ವಿಚಾರ ಮಂಡನೆಯ ಎರಡನೆಯ ವಿಷಯ 'ಸಮುದಾಯಗಳ ಭಾಗವಹಿಸುವಿಕೆಯು ಮಕ್ಕಳ ನಿರಂತರ ಕಲಿಕೆಯನ್ನು ಪ್ರೇರೇಪಿಸುತ್ತದೆ' ಎಂಬುದರ ಮೇಲೆ ಚರ್ಚೆ ನಡೆಯಿತು. ಊಟದ ಬಿಡುವಿನ ನಂತರ ಅಂತರಾಷ್ಟ್ರೀಯ ಖ್ಯಾತಿಯ ಸಾಕ್ಷ್ಯ ಚಿತ್ರಗಳ ನಿರ್ದೇಶಕ ಹಾಗೂ ಮೀಡಿಯಾ ಕಲಾವಿದರಾದ ರಾಜು ಹಿತ್ತಲಮನಿ ಅವರು 'ಯಾಕೆ ಇವು ಒಳ್ಳೆಯ ಸಿನಿಮಾಗಳು' ಎನ್ನುವ ವಿಚಾರಡಿಯಲ್ಲಿ ಮಕ್ಕಳ ಕಲಿಕೆಗೆ ಯಾವ ಸಿನಿಮಾಗಳು ಪೂರಕವಾಗಬಲ್ಲವು ಮತ್ತು ಸಿನಿಮಾಗಳಲ್ಲಿ 'ಒಳ್ಳೆಯದು' ಎನ್ನುವುದನ್ನು ನಿರ್ಧರಿಸುವ ಅಂಶಗಳ ಬಗ್ಗೆ ಮತ್ತು ಅವುಗಳನ್ನು ಶಾಲೆಗಳಲ್ಲಿ ಹೇಗೆ ಬಳಸಬಹುದು ಎನ್ನುವುದರ ಬಗ್ಗೆ ಪರಿಚಯಮಾಡಿಕೊಟ್ಟರು.

## ಮೂರನೆಯ ದಿನ

ಮೂರನೆಯ ಹಾಗೂ ಹಾಗೂ ಕೊನೆಯ ದಿನದಂದು ಸಾಯಿತೇಜಸ್ ಚಂದ್ರಶೇಖರ್ ಅವರು ಸಂಗೀತದ ಮೂಲಕ ಕಲಿಕೆಯ ಎರಡನೆಯ ಭಾಗವನ್ನು ಮುಂದುವರೆಸಿ ಶಿಕ್ಷಕರಿಗೆ ಈ ವಿಷಯದಲ್ಲಿ ಕುತೂಹಲ ಮೂಡಿಸಿದರು. ಕೊಪ್ಪಳದ ಹನುಮಸಾಗರ ಪ್ರೌಢ ಶಾಲೆಯ ಶಿಕ್ಷಕರಾದ ಕೀಶನ್ ರಾವ್ ಕುಲಕರ್ಣಿ ಅವರ ನೇತೃತ್ವದಲ್ಲಿ 'ಜಾನಪದ ಚಿಂತನೆಗಳು, ಕಲಾ ಪ್ರಕಾರಗಳು ಮತ್ತು ಸಾಹಿತ್ಯ ಉದಾಹರಣೆಗಳು–ಕಲಿಕೆ ಅನ್ನುವುದರ ಮೂಲ ವೇದಿಕೆ' ವಿಷಯವಾಗಿ ವಿಚಾರ ಮಂಡನೆ ಚರ್ಚೆ ನಡೆಯಿತು.  ಐ.ಎಫ್.ಎ. ಸಂಸ್ಥೆಯ ವಸ್ತು ಸಂಗ್ರಹಾಲಯ ಮತ್ತು ಪತ್ರಗಾರ ಕಾರ್ಯ ಕ್ರಮದ ನಿರ್ವಾಹಕರಾದ ಸುಮನ್ ಗೋಪಿನಾಥ್ ಅವರು ಐ.ಎಫ್.ಎ. ಸಂಸ್ಥೆಯು 'ಸಮುದಾಯದ ಭಾಗವಹಿಸುವಿಕೆಯನ್ನು

ಪ್ರೋತ್ಸಾಹಿಸುವಲ್ಲಿ ರಾಷ್ಟ್ರದ ವಸ್ತು ಸಂಗ್ರಹಾಲಯಗಳೊಂದಿಗೆ ನಡೆಸಿದ ಪ್ರಯೋಗಗಳನ್ನು ಹಂಚಿಕೊಳ್ಳುವುದರ ಮೂಲಕ ಶಿಬಿರಾರ್ಥಿಗಳಿಗೆ ಸ್ಫೂರ್ತಿ ನೀಡಿದರು. ಕೊನೆಯದಾಗಿ ರಾಧಿಕಾ ಭಾರದ್ವಾಜ್ ಅವರು ಐ. ಎಫ್.ಎ. ಸಂಸ್ಥೆಯ ಕಲಾ ಶಿಕ್ಷಣ ಯೋಜನೆಯ ಅನುಷ್ಠಾನದ ಅವಧಿಯಲ್ಲಿ ವರದಿಗಳನ್ನು ಹೇಗೆ ಸಲ್ಲಿಸಬೇಕು? ಸವಾಲುಗಳೇನು ಎನ್ನುವುದರ ಬಗ್ಗೆ ಶಿಬಿರಾರ್ಥಿಗಳೊಂದಿಗೆ ಚರ್ಚೆ ನಡೆಸಿದರು

## ವಿಚಾರ ಮಂಡನೆ ಮಾಡಿದ ಶಿಕ್ಷಕರು ಮತ್ತು ಕಲಾವಿದರು

೧. 'ಕಲಾ ಅಂತರ್ಗತ ಆಲೋಚನೆಗಳು ಮತ್ತು ನಿರಂತರ ಕಲಿಕೆಯಲ್ಲಿ ಭಾಷೆ ಮತ್ತು ಸಾಹಿತ್ಯದ ಪಾತ್ರಗಳು ಮತ್ತು ಅವಶ್ಯಕತೆ ಕುರಿತು ಭಾರತಿ ಎ. ಗುಂಡೂರಾವ್ ದೇಸಾಯಿ. ಕಲಾಧರ್, ಅರುಣ ಬಿ. ಟಿ. ಅಪರ್ಣಾ ದೇಶಪಾಂಡೆ. ಸದಾನಂದ ಬೈಂದೂರ್, ಕಾವ್ಯ ಸಿ, ರಾಜೀವಗೌಡ ಎಂ. ಜೆ, ಸಿದ್ದಪ್ಪ ಬಿರಾದಾರ, ಪ್ರಜ್ಞಾ ಹೆಗಡೆ, ವೆಂಕಟೇಶ ನಾಯಕ, ಮತ್ತು ಜಲಜಾಕ್ಷಿ.

೨ 'ಸಮುದಾಯಗಳ ಭಾಗವಹಿಸುವಿಕೆಯು ಮಕ್ಕಳ ನಿರಂತರ ಕಲಿಕೆಯನ್ನು ಪ್ರೇರೇಪಿಸುತ್ತದೆ' ಎಂಬುದರ ಬಗ್ಗೆ ಕೊಟ್ರೇಶ. ಬಿ. ಪ್ರಶಾಂತ ಕುಮಾರ್. ಗಂಗಪ್ಪ ಎಸ್. ಎಲ್, ಅಶೋಕ ತೋಟ್ನಳ್ಳಿ. ಅರ್ಪಿತಾ ಆರ್. ಚನ್ನಕೇಶವ ಕಾಫೀ, ಅಣ್ಣಪ್ಪ ಒಂಟಿಮಾಳಗಿ. ನಾಗರಾಜ ಹುಡೇದ, ಶಿವನಾಯಕ್ ದೊರೆ, ರಿಯಾಜ್, ಗಣಪತಿ ಹೋಬ್ಳಿದಾರ್, ಗೀತಾ ಕೆ. ಎಚ್.

೩. ಜಾನಪದ ಚಿಂತನೆಗಳು, ಕಲಾ ಪ್ರಕಾರಗಳು ಮತ್ತು ಸಾಹಿತ್ಯ ಉದಾಹರಣೆಗಳು, ಕಲಿಕೆ ಅನ್ನುವುದರ ಮೂಲ ವೇದಿಕೆಯನ್ನು ಉದ್ದೇಶಿಸಿ ಕಿಶನರಾವ್ ಕುಲಕರ್ಣಿ, ರವಿಚಂದ್ರ.ಡಿ,. ಲಕ್ಷ್ಮಿಭಟ್, ನಳಿನಿ, ಡಾ. ನಿಂಗು ಸೊಲಗಿ, ಡಾ. ಚಂದ್ರಪ್ಪ ಸೊಬಟಿ, ಮೋಹನ್ ಕುಮಾರ್, ಗುರುರಾಜ ಎಲ್. ಮಧುಕರ ಎಂ. ಎಲ್. ಸಂತೋಷ ದಿಂಡೂರು.

ಹೀಗೆ ಮೂರು ದಿನಗಳ 'ಮುಖಾ–ಮುಖಿ' ಒಂದಿಷ್ಟು ಹೊಸ ಆಲೋಚನೆಗಳಿಗೆ ನಮ್ಮನ್ನು ನಾವು ತೆರೆದುಕೊಳ್ಳಲು ಅನುವು ಮಾಡಿಕೊಟ್ಟಿತು.

**ಕೃಷ್ಣಮೂರ್ತಿ ಟಿ ಎನ್**
ಕಾರ್ಯಕ್ರಮ ನಿರ್ವಾಹಕರು
ಕಲಾಶಿಕ್ಷಣ ವಿಭಾಗ
ಇಂಡಿಯಾ ಫೌಂಡೇಶನ್ ಫಾರ್ ಆರ್ಟ್ಸ್

**ರಾಧಿಕಾ ಭಾರದ್ವಾಜ್**
ಸಹಾಯಕ ಕಾರ್ಯಕ್ರಮ ನಿರ್ವಾಹಕರು
ಕಲಾಶಿಕ್ಷಣ ವಿಭಾಗ
ಇಂಡಿಯಾ ಫೌಂಡೇಶನ್ ಫಾರ್ ಆರ್ಟ್ಸ್



# ವಿಚಾರ ಮಂಡಣೆ – ೧

# ಕಲಾ ಅಂತರ್ಗತ ಆಲೋಚನೆಗಳು ನಿರಂತರ ಕಲಿಕೆಯಲ್ಲಿ ಭಾಷೆ ಮತ್ತು ಸಾಹಿತ್ಯದ ಪಾತ್ರಗಳು ಅವಶ್ಯಕತೆ

**ಅರುಣ. ಬಿ. ಟಿ. ಗೊಪ್ಪೇನಹಳ್ಳಿ**

ನಾನು ಸ. ಮಾ. ಹಿ. ಪ್ರಾ. ಶಾಲೆ, ಗೊಪ್ಪೇನಹಳ್ಳಿಯಲ್ಲಿ ನಡೆಸಿದ 'ಪಠ್ಯ ವೀರಗಾಸೆ ರೂಪಕಗಳು' ಎಂಬ ಯೋಜನೆಯ ಪ್ರಾಯೋಗಿಕ ಅನುಭವದೊಂದಿಗೆ ಹೇಳುವುದಾದರೆ, ಅಂತರ್ಗತ ಆಲೋಚನೆ ಎಂಬುದು ಎರಡು ರೀತಿಯಲ್ಲಿ ನಡೆದಿದೆ ಎನಿಸುತ್ತದೆ. ಮೊದಲನೆಯದು ಕಲೆಯೊಳಗೆ ಪಠ್ಯ ವಿಷಯವನ್ನು ಅಂತರ್ಗತಗೊಳಿಸುವ ಪ್ರಯತ್ನ, ಎರಡನೆಯದು ಕಲೆಯೊಳಗಿನ ಶಿಕ್ಷಣವನ್ನು ಬಹಿರಂಗಗೊಳಿಸುವುದು. ಮೊದಲನೇ ರೀತಿಯನ್ನು ಆಂಗ್ಲಭಾಷೆಯಲ್ಲಿ 'ಆರ್ಟ್ ಎನಾನ್ಸ್' ಎಂದು ಕರೆದರೂ ಅಂತರ್ಗತಗೊಳಿಸುವ ಕ್ರಿಯೆಯು ಇಲ್ಲಿ ನಡೆಯುತ್ತದೆಂಬುದು ನನ್ನ ನಂಬಿಕೆ. ನನ್ನ ಯೋಜನೆಯಲ್ಲಿ ಮೂರು ಭಿನ್ನ ಕಲಾಪ್ರಕಾರಗಳನ್ನು ಸಂಯೋಜಿಸುವ ಪ್ರಯತ್ನ ನಡೆಯಿತು. ಶಿಕ್ಷಣ ಇಲಾಖೆ ನಿಗದಿ ಪಡಿಸಿದ ಸಿದ್ಧ ಸಾಹಿತ್ಯವಾಗಿ ಪಠ್ಯ, ಸ್ಥಳೀಯ ಜನಪದ ನೃತ್ಯ ಪ್ರಕಾರವಾಗಿ ವೀರಗಾಸೆ, ಪ್ರಸ್ತುತ ಆಧುನಿಕ ರಂಗಭೂಮಿಯಲ್ಲಿ ಗುರುತಿಸುವ ಸಂಗೀತ, ಸಾಹಿತ್ಯ, ನೃತ್ಯ ಮತ್ತು ದೃಶ್ಯಗಳ ಪ್ರದರ್ಶನ ಪ್ರಕಾರವಾಗಿ ರೂಪಕಗಳು.

ಲಂಬಾಣಿ ಭಾಷೆಯ ಹಿನ್ನೆಲೆಯಿಂದ ಬಂದಿರುವ ಮಕ್ಕಳ ಭಾಷಾ ಉಚ್ಚಾರಣೆ ಕನ್ನಡವನ್ನು ಮಾತೃಭಾಷೆಯಾಗಿ ಕಲಿತ ಮಕ್ಕಳಿಗಿಂತ ಭಿನ್ನವಾಗಿತ್ತು. ಈ ರೀತಿಯ ಭಿನ್ನತೆಯು ಅವರದೇ ರೀತಿಯ ಭಾಷಾ ಉಚ್ಚಾರಣೆಯ ಧಾಟಿಯನ್ನು ಅಂದರೆ, ಭಿನ್ನ ಉಸಿರಾಟ ಹಾಗೂ ಉಚ್ಚಾರಣೆಯ ವೇಗ ಏರಿತಗಳನ್ನು ಉಂಟುಮಾಡುತ್ತಿತ್ತು. ಜೊತೆಯಲ್ಲಿ ಸಾಹಿತ್ಯವನ್ನು ಓದುವಾಗ ಮತ್ತು ಓದಿದ್ದನ್ನು ಕಲ್ಪಿಸಿಕೊಂಡು ನೆನಪಿಟ್ಟುಕೊಂಡು ಒಪ್ಪಿಸುವುದು ಕೆಲವರಿಗೆ ಕಷ್ಟವೆನಿಸುತ್ತಿತ್ತು.

ತರಗತಿಯ ಕಲಿಕೆಯು ನಿರಂತರವಾಗಿರಬೇಕಾದರೆ ಕಲಿತ ಅನುಭವ ನಿತ್ಯ ಜೀವನದಲ್ಲಿ ಕಾರ್ಯರೂಪಕ್ಕೆ ಬಂದು ಆಲೋಚನೆಗೆ ಹಚ್ಚಬೇಕು. ಹಾಗೆಯೇ

ತರಗತಿಯಿಂದ ಪ್ರೇರಣೆ ಹೊಂದಿದ ಮಕ್ಕಳು ನಿತ್ಯ ಜೀವನದ ಅನುಭವಗಳನ್ನು, ಕಲಿಕೆಯಾಗಿ ರೂಪಿಸುವ ಆಲೋಚನೆಗಳು ಪಕ್ವವಾಗುವುದೇ ಭಾಷೆ ಮತ್ತು ಸಾಹಿತ್ಯದಿಂದ ಎಂಬುದು ಸ್ಪಷ್ಟವಾಯಿತು. ಅನುಭವ ಆಲೋಚನೆಗಳಾಗಿ, ಆಲೋಚನೆಗಳು ಭಾಷೆಯ ರೂಪದಲ್ಲಿ ಹೊರಬಂದು, ಸಾಹಿತ್ಯದ ರೂಪ ಪಡೆಯುವ ಪ್ರತೀ ಹಂತದಲ್ಲೂ ಮುಖ್ಯವೆನಿಸಿದೆ. ನಮ್ಮ ಯೋಜನೆಯಲ್ಲಿ ತಮ್ಮ ಸುತ್ತಲಿನ ಅಂದರೆ ಮನೆಯಲ್ಲಿ ಹಿರಿಯರಿಂದ ಜನಪದ ಸಾಹಿತ್ಯದ ಗಾದೆ, ಕಥೆ, ಹಾಡು, ಒಗಟುಗಳನ್ನು ತಿಳಿದುಕೊಂಡು ಬಂದು, ತರಗತಿಯಲ್ಲಿ ಹಂಚಿಕೊಳ್ಳುವ ಪ್ರಾಯೋಗಿಕ ತರಗತಿಯನ್ನು ನಡೆಸಲಾಯಿತು. ಆ ಸಂದರ್ಭದಲ್ಲಿ ಮಕ್ಕಳ ಭಾಷೆ ಸರಳ ಹಾಗೂ ಸ್ಥಳೀಯ ಪದ ಸಂಪತ್ತಿನೊಂದಿಗೆ ಹೊರಬರುತಿತ್ತು. ಜೊತೆಗೆ ಸ್ಥಳೀಯತೆಯಲ್ಲಿ ಬಳಸುವ ಪದಗಳನ್ನು ಅರ್ಥೈಸಿಕೊಂಡು ಪದಸಂಪತ್ತನ್ನು ವೃದ್ಧಿಸಿಕೊಳ್ಳಲು ಸಾಧ್ಯವಾಯಿತು. ಭಾಷೆಯು, ಅದರಲ್ಲೂ ಮಾತೃಭಾಷೆಯು ಕಲ್ಪನೆಯನ್ನು ಕೆದಕಿ, ಹೊಸ ಲೋಕಕ್ಕೆ ಕರೆದುಕೊಂಡು ಹೋಗುವಷ್ಟು ಸಮರ್ಥವಾಗಿರುತ್ತದೆ ಎಂಬುದು ಮಕ್ಕಳು ಕಥೆಗಳನ್ನು ಹೇಳುವಾಗ ಸ್ಪಷ್ಟವಾಗುತ್ತಿತ್ತು. ಅನುಭವಗಳನ್ನು ಸುಲಭವಾಗಿ ಮತ್ತೊಬ್ಬರಿಗೆ ದಾಟಿಸಲು ಭಾಷೆಯು ಸಂವಹನ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ. ಸ್ಥಳೀಯತೆಯು ಜ್ಞಾನವಾಹಿನಿಯಾಗಿಯೂ ಪ್ರಾಮುಖ್ಯತೆಯನ್ನು ಹೊಂದಿದೆ.

ಸಾಹಿತ್ಯವು ಅಕ್ಷರರೂಪವೇ ಮುಖ್ಯವಾಗಿ ಹೊರಹೊಮ್ಮುವ ಪ್ರಕ್ರಿಯೆಯಲ್ಲಿ ಸ್ವಂತ ಅನುಭವಗಳನ್ನು ಅಕ್ಷರರೂಪದಲ್ಲಿ ಹೊರತರಲು ಮಕ್ಕಳು ಅಲೋಚನಾ ಪರರಾಗಿ ತಲ್ಲೀನತೆಯಿಂದ ತೊಡಗಿಕೊಳ್ಳುತ್ತಿದ್ದರು. ಬರೆದ ಪುಟಗಳ ಸಂಖ್ಯೆ ಚಿಕ್ಕದಾದರೂ ಅದರೊಳಗಿನ ಅಭಿವ್ಯಕ್ತಿ ಸ್ವಂತಿಕೆಯಿಂದ ಕೂಡಿದುದನ್ನು ಗಮನಿಸಲು ಅವಕಾಶವಿದೆ. ಕಲೆಯೊಳಗೆ ಶಿಕ್ಷಣ (ಪಠ್ಯ ವಿಷಯ)ವನ್ನು ಅಂತರ್ಗತಗೊಳಿಸುವ ಪ್ರಯತ್ನಗಳು ನಮ್ಮ ಪ್ರಯೋಗದ ಹಲವು ಹಂತಗಳಲ್ಲಿ ನಡೆದಿದೆ. ನಾವು ಆಯ್ದುಕೊಂಡ ಕಲಾಪ್ರಕಾರಗಳ ಒಳಗಡೆಯೇ ಹೇಗೆ ಪಠ್ಯದೊಳಗಿನ ಅಂಶಗಳನ್ನು ಅಳವಡಿಸಬಹುದೆಂಬ ಪ್ರಯೋಗಗಳನ್ನೂ ನಡೆಸಲು ಸಾಧ್ಯವಾಯಿತು. ಅವುಗಳಲ್ಲಿ ಗೊಂಬೆಗಳ ಮೂಲಕ ಕಥಾ ಭಾಗಗಳನ್ನು ವಾಚಿಸುವ ಮೂಲಕ ಗೊಂಬೆಯಾಟದೊಳಗೆ ಪಠ್ಯವನ್ನು ಸೇರಿಸುವುದು. ಸಂಭಾಷಣೆಯ ರೂಪದ ಭಾಗಗಳನ್ನು ಕಿರು ನಾಟಕಗಳಾಗಿ ರಂಗಕ್ಕೆ ತರುವುದು. ರೂಪಕ ಪ್ರಕಾರವನ್ನು ಬಳಸಿಕೊಂಡು ಪದ್ಯರೂಪಕಗಳನ್ನು ಮಾಡಿಸುವುದು. ವೀರಗಾಸೆಯ ಒಡಪುಗಳ ಶೈಲಿಯನ್ನು ಹಿಡಿದುಕೊಂಡು ಗದ್ಯ ಮತ್ತು ಪದ್ಯ ಭಾಗಗಳನ್ನು ವೀರಗಾಸೆಯ ಶೈಲಿಗೆ ಅಳವಡಿಸಿಕೊಂಡು ಕಲಿಯಲು ಸಾಧ್ಯವಾಯಿತು. ಕಲೆಯೊಳಗಿನ ಶಿಕ್ಷಣವನ್ನು ಬಹಿರಂಗಗೊಳಿಸುವ ಪ್ರಕ್ರಿಯೆಯಲ್ಲಿ ಜಾನಪದ ಆಟಗಳನ್ನು ಆಡಿಸುವಾಗ ಆದ



ಅನುಭವಗಳನ್ನು ಪಠ್ಯವಿಷಯಗಳಿಗೆ ಸಮೀಕರಿಸಿಕೊಳ್ಳುವ, ಸಂವಾದವನ್ನು ನಡೆಸುವ ಮೂಲಕ, ಅನುಭವಕ್ಕೆ ದಕ್ಕಿದ್ದು ಶಿಕ್ಷಣವಾಗಿ ಅಥವಾ ಕಲಿಕೆಯಾಗಿ ಹೇಗೆ ರೂಪಗೊಳ್ಳುತ್ತದೆ ಎಂಬ ತರಗತಿ ನಡೆಸಲಾಯಿತು. ಈ ಹಂತಗಳಲ್ಲಿ ಮಕ್ಕಳು ತಮ್ಮ ಅನುಭವಗಳನ್ನು ಅವಲೋಕಿಸುವ ಪ್ರಯತ್ನವನ್ನೂ ನಡೆಸಿದರು.

ವೀರಗಾಸೆಯನ್ನು ಆಯ್ದುಕೊಂಡ ನಮ್ಮ ಯೋಜನೆಯು, ವೀರಗಾಸೆಯೊಳಗೆ ಅಂತರ್ಗತಗೊಂಡಿರುವ ಕಲಿಕಾಂಶಗಳನ್ನು ಗುರುತಿಸಿಕೊಳ್ಳುವ ದೃಷ್ಟಿಯಲ್ಲಿ ವೀರಗಾಸೆ ನೃತ್ಯವನ್ನು ನೋಡಲಾಯಿತು. ಹಾಗೆ ನೋಡುತ್ತಾ ವೀರಗಾಸೆಯೊಳಗಿನ ಶಿಕ್ಷಣ ಅಂಶಗಳಾಗಿ ನಾವು ಈ ಮುಂದೆ ಪ್ರಸ್ತಾಪಿಸಿರುವಂತೆ ಕಂಡುಕೊಂಡೆವು. ವೀರಗಾಸೆಯು ಸಾಂಪ್ರದಾಯಿಕ ಕಲೆಯಿಂದ ಜಾನಪದ ಕಲೆಯಾದ ರೀತಿಯನ್ನು ತಿಳಿಯುತ್ತ, ಸ್ಥಳೀಯವಾಗಿ ಪವಾಡದ ರೂಪದಲ್ಲಿ ಪ್ರದರ್ಶಿಸುವ ಹಂತಗಳನ್ನು ವಿಜ್ಞಾನದ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ತರಗತಿಗಳು ನಡೆದವು. ವೀರಗಾಸೆಯ ಕುಣಿತದಲ್ಲಿ ದೈಹಿಕ ಶಿಕ್ಷಣದ ಅಂಶಗಳನ್ನು, ಒಡಪುಗಳ ಅಧ್ಯಯನ ಮತ್ತು ವಾಚಿಸುವ ಕೆಲಸ ಕ್ರಮದಲ್ಲಿ ಸಮಾಜಿಕ ವ್ಯವಸ್ಥೆ, ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಬಗ್ಗೆ, ಸಾಮೂಹಿಕ ಪ್ರಯತ್ನದಲ್ಲಿ ತಂಡವಾಗಿ ಕೆಲಸ ಮಾಡುವ ಬಗ್ಗೆ, ನಾಯಕತ್ವ, ಸಂವಹನ, ಆತ್ಮವಿಶ್ವಾಸಗಳಂತಹ ಜೀವನ ಕೌಶಲ್ಯಗಳ ಬಗ್ಗೆಯೂ ಕಲಿಯಲಾಯಿತು. ವಾದ್ಯಗಳು ಅವುಗಳು ಕೆಲಸ ಮಾಡುವ ರೀತಿ, ಸಿದ್ಧಪಡಿಸುವ ಕೌಶಲಪೂರ್ಣ ವಿಧಾನವನ್ನು ಪರಿಚಯಿಸಲಾಯಿತು. ಆಟಗಳನ್ನು ಆಡುವಾಗ ಅದರಲ್ಲಿನ ಗಣಿತೀಯ ಅಂಶಗಳನ್ನು ಗುರುತಿಸಿಕೊಂಡು ಆಡುವುದು. ತಮ್ಮ ಸ್ಥಳೀಯ ಜನಪದ ನೃತ್ಯವೊಂದರಲ್ಲಿ ಅಡಗಿರುವ ಈ ಎಲ್ಲಾ ಕಲಿಕಾಂಶಗಳನ್ನು ಗಮನಿಸಿ ಮಕ್ಕಳಿಗೆ ಶಿಕ್ಷಣದ ವಿಸ್ತಾರ ಹಾಗೂ ಸ್ವರೂಪದ ಜೊತೆಗೆ ಅಂತರ್ಗತಗೊಂಡಿರುವ ವಿಷಯಗಳನ್ನು ಹೇಗೆ ವಿಂಗಡಿಸಿಕೊಂಡು ನೋಡುವುದು ಹಾಗೂ ಆ ಮೂಲಕ ಕಲಿಕೆಯ ಪ್ರಕ್ರಿಯೆಯು ಹೇಗೆ ಸಾಧ್ಯವೆಂಬುದರ ಪರಿಚಯವೂ ಸಾಧ್ಯವಾಯಿತು.

* * *

**ಮಧುಕರ್ ಎಂ. ಎಲ್.**, ಚಾಮರಾಜನಗರ

ಶಾಲಾ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನ ಹಾಗೂ ಭಾಷೆಯ ದೃಷ್ಟಿಯಿಂದ ನಾಟಕ ಬೋಧನೆಗೆ ವಿಶಿಷ್ಟ ಮಹತ್ವವಿದೆ. ಜನರ ಪಾತ್ರಗಳು, ಮಾನವ ಸಂಬಂಧಗಳು, ವ್ಯಕ್ತಿಯ ಗುಣಲಕ್ಷಣಗಳು, ವಿಭಿನ್ನ ಸಂಧರ್ಭಗಳು, ಕಥಾನಕಗಳು, ಹಾಗೂ ಭಾವನೆಗಳ ಮರುಸೃಷ್ಟಿಯಾದ ನಾಟಕ ಜೀವನ ತತ್ವದರ್ಶನ ಮಾಡಿಸುತ್ತದೆ. ಮನುಷ್ಯನ ನಡೆವಳಿಕೆಯ ವೈಚಿತ್ರಗಳನ್ನು, ಸೂಕ್ಷ್ಮತೆಗಳನ್ನು ಬಿಂಬಿಸುತ್ತದೆ. ಸಂವೇದನಾಶೀಲತೆಯನ್ನು ಜಾಗೃತಗೊಳಿಸುತ್ತದೆ.

ಸೂಕ್ಷ್ಮ ಅವಲೋಕನ ಸಾಮರ್ಥ್ಯ ಶ್ರವಣ ಸಾಮರ್ಥ್ಯ ಹಾಗೂ ಅನುಕರಣ ಶಕ್ತಿ ಇದ್ದಾಗ ಪಾತ್ರಾಭಿನಯದ ಯಶಸ್ಸು ಕಾಣಬಹುದು. ಹಾಗೆಯೇ ವಿದ್ಯಾರ್ಥಿಯು ಸಾಮಾಜಿಕರಣಗೊಳ್ಳುತ್ತಾರೆ. ಸಾಮಾಜಿಕ ಆರ್ಥಿಕ ಸಮಸ್ಯೆಗಳ ಪರಿಚಯವಾಗುತ್ತದೆ.

ಪುನಾರವರ್ತನೆಯ ಹಂತದಲ್ಲಿ ನಾಟಕೀಕರಣವನ್ನು ಒಂದು ಚಟುವಟಿಕೆಯಾಗಿ ಉಪಯೋಗಿಸಿಕೊಂಡು ಕಲಿಕೆಯನ್ನು ಸರಳೀಕರಣಗೊಳಿಸಬಹುದು. ಜೊತೆಗೆ ಭಾಷೆಯ ಪ್ರಬೇಧಗಳನ್ನು ಪರಿಚಯಿಸಬಹುದು. ನಾನು ಕೆಲಸ ಮಾಡುವ ಚಾಮರಾಜನಗರ ಜಿಲ್ಲೆಯು ಗಡಿನಾಡು ಎಂದು ಗುರುತಿಸಿಕೊಂಡಿದೆ, ಇಲ್ಲಿನ ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಸಂವಹನ ನಡೆಸಲು ತಡಕಾಡುವುದು ಉಂಟು. ಅವರಿಗೆ ಕನ್ನಡದ ವಿವಿಧ ಪ್ರಬೇಧಗಳ ಹಾಗೂ ಅದರ ಸೂಕ್ಷ್ಮತೆಗಳೊಂದಿಗೆ ಉಚ್ಚರಿಸುವ, ಗ್ರಹಿಸುವ, ಆಸ್ವಾಧಿಸುವ ಶಕ್ತಿ ಇಲ್ಲಾವಾಗಿದೆ. ಈ ದಿಶೆಯಲ್ಲಿ ಯೋಚಿಸುತ್ತ ಕಲೆಯ ಮೂಲಕ ಮೇಲಿನ ಅಂಶಗಳನ್ನೊಳಗೊಂಡು ಕಲೆಯ ಮೂಲಕ ಕಲಿಕೆಯನ್ನು ಆಸಕ್ತಿದಾಯಕವಾಗಿ ಮಾಡಲು ಚಟುವಟಿಕೆಯಾಗಿ ಒಂದು ಕಲಾ ಪ್ರಕಾರವನ್ನು ತಗೆದುಕೊಂಡು ಅದರ ಮೂಲಕ ವಿದ್ಯಾರ್ಥಿಯ ಸೃಜನಾತ್ಮಕ ಸಾಮರ್ಥ್ಯವನ್ನು ಬೆಳೆಸುವುದು.

ಬೊಂಬೆಯಾಟವು ಗುಂಪೊಂದು ಒಟ್ಟಾಗಿ ಸಾದರಪಡಿಸುವ ಆಟವಾಗಿದೆ. ಮಕ್ಕಳು ತಾವು ತಯಾರಿಸಿದ ಬೊಂಬೆಯನ್ನು ತಮ್ಮಷ್ಟಕ್ಕೆ ತಾವು ಆಡಿಸಲು ಉತ್ಸುಕತೆ ತೋರುತ್ತಾರೆ. ಮಕ್ಕಳು ಬೊಂಬೆಗಳನ್ನು ತಾವೇ ತಯಾರಿಸುವುದರಿಂದ ಅವರಲ್ಲಿ ಕಲ್ಪನಾಶಕ್ತಿ ಹೆಚ್ಚುತ್ತಾ ಹೋಗುತ್ತದೆ, ಸ್ಥಳಿಯವಾಗಿ ಲಭ್ಯವಿರುವ ವಸ್ತುಗಳಿಂದಲೆ ಬೊಂಬೆಗಳನ್ನ ತಯಾರಿಸಬೇಕೆಂಬ ಕಟ್ಟಳೆಯನ್ನು ಹೇರಿಕೊಂಡಲ್ಲಿ ಮಕ್ಕಳು ಸ್ಥಳಿಯವಾಗಿ ಲಭ್ಯವಿರುವ ಯಾವ ಯಾವ ವಸ್ತುಗಳು ಬೊಂಬೆಯಾಟಕ್ಕೆ ಯೋಗ್ಯವಾದದ್ದು ಎಂದು ಯೋಚಿಸುತ್ತಾರೆ. ತ್ಯಾಜ್ಯ ವಸ್ತುಗಳಿಂದ ಬೊಂಬೆಯೊಂದಕ್ಕೆ ರೂಪಕೊಡುವ ನಿಟ್ಟಿನಲ್ಲಿ ಅವರ ಸೌಂದರ್ಯ ಪ್ರಜ್ಞೆ ಕೆಲಸ ಮಾಡುತ್ತದೆ. ಪಠ್ಯ ವಿಷಯಗಳಿಗೆ ಅನುಗುಣವಾಗಿ ಸಂಭಾಷಣೆ ರಚಿಸಿಕೊಂಡು ಬೊಂಬೆಗಳನ್ನು ತಯಾರು ಮಾಡಿಕೊಂಡು ಹಾಗೂ ಬೊಂಬೆಯಾಟ ವಿವಿಧ ಪ್ರಕಾರಗಳ ಕಲೆಯನ್ನು ಕಲಿತು ತನ್ನ ಕಲಿಕೆಯನ್ನು ಉತ್ತಮ ಪಡಿಸಿಕೊಳ್ಳಬಹುದು. ಇದರಿಂದ ವಿದ್ಯಾರ್ಥಿಯು–ಭಾಷಿಕವಾಗಿ–ಸಾಹಿತ್ಯಕವಾಗಿ–ಸಾಂಸ್ಕೃತಿಕವಾಗಿ ಲಾಭ ಪಡೆಯಬಹುದು.

* * *

**ಗಂಗಾಧರ ನಾಯ್ಕ,** ಶಿರಸಿ.

ಕಲಿಕಾ ಪ್ರಕ್ರಿಯೆಯು ಆಸಕ್ತಿದಾಯಕವಾಗಿ, ಕಲಿಕೆಯ ಫಲಗಳು ಪೂರ್ಣ ಪ್ರಮಾಣದಲ್ಲಿ ಕಲಿಕಾರ್ಥಿಗೆ ದಕ್ಕುವಂತಾಗಲು ಕಲಾಂತರ್ಗತ ಕಲಿಕೆಯು ಉತ್ತಮ ಮಾಧ್ಯಮ ಅಥವಾ ಸಾಧನವಾಗಿದೆ. ಕಲಾ ಅಂತರ್ಗತ ಕಲಿಕೆಯೆಂದರೆ "ಕಲಿಕಾ



ಪ್ರಕ್ರಿಯೆಯಲ್ಲಿ ಸೂಕ್ತವಾದ ಕಲಾ ಮಾಧ್ಯಮವನ್ನು ಸಂರ್ಭಕ್ಕೆ ಅಳವಡಿಸಿಕೊಳ್ಳುವುದೇ ಆಗಿದೆ. ಇಲ್ಲಿ ನಿಶ್ಚಿತ ಕಲಿಕಾ ಗುರಿಯನ್ನು ಮುಟ್ಟುವುದಕ್ಕಾಗಿ ಕಲೆಯನ್ನು ಮಾಧ್ಯಮವಾಗಿ ಬಳಸಿಕೊಳ್ಳುವುದು. ಅಂದರೆ ಸಾಂಪ್ರದಾಯಿಕವಾದ 'ಚಾಕ್ ಎಂಡ್ ಟಾಕ್' ಪದ್ದತಿಯ ಬದಲಿಗೆ, ಮಗು ಸ್ನೇಹಿಯಾದ ದೃಶ್ಯ ಕಲೆಗಳಾದ ಸಿನೇಮಾ, ಕ್ರಾಫ್ಟ್, ಚಿತ್ರಕಲೆ ಇತ್ಯಾದಿಮತ್ತು ಅಭಿನಯ ಕಲೆಗಳಾದ ನೃತ್ಯ, ಸಂಗೀತ, ನಾಟಕ ಇತ್ಯಾದಿಗಳು ಹಾಗೂ ಸಾಹಿತ್ಯ ಪ್ರಕಾರಗಳಾದ ಕಥೆ, ಕವನ, ಲಾವಣಿ, ಜಾನಪದ ಇತ್ಯಾದಿಗಳನ್ನು ಬಳಸಿಕೊಂಡು ನಿಶ್ಚಿತ ಕಲಿಕಾ ಗುರಿಯನ್ನು ತಲುಪಲು ಪ್ರಯತ್ನಿಸುವುದು. ಇಲ್ಲಿ ಅತ್ಯಂತ ಜಾಗರೂಕತೆಯಿಂದ ತಿಳಿದುಕೊಳ್ಳಬೇಕಾದುದೆಂದರೆ ಕಲಾ ಅಂತರ್ಗತ ಕಲಿಕೆಯಲ್ಲಿ ಕಲೆಯನ್ನು ಪರಿಪೂರ್ಣವಾಗಿ ಕಲಿಸುವುದು ಉದ್ಧೇಶವಾಗಿರುವುದಿಲ್ಲ. ಬದಲಿಗೆ,

೧) ಕಲಾ ಮಾಧ್ಯಮದ ಮೂಲಕ ಗುಣಮಟ್ಟದ ಕಲಿಕೆಯನ್ನು ಸಾಧ್ಯವಾಗಿಸುವುದು.

೨) ಸುಪ್ತವಾಗಿರುವ ಸೃಜನಶೀಲತೆಯ ಅರಳುವಿಕೆಗೆ ಅವಕಾಶ ಒದಗಿಸುವುದು.

೩) ಕಲೆ ಹಾಗೂ ಕಲಿಕೆಯನ್ನು ಅಥವಾ ಕಲೆಯೊಂದಿಗೆ ಕಲಿಕೆಯನ್ನು ಸಂಲಗ್ನಗೊಳಿಸುವುದು.

೪) ಒತ್ತಡದ ಕಲಿಕೆಯನ್ನು, ಆಸಕ್ತಿದಾಯಕ ಕಲಿಕೆಯಾಗಿಸುವುದು.

೫) ಕಲಾಸಕ್ತಿ ಇರುವವರಿಗೆ ಕಲಿಕೆಯಲ್ಲಿಯೂ, ಕಲಿಕೆಯಲ್ಲಿ ಅಸಕ್ತಿ ಇರುವವರಿಗೆ ಕಲೆಯಲ್ಲಿಯೂ ಆಸಕ್ತಿ ಮೂಡಿಸಿ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಅವಕಾಶ ಕಲ್ಪಿಸುವುದು.

೬) ವ್ಯಕ್ತಿತ್ವ ವಿಕಸನದ ತಾಯಿ ಬೇರುಗಳಾಗಿರುವ ಎಡ ಮತ್ತು ಬಲ ಮೆದುಳುಗಳೆರಡನ್ನೂ ಸಕ್ರಿಯಗೊಳಿಸುವ ಮೂಲಕ ಔನ್ನತ್ಯದತ್ತ ಸಾಗಲು ಪ್ರಯತ್ನಿಸುವುದು.

ಈ ಉದ್ದೇಶಗಳ ಸಾಧನೆಗಾಗಿ ಕಲೆ ಅಂತರ್ಗತ ಕಲಿಕಾ ಪ್ರಯೋಗವನ್ನು ತರಗತಿ ಕಲಿಕೆಯಲ್ಲಿ ಅಳವಡಿಸಿಕೊಳ್ಳುವುದು ಸೂಕ್ತವಾದುದಾಗಿದೆ. ಇದರಿಂದಾಗಿ ಮಕ್ಕಳು ವಿಷಯದ ಕುರಿತು ತಮ್ಮದೇ ಆಲೋಚನೆಗಳು ಹಾಗೂ ಗ್ರಹಿಕೆಯನ್ನು ಪುಟ್ಟದಾಗಿ ಮತ್ತು ಸರಳವಾಗಿ ವ್ಯಕ್ತಪಡಿಸಲು ಸಾಧ್ಯವಾಯಿತು. ಈ ಯೋಜನೆಯ ಹಿನ್ನೆಲೆಯ ಆದಾರದಲ್ಲಿ ಕಂಡುಕೊಂಡ ಸತ್ಯಗಳು/ ಶೋಧಗಳು/ ಗ್ರಹಿಕೆಗಳು ಇಂತಿವೆ ;

೧) ಮಕ್ಕಳು (ಕಲಿಕೆಯಲ್ಲಿ ಹಿಂದುಳಿದವರೂ ಸಹ) ಅತ್ಯಂತ ಆಸಕ್ತಿಯಿಂದ ತೊಡಗಿಸಿಕೊಂಡರು.

೨) ತಾವೂ ಸಹ ಕವನಗಳನ್ನು ರಚಿಸಬೇಕು, ಆ ಮೂಲಕ ಕಲಿಯಬೇಕೆಂಬ ಅತ್ಯುತ್ಸಾಹವನ್ನು ತೋರಿಸಿದರು.

೩) ಪಾಲ್ಗೊಂಡ ಮಕ್ಕಳಲ್ಲಿ ಆತ್ಮವಿಶ್ವಾಸವು ಎದ್ದು ಕಾಣುತ್ತಿತ್ತು.

೪) ತಾವೂ ಕವನಗಳನ್ನು ರಚಿಸುತ್ತೇವೆ, ರಚಿಸಬಲ್ಲೆವೆಂಬ ಹೆಮ್ಮೆಯ ಭಾವ ಅವರನ್ನು ತುಂಬಿಕೊಂಡಿತ್ತು.

೫) ಆಸಕ್ತಿಯಿಂದ ಶಾಲೆಗೆ ಬರುತ್ತಿದ್ದರು.

೬) ಇತರ ಶಿಕ್ಷಕರುಗಳಿಗೂ ಸಹ, ತಾವು ಈ ರೀತಿಯ ಕಲಾಂತರ್ಗತ ಚಟುವಟಿಕೆಗಳ ಮೂಲಕ ಕಲಿಕಾ ಪ್ರಕ್ರಿಯೆಯನ್ನು ಹಮ್ಮಿಕೊಳ್ಳಬೇಕೆಂಬ ಪ್ರೇರಣೆಯನ್ನು ನೀಡಿ, ಆ ದಿಕ್ಕಿನಲ್ಲಿ ಆಲೋಚಿಸುವಂತೆ ಮಾಡಿತು.

೭) ಪೋಷಕರು ಹಾಗೂ ಸಮುದಾಯ ಈ ಯೋಜನೆಯ ಕುರಿತು ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

೮) ಇಲಾಖೆಯ ಅಧಿಕಾರಿಗಳೂ ಸಹ ತರಗತಿ ಕೋಣೆಯಲ್ಲಿ ಕಲಿಕೆಗೆ ಸಂಬಂಧಿಸಿದಂತೆ ಆಯ್ಕೆ ಮಾಡಿಕೊಂಡಿರುವ ನಾವೀನ್ಯಯುತ ಪ್ರಯೋಗದ ಕುರಿತು ಕುತೂಹಲದ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

೯) ಬಹುಮುಖ್ಯವಾಗಿ ವಿದ್ಯಾರ್ಥಿಗಳು ಈ ಕವನರಚನೆಯ ಕೌಶಲವನ್ನು ಕಲಿಕೆಯ ಇತರ ವಿಷಯಗಳಿಗೂ ವಿಸ್ತರಿಸುವ ಪ್ರಯತ್ನವನ್ನು ಮಾಡತೊಡಗಿದರು.

ಹೀಗೆ, ಕಲಿಕೆಗಾಗಿ ಅಳವಡಿಸಿಕೊಂಡ ಸಾಹಿತ್ಯ–ಕಲಾ ಮಾಧ್ಯಮವು ಕಲಿಕೆಯೊಂದಿಗೆ ಅಂತರ್ಗತಗೊಂಡು ವಿದ್ಯಾರ್ಥಿಯು, ಕಲಿಕೆಯನ್ನು ಆಸ್ವಾದಿಸುವಂತೆ ಮಾಡಿತು. ಸಂತಸದ ಹಾಗೂ ಆಸಕ್ತಿಯ ಕಲಾ ಅನುಭವಗಳನ್ನು ವಿದ್ಯಾರ್ಥಿಗಳು ಅನುಭವಿಸಿದರು. ಕಲಿಕೆಯ ಫಲಗಳನ್ನು ಇತರ ಕ್ಷೇತ್ರಗಳಿಗೆ ವಿಸ್ತರಿಸುವ ಸಾಮರ್ಥ್ಯವನ್ನು ನಿಡಿತು. ಸ್ವಕಲಿಕೆಗೆ ಪ್ರೇರೇಪಣೆಯನ್ನು ನೀಡಿತು. ಜೊತೆಗೆ ಸಮುದಾಯ ಪೋಷಕರು ಇತರರೆಲ್ಲರೂ ಒಳಗೊಳ್ಳುವ ಕ್ರಿಯೆಗೆ ಕಾರಣವಾಯಿತೆಂಬುದನ್ನು ಹೆಮ್ಮೆಯಿಂದ ಹೇಳುತ್ತೇನೆ.

* * *

**ಭಾರತಿ ಎ. ಕೊಪ್ಪ,** ಚಿಕ್ಕಮಂಗಳೂರ

ನಮ್ಮ ಶಾಲಾ ವ್ಯಾಪ್ತಿಯಲ್ಲಿ ೬ ರಿಂದ ೧೪ ವಯಸ್ಸಿನ ಮಕ್ಕಳು ಮೌಖಿಕ ಅಭಿವ್ಯಕ್ತಿಯಲ್ಲಿ ಸಾಕಷ್ಟು ಸೃಜನಶೀಲರಾಗಿದ್ದಾರೆ. ಅವರ ದೈನಂದಿನ ಅನುಭವಗಳಿಗೆ, ಸಮುದಾಯದ ಸಹಭಾಗಿತ್ವದ ಹಲವು ಚಟುವಟಿಕೆಗಳನ್ನು ಬರಹ ರೂಪದಲ್ಲಿ



ತಾವೇ ತಮ್ಮ ಅನುಭವ ಬರೆಯಲು ಅವಕಾಶ ನೀಡುವ ಉದ್ದೇಶದಿಂದ ಯೋಜನೆ ಕೈಗೆತ್ತಿಕೊಂಡೆ.

ಬರವಣಿಗೆ ಭಾಷಾ ಅಭಿವ್ಯಕ್ತಿಯ ಪ್ರಮುಖವಾದ ಕೌಶಲವಾಗಿದೆ. ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ಮಗು ತಾನು ನೋಡಿದ್ದನ್ನು, ಕೇಳಿದ್ದನ್ನು ಇನ್ನೊಬ್ಬರಿಗೆ ಮೌಖಿಕವಾಗಿ ವರ್ಗಾಯಿಸುವಾಗ ತನ್ನ ಆಡುಭಾಷೆಯಲ್ಲಿ ಎಷ್ಟು ನಿರರ್ಗಳವಾಗಿ ವರ್ಗಾಯಿಸುತ್ತಾನೆಯೋ, ಹಾಗೆಯೇ ತನ್ನ ಅನುಭವಗಳನ್ನು ಬರವಣಿಗೆ ರೂಪದಲ್ಲಿ ದಾಖಲಿಸಿ ವರ್ಗಾಯಿಸಿದಾಗ ಅದಕ್ಕೊಂದು ಹೊಸ ರೂಪ ಬರುತ್ತದೆ ಎಂಬುದನ್ನು ಮನಗಂಡಿರುವೆ.

ಅವರು ಬಿಡುವಿನ ಸಮಯದ ಸದುಪಯೋಗಕ್ಕಾಗಿ ಓದುವ ಕಥೆ ಪುಸ್ತಕಗಳು, ಬರೆಯುವ ಚಿತ್ರಗಳು, ಚಲನಚಿತ್ರಗಳ ವೀಕ್ಷಣೆ ಇವೆಲ್ಲವನ್ನು ತನ್ನದೇ ಯೋಚನೆ ಹಾಗೂ ದೃಷ್ಟಿಕೋನದಲ್ಲಿ ಮಗು ಅರ್ಥೈಸಿಕೊಂಡು ಬರೆಯುವುದಕ್ಕೆ ಪ್ರೇರಣೆ ಬೇಕು. ಮನಸ್ಸಿಗೆ ತೋಚಿದ್ದನ್ನು ಬರೆಯುವ, ಹಿರಿಯರಿಂದ ದೈನಂದಿನ ಸಂವಾದದಲ್ಲಿ ಪಡೆದ ಅನುಭವವನ್ನು ಬರೆಯುವ, ಸಮುದಾಯದ ಜನರೊಂದಿಗೆ ತಾನು ಭಾಗಿಯಾದ ಮತ್ತು ಹಂಚಿಕೊಂಡ ವಿಷಯಗಳನ್ನು ಬರೆಯುವ ಅಭ್ಯಾಸವನ್ನು ಮಗುವಿಗೆ ಪ್ರೇರೆಪಿಸುವ ಉದ್ದೇಶ ಈ ಯೋಜನೆಯಿಂದ ಸಾಧ್ಯವಾಗಬಹುದಾಗಿದೆ.

ಮಗುವಿನ ಬರವಣಿಗೆಗೆ ಯಾವುದೇ ನಿರ್ಬಂಧ ಹೇರದೇ ಮಗು ತನ್ನ ಅಭಿವ್ಯಕ್ತಿಯನ್ನು ಕವನ, ಹನಿಗವನ, ಚುಟುಕು, ಸಣ್ಣಕಥೆ, ನಗೆಹನಿ ಹೀಗೆ ಯಾವುದೇ ಸಾಹಿತ್ಯಿಕ ರೂಪದಲ್ಲಿ ದಾಖಲಿಸುವ ಮುಕ್ತ ಅವಕಾಶವನ್ನು ಮಗುವಿಗೆ ನೀಡಲಾಯಿತು. ಅಕ್ಷರ ಬರಹದೊಂದಿಗೆ ಚಿತ್ರ ಬರಹವೂ ಒಂದಿಷ್ಟು ಅಭಿಪ್ರಾಯ ಹಂಚಿಕೆಗೆ ಸಹಕಾರಿಯಾಗುವುದರಿಂದ, ತನ್ನ ಅಭಿವ್ಯಕ್ತಿಯ ಚಿತ್ರ ಬರೆಯಲು ಸಹ ಮುಕ್ತ ಅವಕಾಶ ನೀಡಲಾಯಿತು.

ಯಾವುದೋ ಪುಸ್ತಕದ ಮಾಹಿತಿಯನ್ನು ಮಗು ನೇರವಾಗಿ ವರ್ಗಾಯಿಸದೇ, ಯಾರದೋ ಯೋಚನೆಯನ್ನು ತಾನು ದಾಖಲಿಸದೆ, ತನ್ನ ಪರಿಸರದ ಭಾಷೆಯ ಸೊಗಡಿನಲ್ಲೇ, ತನ್ನ ಪರಿಸರದ ಜನರಿಗೆ ಹೆಚ್ಚು ಪರಿಣಾಮಕಾರಿಯಾಗಿ ತಲುಪುವ ವಿಷಯವನ್ನು ಮಗು ಚಿಕ್ಕದಾಗಿ ಚೊಕ್ಕದಾಗಿ, ನಿರ್ಬಂಧ ರಹಿತವಾಗಿ ಬರೆಯಲು ಅವಕಾಶ ಮಾಡಿಕೊಡಲಾಯಿತು.

ಮಕ್ಕಳಲ್ಲಿ ಸೃಜನಶೀಲತೆಯನ್ನು ಬೆಳೆಸುವಲ್ಲಿ ಮತ್ತು ಬರವಣಿಗೆ ಕೌಶಲ ರೂಢಿಸುವ ಉದ್ದೇಶದಿಂದ ಸಮುದಾಯವನ್ನು ಬಳಸಿಕೊಂಡು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಯಿತು. ಕೊಪ್ಪ ಸುತ್ತಮುತ್ತಲಿನ ಪರಿಸರದ ಕಥೆಗಳನ್ನು ಕಾರ್ಯಾಗಾರದ ಮೂಲಕ ಮಕ್ಕಳಿಗೆ ತಿಳಿಸಿಕೊಡಲಾಯಿತು.

* * *

**ಕಾವ್ಯ ಚಂದ್ರಶೇಖರ್,** ಬೆಂಗಳೂರು

ಮಕ್ಕಳು ದೈಹಿಕ ಚಲನೆಗಳನ್ನು ಸಂಗೀತದ ಮೂಲಕ ಆವಿಷ್ಕರಿಸಲು, ಸಂಗೀತದ ಲಯವನ್ನು ತಿಳಿಯಲು, ಮಕ್ಕಳ ಆಲೋಚನೆಗಳನ್ನು ಸಕಾರಾತ್ಮಕವಾಗಿ ಪರಿವರ್ತಿಸಲು, ಕುತೂಹಲವನ್ನು ಉತ್ತೇಜಿಸಿ ಹಾಗೂ ಸೃಜನಾತ್ಮಕ ಯೋಚನೆಗಳಲ್ಲಿ ಪ್ರಚುರಪಡಿಲು 'ಸೃಜನಾತ್ಮಕ ಚಲನೆ' ಅನುವು ಮಾಡಿಕೊಡುತ್ತದೆ. ಚಲನೆಗಳು ಸಂಗೀತ ಮತ್ತು ನಾಟಕದ ಆಯಾಮಗಳಾಗಿದ್ದು ಮಕ್ಕಳಲ್ಲಿ ಸೃಜನಾತ್ಮಕತೆ ಹೊರಹೊಮ್ಮಬೇಕೆನ್ನುವುದು ಈ ಪ್ರಯೋಗದ ಉದ್ದೇಶವಾಗಿದೆ.

ಯೋಜನೆಯು ಪ್ರಾರಂಭಾವಾದ ದಿನಗಳಲ್ಲಿ ಮಕ್ಕಳ ದೈಹಿಕ, ಮಾನಸಿಕ ನಿರ್ಬಂಧನೆಗಳನ್ನು ಹೋಗಲಾಡಿಸಲು ಆಟಗಳನ್ನು ಹಾಗೂ ರಂಗಭೂಮಿ ಚಟುವಟಿಕೆಗಳನ್ನು ಮಾಡಿಸಲಾಯಿತು. ನಂತರ ಮೂರು ಘಟಕಗಳಲ್ಲಿ ಮಕ್ಕಳನ್ನು ವಿಂಗಡಿಸಿ (ಚಲನೆ, ಸಂಗೀತ, ನಾಟಕ) ಚಟುವಟಿಕೆಗಳ ಮೂಲಕ ಕಲಿಸಲು ಪ್ರಾರಂಬಿಸಲಾಯಿತು. ಮಕ್ಕಳು ಒಂಟಿಯಾಗಿ, ಜೋಡಿಯಾಗಿ ಹಾಗೂ ಗುಂಪಿನಲ್ಲಿ ಭಾಗವಹಿಸಿ ಕಲಿಯುವಂತೆ ಚಟುವಟಿಕೆ ರೂಪಿಸಲಾಯಿತು. ಈ ಚಟುವಟಿಕೆಗಳು ಮಕ್ಕಳ ಭಾಷಾ ಬಳಕೆಯ ಮೇಲೆ ನಿಧಾನವಾಗಿ ಪ್ರಭಾವ ಬೀರಿದವು. ಪ್ರತೀ ಸಂದರ್ಭದಲ್ಲಿಯೂ ಮಕ್ಕಳು ನಿಗದಿತ ಚಟುವಟಿಕೆಗಳನ್ನು ನಿರ್ವಹಿಸುವಾಗ ಅವರು ತಮಗೆ ಅರಿವಿರದೆ ಅಭಿನಯದಲ್ಲಿ ಭಾಷೆಯ ಮೇಲಿನ ಹಿಡಿತವನ್ನು ಸಾಧಿಸುತ್ತಾ ಸಾಗಿದರು. ಸಂಭಾಷಣೆ, ಚಿಕ್ಕ ಹಾಡುಗಳು ಅವರಿಗೆ ಮತ್ತಷ್ಟು ಉತ್ಸಾಹದ ಜೊತೆಗೆ ಭಾಷೆಯ ಮೇಲಿನ ಹಿಡಿತ ಸಾಧಿಸಲು ಸಹಾಯಕವಾದವು. ಜೊತೆಗೆ ಅವರಿಗೆ ಅರಿವಿರದ ಆಂಗಿಕ ಭಾಷೆ, ಮಾತಿನ ಶೈಲಿ ಬದಲಾಯಿತು.

ಮಕ್ಕಳು ಕೇವಲ ಭಾಷೆಯನ್ನು ಪ್ರಯೋಗಿಸುವ ರೀತಿಯನ್ನು ಕಲಿಯದೇ ತಮ್ಮ ಆಂಗಿಕ ಅವಕಾಶಗಳನ್ನು ಸಾಹಿತ್ಯದ ಅನೇಕ ಮಜಲುಗಳನ್ನು ಪರಿಚಯ ಮಾಡಿಕೊಳ್ಳ ತೊಡಗಿದರು. ನಾಟಕ ಅಭಿನಯ ಹಾಗೂ ರೂಪಕಗಳನ್ನು ಅಭಿನಯಿಸುವಾಗ ಸಾಹಿತ್ಯ ಪ್ರಕಾರಗಳಾದ ಹಾಡುಗಾರಿಕೆ ಸುಧೀರ್ಘ ಮಾತುಗಳನ್ನು ಹೇಳುವುದು, ಅಲ್ಲಲ್ಲಿ ಏರಿಳಿತಗಳನ್ನು ಮಾಡುವುದು ಸೇರಿದಂತೆ ಉತ್ತಮ ಸಂವಹನಶೀಲರಾಗಿ ರೂಪಗೊಳ್ಳತೊಡಗಿದ್ದಾರೆ.

* * *

**ಎಂ. ಜೆ. ರಾಜೀವಗೌಡ,** ಚಿಕ್ಕಬಳ್ಳಾಪುರ

ಯಾವುದಾದರೂ ಒಂದು ಕಥೆಯನ್ನು ಮಕ್ಕಳಿಗೆ ಹೇಳುವಾಗ, ಆ ಕಥೆಯ ದೃಶ್ಯಗಳು, ಸನ್ನಿವೇಶಗಳು ಮಕ್ಕಳ ಕಣ್ಣುಗಳಲ್ಲಿ ಮೂಡುವುದನ್ನು ಗಮನಿಸಿದ್ದೇನೆ. ಮನಸ್ಸಿನೊಳಗಿನ ಸಂತೋಷ ಅವರ ಕಣ್ಣುಗಳಲ್ಲಿ ಮಿನುಗುತ್ತಿರುತ್ತದೆ. ಆದರೆ...



ವಿಜ್ಞಾನ, ಸಮಾಜಶಾಸ್ತ್ರ, ಪೌರನೀತಿ, ಭೂಗೋಳ ಮುಂತಾದ ವಿಷಯಗಳನ್ನು ಹೇಳುವಾಗ ಕಣ್ಣುಗಳಲ್ಲಿ ಜೀವಂತಿಕೆಯ ಕುರುಹು ಕಾಣುವುದಿಲ್ಲ. ಗಣಿತ ವಿಷಯದ ತರಗತಿಗಳಲ್ಲಂತೂ ಮಕ್ಕಳು ಪೂರ್ತಿ ಮೂಕರೂ ಕಿವುಡರೂ ಆಗಿಹೋಗುತ್ತಾರೆ. ಯಾಕೆ ಹೀಗೆ..? ನಮಗೆ ತಿಳಿದಂತೆ ಕಲಿಯುವುದರ ಜೊತೆ ಸಂತಸ ಅಥವಾ ಖುಷಿ ಇಲ್ಲದಿರುವುದೇ ಇದಕ್ಕೆ ಕಾರಣ. ಯಾಕೆ ಹೀಗಾಗುತ್ತದೆ..? ಬಹುಶಃ ನನಗೆ ತಿಳಿದಂತೆ ಈ ವಿಷಯಗಳನ್ನು ನಾವೂ ಸಹ ಕೇವಲ ಪರೀಕ್ಷೆ ಪಾಸಾಗಲು ಮಾತ್ರ ಕಲಿತಿದ್ದೇವೆ. ಅಥವಾ ಮನೆಯ ಹಿರಿಯರ ಒತ್ತಡಕ್ಕೆ ಶಾಲೆ ಮುಗಿಸಿದ್ದೇವೆ. ಅಂದರೆ ನಾವು ಕಲಿಯುವಾಗಲೂ ಅವು ನಮಗೆ ಸಂತಸವನ್ನು ಕೊಟ್ಟಿರಲಿಕ್ಕಿಲ್ಲ. (ಔಷಧಿಯನ್ನು ಬೆಲ್ಲದ ಜೊತೆ ತಿನಿಸುತ್ತಿದ್ದ ನಮ್ಮ ಅಜ್ಜಿಯ ಕ್ರಿಯೆ ನೆನಪಿಗೆ ಬರುತ್ತದೆ..!)

ಕಲಿಸಲು ಪ್ರಯತ್ನಿಸುವಾಗ ಇದು ನನ್ನನ್ನು ಸದಾ ಕಾಡುತ್ತಿದ್ದ ಪ್ರಶ್ನೆ. ೩೫+೭೬ ಎಷ್ಟು ಎನ್ನುವ ಪ್ರಶ್ನೆಗೆ (ಎರಡನೇ ತರಗತಿಯಲ್ಲಿ) ಉತ್ತರಿಸಲು ಮಕ್ಕಳು ತಡಕಾಡುತ್ತಾರೆ. ಸ್ವಲ್ಪ ಸಮಯ ಕೊಟ್ಟು ಸ್ವಲ್ಪ ಒತ್ತಡ ಹಾಕಿದರೆ ಹತ್ತರಲ್ಲಿ ಇಬ್ಬರೊ, ಮೂವರೊ ಮಕ್ಕಳು ಮಾತ್ರ ಉತ್ತರಿಸುತ್ತಿದ್ದರು. ಅದೇ ಸಮಸ್ಯೆಯನ್ನು ಮನೆಯಲ್ಲಿದ್ದ ೩೫ ಮಿಠಾಯಿಗಳ ಜೊತೆಗೆ, ಅಮ್ಮ ಮತ್ತೆ ೭೬ ಮಿಠಾಯಿಗಳನ್ನು ಮಾಡಿದರು. ಈಗ ಮನೆಯಲ್ಲಿ ಒಟ್ಟು ಎಷ್ಟು ಮಿಠಾಯಿಗಳು ಇರುತ್ತವೆ ಎಂದು ಕೇಳಿದಾಗ ಉತ್ತರಿಸುವವರ ಸಂಖ್ಯೆ ಏಳಕ್ಕೆ ಜಿಗಿಯಿತು. ಅಂದರೆ ಎಲ್ಲ ಮಕ್ಕಳಲ್ಲೂ ಗಣಿತೀಯ ಆಲೋಚನೆ' ಎಂಬುದು ಅಂತರ್ಗತವಾಗಿರುತ್ತದೆ. ಅದನ್ನು ಸರಿಯಾದ ಕ್ರಮದಲ್ಲಿ ಜಾಗೃತಗೊಳಿಸಬೇಕು ಎಂಬುದು ಅರ್ಥವಾಗುತ್ತಿತ್ತು. ಪಠ್ಯಪುಸ್ತಕಗಳಿಗೆ ಪರ್ಯಾಯವಾಗಿ ಗಣಿತದ ಮೂಲ ಸಾಮರ್ಥ್ಯಗಳನ್ನು ಕಲಿಸಲು ಬೇಕಾದ ಸ್ಥಳೀಯವಾದ, ಆ ಮಕ್ಕಳ ಪರಿಸರದಲ್ಲಿನ ಸನ್ನಿವೇಶಗಳಿಗೆ ಅನುಗುಣವಾದ ಕಥೆಗಳು ಅಥವಾ ಕಥಾರೂಪದ ಸಮಸ್ಯೆಗಳನ್ನೊಳಗೊಂಡ ಅಭ್ಯಾಸದ ಹಾಳೆಗಳನ್ನು ನಾನು ಸಿದ್ಧಪಡಿಸಿಕೊಳ್ಳುತ್ತಿದ್ದೆ. ಇದರಿಂದ ಕಲಿಯುವ ಮಕ್ಕಳ ಸಂಖ್ಯೆ ಹೆಚ್ಚಿತು. ಗಣಿತ ತರಗತಿಗಳಲ್ಲಿ ಖುಷಿಯ ಪ್ರವೇಶವಾಯಿತು. ಆದರೂ ಉಳಿಯುತ್ತಿದ್ದ ಇನ್ನೂ ಮೂರ್ನಾಲ್ಕು ಮಕ್ಕಳ ಸಮಸ್ಯೆಗಳನ್ನು ಗಮನಿಸಿದಾಗ ಆ ಮಕ್ಕಳಲ್ಲಿ ಭಾಷೆಯೇ ಸಮಸ್ಯೆಯಾಗಿರುವುದು ಅರಿವಿಗೆ ಬಂತು.

ಗಣಿತೀಯ ಆಲೋಚನೆ ಎಂದರೆ ಅಮೂರ್ತ ಆಲೋಚನೆ. ಪದದ ಅರ್ಥ ಮತ್ತು ಆ ಪದಕ್ಕೆ ಸಂವಾದಿಯಾದ ಚಿತ್ರವೊಂದು ಮನಸ್ಸಿನಲ್ಲಿ ಮೂಡಲೇಬೇಕು. ಆಗ ಮಾತ್ರ ಗಣಿತವೊಂದೇ ಅಲ್ಲ ಎಲ್ಲ ವಿಷಯಗಳೂ ಕಲಿಯಲು ಸುಲಭವಾಗುತ್ತಾ ಹೋಗುತ್ತವೆ. ಅಮೂರ್ತ ಕಲ್ಪನೆಗಳು ಮನಸ್ಸಿನಲ್ಲಿ ಮೂಡತೊಡಗುವುದು ಚಿಕ್ಕಂದಿನಲ್ಲಿ ಕೇಳುವ ಕಥೆಗಳಿಂದ, ಹಾಡುವ ಹಾಡುಗಳಿಂದ, ಮಾಡುವ ನಾಟಕ, ಆಡುವ ಆಟಗಳಿಂದ. ಇದು ಗಣಿತವೊಂದೇ ಅಲ್ಲ ಎಲ್ಲ ವಿಷಯಗಳ ಕಲಿಕೆಗೂ ಭದ್ರ ಬುನಾದಿಯನ್ನು ಒದಗಿಸುತ್ತದೆ.

ಲೆಕ್ಕ ಬಿಡಿಸುವುದು ಎಂದರೆ ಸಿದ್ಧ ಸೂತ್ರದ ಅನುಸಾರ ಲೆಕ್ಕ ಬಿಡಿಸೋದಲ್ಲ. ಅದನ್ನು ಪರಿಹರಿಸಲು ನಡೆಸುವ ಆಲೋಚನಾ ಕ್ರಿಯೆಗಳ ಸರಪಳಿ. ಈ ಕ್ರಿಯೆ ನಡೆಸಲು ಬೇಕಾದು ಭಾಷಾ ಸಾಮರ್ಥ್ಯ ಮತ್ತು ಕಲ್ಪಿಸುವ ಶಕ್ತಿ. ಪ್ರತಿಯೊಂದರ ಹಿಂದಿನ ಕಾರಣವನ್ನು ಅರಿಯುವುದು ಮತ್ತು ಮುಂದಿನದಕ್ಕೆ ಕಾರಣವನ್ನು ಊಹಿಸುವುದು ಎರಡೂ ಅದ್ವಿತೀಯ ಸಾಮರ್ಥ್ಯಗಳೇ. ಪರಿಕಲ್ಪನೆ ಮೂಡಿಸುವಾಗ ಚಿಕ್ಕ ಸಂಖ್ಯೆಗಳ ಜೊತೆ ಯಾವುದೇ ಕ್ರಿಯೆ ನಡೆಸಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಸಂಖ್ಯೆಗಳು ದೊಡ್ಡವಾದಂತೆ ಅಥವಾ ಒಟ್ಟೊಟ್ಟಿಗೆ ಎರಡು ಮೂರು ಕ್ರಿಯೆಗಳನ್ನು ಮಾಡಬೇಕಾದಾಗ ಆಲೋಚನಾ ಕ್ರಿಯೆಯ ಸರಪಳಿ ಮುಖ್ಯವಾಗುತ್ತದೆ. ಪ್ರತಿ ಕ್ರಿಯೆಯ ಫಲಿತ ಮುಂದಿನ ಕ್ರಿಯೆಗೆ ಆರಂಭವಾಗಿರುತ್ತದೆ. ಕಲಿಸುವುದು ಎಂದರೇನೆಂಬುದರ ಬಗ್ಗೆ ಈ ರೀತಿಯ ಆಲೋಚನೆಗಳಲ್ಲಿದ್ದ ನನಗೆ ಎಲ್ಲ ವಿಷಯಗಳನ್ನು ಸಂಯೋಜಿಸಿ ಕಲಿಸುವುದೇ ಸರಿಯಾದ ಕ್ರಮ ಎಂಬ ನಂಬಿಕೆ ಇತ್ತು ಮತ್ತು ಈಗಲೂ ಇದೆ. ಐ.ಎಫ್.ಎ ಇಂತಹ ಆಲೋಚನೆಗಳಿಗೆ ಬೆಂಬಲವಾಗಿ ನಿಲ್ಲುತ್ತದೆ ಎಂಬುದು ತಿಳಿದಾಗ ಭಾಷೆ ಮತ್ತು ಗಣಿತವನ್ನು ಸಂಯೋಜಿಸಿ ಕಲಿಸಲು ಬೇಕಾದ ಒಂದು ಅಭ್ಯಾಸ ಪುಸ್ತಕವನ್ನು ಸಿದ್ಧಪಡಿಸಲು ಯೋಜಿಸಿದೆ. ಐ.ಎಫ್.ಎ ನೀಡಿದ ಅನುದಾನದ ಸಹಾಯದಿಂದ ಭಾಷೆ ಮತ್ತು ಗಣಿತದ ಕೆಲವು ಮೂಲ ಪರಿಕಲ್ಪನೆಗಳಿಗೆ ಸಹಾಯವಾಗುವ ಸಂಯೋಜಿತೆ' ಎಂಬ ಅಭ್ಯಾಸ ಪುಸ್ತಕವೊಂದನ್ನು ಪ್ರಕಟಿಸಿದೆ. ನಂತರ ತರಗತಿಯಲ್ಲಿ ಸರ್ಕಾರಿ ಪಠ್ಯದ ಜೊತೆ ಜೊತೆಗೆ ಈ ಪುಸ್ತಕವನ್ನೂ ಬಳಸಿ ಕಲಿಸುತ್ತಾ ಹೋದೆ. ಸುಮಾರು ಐದು ತಿಂಗಳ ನಂತರ ಪ್ರತಿಯೊಬ್ಬರೂ ಯಾವುದಾದರೂ ಒಂದು ರೀತಿ, ಏನಾದರೂ ಒಂದನ್ನು ಮಾಡಲು ಪ್ರಯತ್ನಿಸಿದ್ದರು. ನನಗೆ ೮೦%ಕ್ಕಿಂತ ಹೆಚ್ಚಿದ್ದ ೧೪ ಮಕ್ಕಳಿಗಿಂತ ಏನಾದರೊಂದು ಮಾಡಲು ಪ್ರಯತ್ನಿಸಿದ್ದ ಮಿಕ್ಕವರ ಪ್ರಯತ್ನವೇ ದೊಡ್ಡದು ಎನಿಸುತ್ತದೆ.

ಕಲಿಯುವ ಅಥವಾ ಕಲಿಸುವ ವಿಧಾನಗಳು ಒಂದು ರೀತಿಯಲ್ಲಿ ಕಲೆ'ಯೇ ಆಗಿರುತ್ತದೆ. ಹಾಗಾಗಿ ಕಲಾ ಸಂಯೋಜಿತ ಕಲಿಕೆ'ಯು ಯಾವಾಗಲೂ ಎಲ್ಲ ರೀತಿಯ ಕಲಿಕೆಗೂ ಉತ್ತಮ ವಿಧಾನವೇ ಆಗಿರುತ್ತದೆ.

* * *

**ಗುಂಡುರಾವ್ ದೇಸಾಯಿ,** ಮಸ್ಕಿ, ರಾಯಚೂರ

ಬಹುವರ್ಷಗಳ ನಂತರ ನಾನು ಶಾಲೆಯಲ್ಲಿ ಭಾಷೆಯನ್ನು ಕಲಿಸುತ್ತಿದ್ದೇನೆ. ಕಥೆಯನ್ನು ನಾಟಕ, ಸಂಭಾಷಣೆ, ಮುಕಾಭಿನಯದ ರೂಪದಲ್ಲಿ ಪದ್ಯವನ್ನು ಮಕ್ಕಳ ಕಲ್ಪನೆಯ ಚಿತ್ರ ರೂಪದಲ್ಲಿ, ನೃತ್ಯ ರೂಪದಲ್ಲಿ, ತಿಳಿಸಿ ಕೊಡುವ ಪ್ರಯತ್ನದ ಫಲವಾಗಿ ಮಕ್ಕಳ ಭಾಷಾ ಕಲಿಕೆಯಲ್ಲಿ ಅಮೂಲಾಗ್ರ ಬದಲಾವಣೆಯನ್ನು ಕಂಡಿದ್ದೇನೆ. ಅದರ ಫಲವಾಗಿ ಮಕ್ಕಳ ಕಲಿಕೆಯಲ್ಲಿ ಈ ಅಂಶಗಳನ್ನು ಗುರುತಿಸಿರುವೆ.



೧. ಅಕ್ಷರ, ಪರಿಚಿತ ಪದಗಳು ಮತ್ತು ವಾಕ್ಯಾವಳಿ ಗುರುತಿಸುವುದು

೨. ಬೇರೆ ಓದಿಗೆ ಅನ್ವಯವಾಗುವಂತೆ ಪದ ಮತ್ತು ವಾಖ್ಯಗಳ ವಿನ್ಯಾಸವನ್ನು ಕಲಿಯುವುದು

೩. ಗ್ರಂಥಾಲಯದ ಪುಸ್ತಕಗಳನ್ನು ಪ್ರೀತಿಸುವದು

೪. ತಮಗೆ ಸಿಗುವ ಪತ್ರಿಕೆ, ಪುಸ್ತಕವನ್ನು ಓದುವುದು

೫. ಕಲಿತುಕೊಂಡ ಹೊಸ ಓದಿನ ಬಗ್ಗೆ ವಿಮರ್ಶಿಸುವುದು ಇತ್ಯಾದಿ

ನಮ್ಮ ಶಾಲೆಯಲ್ಲಿ ಕಳೆದ ಎರಡು ವರ್ಷಗಳಿಂದಲೂ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸನ ಸಹಯೋಗದಲ್ಲಿ ಮಾಸ್ತಿಯವರ ಕಥೆಗಳನ್ನು ಅನುಸರಿಸಿ 'ಸಣ್ಣ ಕಥೆಗಳು–ರಚನಾ ಕ್ರಮಗಳು' ಯೋಜನೆಯನ್ನು ಕೈಗೊಂಡಿದ್ದೆ. ಮಕ್ಕಳಿಗೆ ಆಟ, ನೃತ್ಯ, ಚಿತ್ರಕಲೆ, ಹಾಡು, ನಟನೆ ಏನನ್ನಾದರೂ ಕಲಿಸಬಹುದು ಆದರೆ ಮಕ್ಕಳಲ್ಲಿಯ ಬರವಣಿಗೆ ಎನ್ನುವ ಸೃಜನಶೀಲತೆಯನ್ನು ಉದ್ದೀಪಿಸಿ ಹೊರತೆಗೆಯುವುದಿದೆಯಲ್ಲ, ಅದು ಸವಾಲಿನ ಕೆಲಸ. ಮೊದಮೊದಲು ಭಯವಾಗಿತ್ತು ಯಶಸ್ವಿಯಾಗುತ್ತೇನೊ ಇಲ್ಲವೊ ಎನ್ನುವ ಬಗ್ಗೆ. ಆದರೆ ಮಾಸ್ತಿಯವರ ಹಾಗೂ ಸಮಕಾಲೀನ ಕಥೆಗಾರರ ಕಥೆಗಳನ್ನು ವಾರಕೊಮ್ಮೆ ಒಂದು ಅವಧಿಯಲ್ಲಿ ಎರಡು ಮೂರು ತಿಂಗಳು ಕಥೆ ಹೇಳುತ್ತಾ ಹೋದೆ. ಆಸಕ್ತ ಮಕ್ಕಳಿಗೆ ಕೆಲ ಪುಸ್ತಕಗಳನ್ನು ಓದಲು ಕೊಟ್ಟೆ ಮಕ್ಕಳಿಂದ ಓದಿಸಿದೆ. ಸಹೋದ್ಯೋಗಿ ಶಿಕ್ಷಕರು ಮಾಸ್ತಿ ಕಥೆಗಳನ್ನು ವಿಭಿನ್ನವಾಗಿ ವಾಚಿಸಿ ಮಕ್ಕಳು ಕಥೆಗಳನ್ನು ಗ್ರಹಿಸಲು ನೆರವಾದರು. ನಂತರ ದಿನಗಳಲ್ಲಿ ನಿಮ್ಮಿಂದ ಇಂತಹ ಕಥೆಗಳನ್ನು ಬರೆಯಲು ಸಾಧ್ಯವಾ? ನಿಮ್ಮ ಜೀವನಾನುಭವಗಳು, ಕಷ್ಟದ ಸುಖದ ಸನ್ನಿವೇಶಗಳು, ನಿಮ್ಮ ಮನೆ ಪರಿಸರದಲ್ಲಿ ನಡೆದ ಘಟನೆಗಳು, ಕನಸಲ್ಲಿ ಕಂಡದ್ದು ಎಲ್ಲವನ್ನು ಬರೆಯಲು ಪ್ರೋತ್ಸಾಹಿಸಿದೆ. ಮೊದಲು ಬರೆಯಲು ಹಿಂಜರಿದರು. ನಮಗೆ ಬರೆಯಲು ಸಾಧ್ಯವೆ ಇಲ್ಲ ಆಗದು ಎಂದು ಕೈ ಚೆಲ್ಲಿದರು. ನನಗಂತೂ ಭಯವೆ ಆಯಿತು. ಈ ಯೋಜನೆ ಯಾಕಾದರೂ ತೆಗೆದುಕೊಂಡೆನೊ ಎನ್ನುವ ಅಂಜಿಕೆ ಮನದಲ್ಲಿ ಮೂಡಿತು. ಎದೆಗುಂದದೆ ಮತ್ತೆ ಮತ್ತೆ ಕಥೆ–ಕವಿತೆಗಳನ್ನು ಓದಿ ಹೇಳುವುದು. ಮಕ್ಕಳು ಬರೆದ ಕಥೆಗಳನ್ನು ಪತ್ರಿಕೆಯಲ್ಲಿ ತೋರಿಸಿ ಅವರು ಬರೆದದ್ದನ್ನು ತಿಳಿಸಿಕೊಟ್ಟೆ. ನಿಮ್ಮಲ್ಲೂ ಅಂತಹ ಸಾಮರ್ಥ್ಯ ಇದೆ. ಬರೆಯಿರಿ ಎಂದು ಸರಳ ಪದಗಳನ್ನು ಕೊಟ್ಟು ಕವಿತೆ ಕಥೆ ರಚನೆ ಮಾಡಲು ತಿಳಿಸಿಕೊಟ್ಟೆ. ನಂತರದಲ್ಲಿ ಒಬ್ಬೊಬ್ಬ ಮಕ್ಕಳು ಬರೆದ ರಚನೆಗಳನ್ನು ತಂದು ತೋರಿಸಿದಾಗ ಖುಷಿಯಾಗತೊಡಗಿತು.

ಪಾಲಕರು ಶಾಲೆಗ ಭೇಟಿ ನೀಡಿದಾಗ 'ನಮ್ಮ ಮಕ್ಕಳು ಮೊಬೈಲು ಟಿವಿ ಎಂದು ಕುಳಿತು ಬಿಡುತ್ತಿದ್ದರು ನೀವು ಶಾಲೆಯಲ್ಲಿ ಏನೇನೊ ಓದು ಅನ್ನುತ್ತಿದ್ದೀರಿ

ಆ ಕಾರಣಕ್ಕಾಗಿ ಯಾವ್ಯಾವೋ ಪೇಪರ್ ಪುಸ್ತಕ ಹಿಡಿದು ಕೂಳಿತಿರತಾರೆ ಏನೇನೊ ಬರಿತಿರುತಾರೆ ಎಂದು; ಇನ್ನೂ ಕೆಲವರು, 'ಪಾಠ ಓದಿಸಿದ್ದು ಬಿಟ್ಟು ಇದೆಲ್ಲ ಏನ್ರಿ?' ಅಂತ ಬೈದದ್ದು ಉಂಟು. ನಮ್ಮ ಮಕ್ಕಳು ಎಷ್ಟು ಸಿದ್ಧರಾದರು ಎಂದರೆ ನಮ್ಮೂರಲ್ಲಿ ಕವಿಗೋಷ್ಠಿ ನಡೆದರೆ ನಮ್ಮ ಶಾಲಾ ಮಕ್ಕಳದೇ ಸಿಂಹಪಾಲು ಎಂಬಂತಾಗಿದೆ.

ವಿಶೇಷವಾಗಿ ಮಕ್ಕಳ ಸಾಹಿತ್ಯ ಯೋಜನೆಯ ಸಹವಾಸದಲ್ಲಿ ಮಕ್ಕಳ ಕವಿತೆಯನ್ನು ಬರೆಯುವುದನ್ನೆ ಕೈಬಿಟ್ಟಿದ್ದ ನನ್ನ ಮಕ್ಕಳ ಕವಿತೆಗಳ ಬರವಣಿಗೆ ಮತ್ತೆ ಜೀವಂತಿಕೆ ಪಡೆಯಿತು. ಮಕ್ಕಳಿಗಾಗಿ ಬರೆದ ನನ್ನ ಕವಿತೆಗಳ ಸಂಕಲನ 'ಅಜ್ಜನ ಹಲ್ಲುಸೆಟ್ಟು' ಕೃತಿ ಬಿಡುಗಡೆಯಾಗುವಂತಾಯಿತು. ಮಕ್ಕಳು ಕಥೆ ಬರೆಯುವುದನ್ನು ನೋಡಿ ಮಕ್ಕಳಿಗಾಗಿ ಕಥೆಗಳನ್ನು ಬರೆಯಲು ಪ್ರಾರಂಭಿಸುವಂತಾಯಿತು. ಏಳನೆ ತರಗತಿ ಉತ್ತೀರ್ಣರಾದ ನಂತರ ನಮ್ಮ ಮಕ್ಕಳಿಗೆ ಖಾಸಗಿ ಶಾಲೆಯಲ್ಲಿ ವಿಶೇಷವಾಗಿ ಸರಳವಾಗಿ ದಾಖಲಾತಿ ಸಿಕ್ಕಿತು. ಅಲ್ಲಿಯೂ ಈಗಲೂ ನಮ್ಮ ಮಕ್ಕಳೆ ಸೃಜನಶೀಲ ಸ್ಪರ್ಧೆಗಳಲ್ಲಿ ಮುಂದಿದ್ದಾರೆ. ಆ ಶಾಲೆಯ ಗುರುಗಳು ನಮ್ಮ ಶಿಕ್ಷಕ ಬಳಗವನ್ನು, ಯೋಜನೆಯನ್ನು ಸದಾ ಸ್ಮರಿಸುತ್ತಾರೆ. ಅಲ್ಲಿಯ ಶಿಕ್ಷಕರಲ್ಲಿ ನಿರಂತರ ಪ್ರಶ್ನೆಕೇಳುವುದರ ಮುಖಾಂತರ, ಕಥೆ–ಕವನಗಳನ್ನು ಬರೆಯುವುದರ ಮುಖಾಂತರ ಇರಿಸು ಮರಿಸು ಉಂಟು ಮಾಡಿದ್ದಾರೆ.

ನನ್ನ ಈ ಪಯಣದಲ್ಲಿ ಕಂಡಿದ್ದು, ಮಕ್ಕಳು ಖಾಲಿಕೊಡಗಳಲ್ಲ. ಅವರಲ್ಲೂ ಅನೇಕ ಆಲೋಚನೆಗಳಿವೆ. ಕಥೆಗಳಿವೆ, ಹಾಡುಗಳಿವೆ, ಕವಿತೆಗಳಿವೆ. ವಿಶಿಷ್ಟ ಸಾಮರ್ಥ್ಯ ಅವರಲ್ಲಿದೆ. ಅದನ್ನು ಹೊರತೆಗೆಯುವ ಪ್ರಯತ್ನ ಮಾಡಿದರೆ ಏನೆಲ್ಲ ಸಾಧ್ಯ ಎಂಬುದು ಎರಡು ವರ್ಷದ ಪಯಣ ತಿಳಿಸಿದೆ. ೪೦% ಕಲಿಕೆಯಲ್ಲಿ ಮುಂದುವರೆದವರು ಇದ್ದ ಮಕ್ಕಳ ಸಂಖ್ಯೆಯನ್ನು ೮೦% ಏರಿಸಿದೆ. ತರಗತಿ ಜೀವಂತವಾಗಿರಿಸಲು ಸಹಕರಿಸಿದೆ. ಪಾಲಕರು ತಮ್ಮ ಮಕ್ಕಳ ಪ್ರತಿಭೆಯನ್ನು ಗುರುತಿಸುವಂತಾಗಿದೆ. ನಮ್ಮಲ್ಲೂ ಹೊಸ ಆಲೋಚನೆಗಳನ್ನು ಹುಟ್ಟು ಹಾಕಿದೆ.

* * *

**ಸದಾನಂದ ಬೈಂದೂರ,** ಕುಂದಾಪುರ ಉಡುಪಿ

ವಿಷಯ ಬೋಧನೆಯಲ್ಲಿ ಕಲೆಯ ಅಳವಡಿಕೆ ಸುಲಭ ಸಾಧ್ಯವಲ್ಲದಿದ್ದರೂ ಮಕ್ಕಳ ಕಲಿಕೆಯ ದೃಷ್ಟಿಯಿಂದ ಅದು ಅನಿವಾರ್ಯವೆಂದೇ ಹೇಳಬೇಕು. ಭಾಷಾ ವಿಷಯಗಳಲ್ಲಿ ಪದ್ಯ ವಿಭಾಗದ ಬೋಧನೆ ಅತಿ ಮುಖ್ಯವಾದುದು. ಕೇವಲ ಬಾಯಿಪಾಠಕ್ಕೆ ಸೀಮಿತವಾಗಿರುವುದು. ಹೀಗೆ ಮಾಡಿದಾಗ ಪದ್ಯದ ವಾಚ್ಯಾರ್ಥಕ್ಕೆ ಮಾತ್ರ ವಿದ್ಯಾರ್ಥಿಗಳು ಸೀಮಿತರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಯೋಚಿಸಿದಾಗ



ಕವಿತೆಗಳನ್ನು ಓದುವ ಸಂಸ್ಕೃತಿ ಬೆಳೆಸಿ ವಿದ್ಯಾರ್ಥಿಗಳಲ್ಲಿ ರಸಗ್ರಹಣ ಸಾಮರ್ಥ್ಯ ಹೆಚ್ಚಿಸಲು ಹಾಗೂ ಅದರ ಮೂಲಕ ವಿಭಿನ್ನ ಆಯಾಮಗಳನ್ನು ಪರಿಚಯಿಸಲು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು.

ವಿದ್ಯಾರ್ಥಿಗಳ ವಯೋಮಟ್ಟ, ಬುದ್ಧಿಮಟ್ಟ ಹಾಗೂ ಕಲಿಕಾಮಟ್ಟ ಅನುಸರಿಸಿ ಕನ್ನಡ ಭಾಷೆಯ ವಿವಿಧ ಪ್ರಕಾರದ ಹಾಗೂ ಶ್ರೇಷ್ಠ ಕವಿಗಳ ಆಯ್ದ ಕವಿತೆಗಳನ್ನು ಆಧರಿಸಿ ಈ ಯೋಜನೆಯ ಆರಂಭದಲ್ಲಿ ವಿದ್ಯಾರ್ಥಿಗಳಿಗೆ ಕವಿಗಳ ಪರಿಚಯ ಇರುವುದು ಅಗತ್ಯವೆಂದು ಕವಿಗಳ ಕೃತಿಗಳು, ಅವರ ಹುಟ್ಟೂರು, ಹಿನ್ನೆಲೆಯನ್ನು ಗ್ರಂಥಾಲಯ ಬಳಸಿ ಅವರ ಬಗ್ಗೆ ವಿವರವಾಗಿ ತಿಳಿಯಲು ಪ್ರೋತ್ಸಾಹಿಸಲಾಯಿತು. ಮುಂದಿನ ಹಂತವಾಗಿ ನಾಡಿನ ಶ್ರೇಷ್ಠ ಕನ್ನಡ ಕವಿಗಳ ಕವಿತೆಗಳನ್ನು ಒಳಗೊಂಡ ಒಂದು ವಿಶೇಷ ಯೋಜನೆ ರೂಪಿಸಲು ನಿರ್ಧರಿಸಿದೆವು. ವಿದ್ಯಾರ್ಥಿಗಳು ಹೀಗೆ ಕವಿಗಳು ಹಾಗೂ ಅವರ ಕವಿತೆಗಳು ಸಂಗ್ರಹ ಆರಂಭಿಸಿದೆವು. ಕವಿತೆಗಳ ಸಂಗ್ರಹ ಸಾಕಷ್ಟು ಆದನಂತರ ಕವಿತೆಗಳ ವಾಚನ ಆರಂಭಿಸಿದೆವು.

ವಿದ್ಯಾರ್ಥಿಗಳಿಗೆ ಅದು ಹೊಸತು ಅನಿಸಲು ತೊಡಗಿದ ಕಾರಣ ನಾವು ಕತೆಗಳ ವಾಚನದಿಂದಲೇ ಏಕೆ ಆರಂಭಿಸಬಾರದು ಅಂದುಕೊಂಡು ಸಂಪನ್ಮೂಲ ವ್ಯಕ್ತಿಗಳ ಮೂಲಕ ಕವಿತಾ ವಾಚನಕ್ಕೆ ಮುಂದಾದೆವು. ಮುಂದೆ ಪ್ರತೀ ವಿದ್ಯಾರ್ಥಿಗಳೂ ತಮಗೆ ಇಷ್ಟವಾದ ಕವಿತೆ ಓದಿ ತಮಗೆ ಅರ್ಥವಾದಷ್ಟು ಅಂಶಗಳನ್ನು ತಮ್ಮ ಪದದ ಅರ್ಥ, ಅದರ ವಾಚ್ಯಾರ್ಥ ಹಾಗೂ ಧ್ವನ್ಯಾರ್ಥ ಹೇಳಲು ಮುಂದಾದರು. ಕೆಲವು ವಿದ್ಯಾರ್ಥಿಗಳು ಇದರ ಪರಿಣಾಮವಾಗಿ ಸ್ವತಃ ಕವಿತೆ ರಚಿಸತೊಡಗಿದರು. ಕವಿತೆ ರಚಿಸುವ ಕ್ರಮ, ಅದಕ್ಕೆ ಪೂರಕವಾದ ಸಂಗೀತ ಜ್ಞಾನ, ಸ್ವರ ಅಭ್ಯಾಸ, ರಂಗ ಗೀತೆಗಳು, ಮೊದಲಾಗಿ ಕವನಗಳ ರಸಸ್ವಾದನೆಯ ದೃಷ್ಟಿಯಿಂದ ಏಪ್ರಿಲ್‌ನಲ್ಲಿ ೧೫ ದಿನಗಳ 'ಕವನ ರಸಗ್ರಹಣ' ಕಾರ್ಯಾಗಾರ ನಡೆಸಿದೆವು. ಕವಿಗಳ ಕುರಿತ ವ್ಯಕ್ತಿ ಪರಿಚಯದ ವಿಡಿಯೋಗಳನ್ನು ನೋಡುವುದರ ಮೂಲಕ ಹಾಗೂ ಓದುವುದರ ಮೂಲಕ ಸಾಕಷ್ಟು ಕವಿಗಳ, ಸಾಹಿತಿಗಳ ಪರಿಚಯ ಮಾಡಿಕೊಂಡೆವು.

ವಿದ್ಯಾರ್ಥಿಗಳು ಸ್ವಯಂ ಸ್ಫೂರ್ತಿಯಿಂದ ಸ್ವರಚಿತ ಕವನಗಳನ್ನು'ಈ ಮಿಂಚು' ಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸಿದೆವು. ಮುಂದಿನ ಹಂತದಲ್ಲಿ ಆಯ್ದ ಕೆಲವು ಕವನಗಳಿಗೆ ರಂಗಾಭಿವ್ಯಕ್ತಿ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿತ್ತು. ಅದಕ್ಕಾಗಿ ಈಗಾಗಲೇ ವಾಚಿಸಿದ ಕವನಗಳಲ್ಲಿ ಕೆಲವನ್ನು ಆಯ್ದು ರಂಗತಾಲೀಮು ನಡೆಸಿದೆವು. ಈ ಸಂದರ್ಭದಲ್ಲಿ ನಾವು ಸಂಗೀತ ಸಂಯೋಜನೆ ಮತ್ತು ಅಭಿನಯ ಹೇಗೆ ಕವನಗಳ ಆಶಯಗಳನ್ನು ಕಟ್ಟಿಕೊಡುವಲ್ಲಿ ಸಹಾಯವಾಗಬಹುದು ಎಂದು ಅರ್ಥೈಸಿಕೊಳ್ಳಲು ಸಹಕಾರಿಯಾಯಿತು.

ಯೋಜನೆಯ ಉದ್ದೇಶಗಳಾದ ಕವನಗಳ ಅರ್ಥೈಸುವಿಕೆ, ಕವನಗಳನ್ನು ವಿಭಿನ್ನ ದೃಷ್ಟಿಕೋನದಿಂದ ನೋಡುವಂತೆ ಮಾಡುವುದು. ಕವನದ ಭಾಷಾ ಶೈಲಿ, ಕವನಗಳನ್ನು ಅರ್ಥೈಸುವಲ್ಲಿ ರಂಗ ಸಾಧ್ಯತೆಗಳ ಪ್ರಯತ್ನ ಕುರಿತು ಹೇಳುವುದಾದರೆ "ಕಾವ್ಯರಂಗ" ಒಂದು ಯಶಸ್ವಿ ಪ್ರಯೋಗ ಎಂದೇ ಹೇಳಬಹುದು. ಆದರೆ ಯಾವುದೇ ಮಾರ್ಗದರ್ಶನವಿಲ್ಲದಾಗಲೂ ವಿದ್ಯಾರ್ಥಿಗಳು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದು ಬಹಳ ಮುಖ್ಯ ಎಂದು ನನಗನಿಸುತ್ತದೆ. ಶಾಲೆಯ ಶೈಕ್ಷಣಿಕ ಒತ್ತಡಗಳು ಅಂದರೆ ಪರೀಕ್ಷೆ, ಅಂಕಗಳು, ರ್‍ಯಾಂಕ್‌ಗಳು ಇಂತಹ ಆಸಕ್ತಿಗಳನ್ನು ಹಿನ್ನೆಲೆಗೆ ತಳ್ಳುವ ಅಪಾಯವೂ ಇದೆ.

* * *

**ಅಪರ್ಣ ದೇಶಪಾಂಡೆ,** ಬೆಳಗಾವಿ

ಈ ಯೋಜನೆಗೆ ಆಯ್ದುಕೊಂಡಿರುವ ಎರಡು ಶಾಲೆಗಳು, ಭಾಷೆಯ ವಿಭಜನೆ ಹೊಂದಿರುವ ಸಮುದಾಯದ ಮಧ್ಯದಲ್ಲಿ ಇರುವಂತವು. ಈ ಶಾಲೆಗಳು ಒಂದೇ ಪ್ರಾಂಗಣ ಮತ್ತು ಆಟದ ಮೈದಾನವನ್ನು ಹಂಚಿಕೊಂಡಿವೆ. ಇಲ್ಲಿಯ ಭಾಷಾ ವಿಭಜನೆ ಯಾವ ಮಟ್ಟಿಗೆ ಇತ್ತೆಂದರೆ, ಈ ಎರಡು ಶಾಲೆಗಳು ಒಟ್ಟಿಗೆ ರಾಷ್ಟ್ರಗೀತೆಯನ್ನು ಹಾಡುತ್ತಿರಲಿಲ್ಲ. ಪ್ರತಿದಿನವು ಒಂದು ಶಾಲೆಯ ನಂತರ ಮತ್ತೊಂದು ಶಾಲೆ, ಬೇರೆ ಬೇರೆಯಾಗಿ ಪ್ರಾರ್ಥನೆ ಮತ್ತು ವ್ಯಾಯಾಮವನ್ನು ನಡೆಸುತ್ತಿದ್ದವು.

ಮಿಶ್ರ ಸಂಸ್ಕೃತಿಯ ದೃಷ್ಟಿಕೋನದಲ್ಲಿ ಈ ಯೋಜನೆಯನ್ನು ನೋಡುವಾಗ, ಸಾಧ್ಯವಾಗಬಲ್ಲ ಮತ್ತು ಸಂಭವನೀಯ ಪರಿಹಾರಗಳ ಕುರಿತು ಯೋಚಿಸಲಾಯಿತು. ಯಾವುದಾದರೂ ಒಂದು ಭಾಷೆಯಲ್ಲಿ(ಕನ್ನಡ/ ಮರಾಠಿ) ಮಾತನಾಡಿದಾಗ, ಅರ್ಧ ಸಮುದಾಯವನ್ನು ಮಾತ್ರ ತಲುಪಲು ಸಾಧ್ಯವಾಗುತ್ತಿತ್ತು. ಚಾರ್ಲ್ ಮೇನ್ ಹೇಳುವಂತೆ, "ಎರಡನೇ ಭಾಷೆಯನ್ನು ಹೊಂದುವುದು ಮತ್ತೊಂದು ಆತ್ಮವನ್ನು ಹೊಂದಿದಂತೆ." ಎರಡು ಶಾಲೆಗಳಲ್ಲಿಯೂ ಅರ್ಥವಾಗಬಲ್ಲ ಭಾಷೆಯು ಸಮುದಾಯದ ಮಧ್ಯದಿಂದಲೇ ಹೊರಹೊಮ್ಮಿತು– ಶಾಲೆಯ ಸುತ್ತಲೂ ಇರುವ ಭತ್ತದ ಗದ್ದೆಗಳಲ್ಲಿ ಬಳಸುವ ಶಬ್ದಗಳು. ಸಂವಹನವನ್ನು ಸಾಧ್ಯವಾಗಿಸಲು ಸಂಭವನೀಯ ಪರಿಹಾರ ಹುಡುಕಲು ಇದೊಂದು ಮೂಲವಾಯಿತು. ಸ್ಥಳೀಯ ನಕ್ಷತ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಶಾಲೆಯ ಒಂದು ಮೂಲೆಯಲ್ಲಿರುವ ಹಾಳು ಭೂಮಿಯಲ್ಲಿ ತರಕಾರಿಯನ್ನು ಬೆಳೆಯುವುದು ಯೋಜನೆಯ ಮೂಲ ಪರಿಕಲ್ಪನೆಯಾಗಿತ್ತು. ಈ ಭೂಮಿಯನ್ನು ಈ ಮೊದಲು ಕಸವನ್ನು ಬಿಸಾಡಲು ಬಳಸಲಾಗುತ್ತಿತ್ತು.



ಸ್ಥಳಿಯ ಕೃಷಿ ಪದ್ಧತಿಗಳನ್ನು ಶಾಲೆಯಲ್ಲಿ ಪರಿಚಯಿಸುವ ಕುರಿತು ಯೋಚಿಸಿದಾಗ, ಇವುಗಳನ್ನು ತರಗತಿಯ ಪಠ್ಯಕ್ರಮದೊಂದಿಗೆ ಒಂದುಗೂಡಿಸುವ ಹಾಗೂ ಮಗು ಕೇಂದ್ರಿತ ದೃಷ್ಟಿಕೋನವನ್ನು ಹೊಂದುವ ಪ್ರಶ್ನೆ ಎದುರಾಯಿತು. ನಿಯಮದ ಅನುಸಾರ, ಪಾಠದ ಯೋಜನೆಗಳನ್ನು ತಯಾರಿಸಲಾಯಿತು ಹಾಗೂ ವಾರದಾದ್ಯಂತ ಎರಡೂ ಶಾಲೆಗಳಿಗೆ ಪ್ರತ್ಯೇಕವಾಗಿ ತರಗತಿಗಳನ್ನು ನಡೆಸಲಾಯಿತು; ಶನಿವಾರವು ಸಮುದಾಯ ಕೃಷಿದಿನವಾಗಿತ್ತು. ಮಕ್ಕಳು ಮತ್ತು ಶಿಕ್ಷಕರು ಪ್ರಾಯೋಗಿಕ ಚಟುವಟಿಕೆಗಳಿಲ್ಲದೆ ಪಾಠಗಳಿಗೆ ಹೊಂದಿಕೊಳ್ಳದೇ ಇರುವುದು ಸವಾಲಾಗಿ ಪರಿಣಮಿಸಿತು. ಜೊತೆಗೆ, ಭಾಷೆ ಕಾರಣಕ್ಕಾಗಿ ಬೇರೆಯಾಗಿರುವ ಶಾಲೆಗಳನ್ನು ಒಂದೇ ರಾಷ್ಟ್ರಧ್ವಜದಡಿ ತರುವ ಪ್ರಶ್ನೆಗೂ ಇನ್ನೂ ಉತ್ತರ ಸಿಕ್ಕಿರಲಿಲ್ಲ.

ಶಾಲೆಗಳಲ್ಲಿ ಪ್ರತ್ಯೇಕವಾಗಿ ಪಾಠ ಮಾಡುವುದರ ಬದಲಾಗಿ, ಈ ಎರಡೂ ಶಾಲೆಗಳನ್ನು ಸಮುದಾಯದ ಭಾಗಗಳನ್ನಾಗಿ ನೋಡಲು ಆರಂಭಿಸಲಾಯಿತು. ಇದನ್ನು ಎರಡೂ ಶಾಲೆಗಳು ಧನಾತ್ಮಕವಾಗಿ ಸ್ವೀಕರಿಸಿದವು ಮತ್ತು ಹೊಸ ಚಟುವಟಿಕಗಳ ಮುಂಚೂಣಿ ವಹಿಸಿಕೊಂಡವು. ಈ ಯೋಜನೆಯ ಕಾಲಾವಧಿಯಲ್ಲಿ, ಶಾಲೆಯೂ ಕಲಿಕಾ ಕೇಂದ್ರವಷ್ಟೇ ಆಗಿ ಬದಲಾಯಿತು. ಶಾಲೆಯ ಆವರಣದಲ್ಲಿ ಕುಡಿತ ಮತ್ತು ಜೂಜಿನಂತಹ ನಿಶಾಚರ ಚಟುವಟಿಕೆಗಳು ಕಡಿಮೆಯಾದವು. ಸಮುದಾಯವು ಕಸ ನಿರ್ವಹಣೆ ಮಾಡಲು ಆರಂಭಿಸಿತು. ಶಾಲೆಯೂ ಮತ್ತಷ್ಟು ಸ್ವಚ್ಛವಾಯಿತು.

ಕಸ ವಿಂಗಡಣೆ, ಗೊಬ್ಬರ ತಯಾರಿಸುವುದು, ತರಕಾರಿಗಳ ಬೇಸಾಯ, ಬೆಳೆಗಳ ರಕ್ಷಣೆ ಮುಂತಾದ ಚಟುವಟಿಕೆಗಳನ್ನು ಸಮುದಾಯವೇ ತನ್ನಿಚ್ಛೆಯ ಮೇರೆಗೆ ಕೈಗೆತ್ತಿಕೊಂಡಿತು. ಶಾಲೆಯು ಸಮುದಾಯವಾಯಿತು, ಸಾಂಪ್ರದಾಯಿಕ ನಕ್ಷತ್ರ ಬೇಸಾಯ ಪದ್ಧತಿಯನ್ನು ಆಚರಿಸಲಾಯಿತು. ಭಾಷಾ ವಿಭಜನೆಯ ಕನ್ನಡಿಯು ಮಸುಕಾಗುತ್ತಿತ್ತು. ನಾಟಕ, ನೃತ್ಯ, ಆಟಗಳು, ಕುಶಲ ಕಲೆ ಮುಂತಾದವು ಸಂವಹನವನ್ನು ಸಾಧ್ಯಗೊಳಿಸಿದವು. ಭಾಷೆಗಳು ಬೇರೆಯಾಗಿದ್ದರೂ ಒಂದು ರೀತಿಯ ಮುಕ್ತತೆ ನೆಲೆಸಿತ್ತು. ಯಾವ ಭಾಷೆಯನ್ನು ಕಲಿಸಲಾಗುತ್ತಿದೆ ಮತ್ತು ಕಲಿಯಲಾಗುತ್ತಿದೆ ಎಂಬ ಪ್ರಶ್ನೆ ಈಗಲೂ ಉಳಿದುಕೊಂಡಿದೆ.

ಸ್ಥಳೀಯ ವೃತ್ತಿಗಳು ಮತ್ತು ಪದ್ಧತಿಗಳು, ಪ್ರದರ್ಶನ ಕಲೆಗಳು, ತರಗತಿಯ ಒಳಗಡೆ ಬಂದಾಗ, ತರಗತಿಯ ಪರಿಸರವನ್ನು ಜೀವಂತವಾಗಿಸುತ್ತವೆ ಹಾಗೂ ನಿರಂತರ ಕಲಿಕೆಯನ್ನು ಪ್ರೋತ್ಸಾಹಿಸುತ್ತವೆ. ವ್ಯವಸಾಯ ಮತ್ತು ಮಳೆಯ ನಿರೀಕ್ಷೆಗಳ ಕುರಿತಾದ ನೂರಕ್ಕೂ ಹೆಚ್ಚು ಪಡೆನುಡಿಗಳನ್ನು ವಿದ್ಯಾರ್ಥಿಗಳು ಸಂಗ್ರಹಿಸಿದರು. ಈ ಪಡೆನುಡಿಗಳು ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಭಾಗಶಃ ಸಮನಾದ ಅರ್ಥಗಳನ್ನು ಹೊಂದಿವೆ.

ಮರಾಠಿ ಶಾಲೆಯಿಂದ ಕನ್ನಡ ಶಾಲೆಗೆ ಬದಲಾದ, ಎರಡೂ ಭಾಷೆಗಳ ಕಲಿಕೆಯಲ್ಲಿ ಹಿಂದುಳಿದಿದ್ದ ವಿದ್ಯಾರ್ಥಿಯೊಬ್ಬ ಈಗ ಪ್ರೌಢಶಾಲೆಗೆ ಬಂದಿದ್ದಾನೆ; ನೃತ್ಯ ಸಂಯೋಜನೆ, ನಾಟಕ ರಚನೆ ಮತ್ತು ನಿರ್ದೇಶನದ ಕನಸು ಹೊತ್ತಿದ್ದಾನೆ.

ಯಾವಾಗ ಶಾಲೆಯೂ ಒಂದು ಸ್ಥಳೀಯ ಭಾಷೆಯನ್ನು ಮಾತನಾಡವುದರ ಜೊತೆಗೆ ಇನ್ನೊಂದು ಭಾಷೆಯನ್ನು ಗೌರವಿಸುತ್ತದೋ, ಆಗ ಕಲಿಕೆಯನ್ನು ಪ್ರೋತ್ಸಾಹಿಸುವ ಒಂದು ಆತ್ಮೀಯ ವಾತಾವರಣ ವಿದ್ಯಾರ್ಥಿಗಳಿಗೆ ದೊರೆಯುತ್ತದೆ.

■■



## ವಿಚಾರ ಮಂಡಣೆ – ೨

# ಮಕ್ಕಳ ನಿರಂತರ ಕಲಿಕೆಯನ್ನು ಪ್ರೇರೇಪಿಸುವಲ್ಲಿ ಸಮುದಾಯದ ಭಾಗವಹಿಸುವಿಕೆ

**ಕೊಟ್ರೇಶ ಬಿ.** ರಾಯಚೂರು

ಹೃದಯಕ್ಕೆ ಶಿಕ್ಷಣ ನೀಡದೆ ಮೆದುಳನ್ನು ಚುರುಕುಗೊಳಿಸುವ ಶಿಕ್ಷಣ ಸಮಗ್ರ ಶಿಕ್ಷಣದ ವ್ಯಾಖ್ಯಾನದಿಂದ ಹೊರಗುಳಿಯುತ್ತದೆ **– ಅರಿಸ್ಟಾಟಲ್**

ಶಿಕ್ಷಣದಲ್ಲಿ ಹೃದಯವಂತಿಕೆಯ ವ್ಯಾಖ್ಯಾನ ಬಹುದೊಡ್ಡ ಬದಲಾವಣೆಯನ್ನು ಸಮುದಾಯದಲ್ಲಿ ಉಂಟು ಮಾಡುವುದು. ಶಿಕ್ಷಣ ನೀಡುವಿಕೆ ಅಂತಿಮವಾಗಿ ಸಮಾಜದ ಸುಧಾರಣೆಯೇ ಆಗಿರುವ ನಿಟ್ಟಿನಲ್ಲಿ ಕಲಿಕೆಯನ್ನು ನಿರಂತರಗೊಳಿಸುವಲ್ಲಿ ಸಮುದಾಯದ ಭಾಗವಹಿಸುವಿಕೆ ಕೂಡಾ ತುಂಬಾ ಮಹತ್ತರವಾಗಿರುತ್ತದೆ. ಶಾಲೆಗಳಲ್ಲಿ ಎಸ್. ಡಿ. ಎಂ. ಸಿ. ಗಳು ಬಂದ ನಂತರ ಶಿಕ್ಷಣದಲ್ಲಿ ಅಧಿಕೃತವಾಗಿ, ಅಧಿಕಾರಯುತವಾಗಿ ಭಾಗವಹಿಸಿ ಕಲಿಕೆಗೆ ಬೆಂಬಲವಾಗಿವೆ. ಶಾಲೆಗಳಲ್ಲಿ ಹಲವಾರು ಚಟುವಟಿಕೆಗಳ ನಿರ್ವಹಣೆಗೆ ಸಮುದಾಯದ ಸಹಕಾರ ಹೆಚ್ಚಿನ ಬೆಂಬಲದೊಂದಿಗೆ ಅವುಗಳನ್ನು ಕಾರ್ಯಗತಗೊಳಿಸುವುದನ್ನು ಸುಲಭೀಕರಿಸುತ್ತವೆ.

ನನ್ನ ಶಾಲೆಯಲ್ಲಿ ನಾನು ಕೈಗೊಂಡ ಪೆನ್ಸಿಲ್ ಪತ್ರಿಕೆಯೊಡನೆ ಮಕ್ಕಳ ಕಲಾ–ಅಂತರ್ಗತಾ ಪ್ರಯೋಗ ಸಮುದಾಯವು ನನ್ನನ್ನು ನೋಡುವ ರೀತಿ, ಅದರಲ್ಲಿ ಅವರ ಭಾಗವಹಿಸುವಿಕೆಯ ಅನುಬಂಧಗಳು ಹೇಗೆ ನಮ್ಮ ಶಾಲಾ ಮಕ್ಕಳ ನಿರಂತರ ಕಲಿಕೆಯನ್ನು ಪ್ರೇರೇಪಿಸುತ್ತವೆ ಎಂಬುದನ್ನು ತಮ್ಮ ಮುಂದಿಡುವೆ.

### ೧. ಶಾಲಾ ಕಾರ್ಯಕ್ರಮಗಳಲ್ಲಿ ಸಮುದಾಯದ ಭಾಗವಹಿಸುವಿಕೆ

ಈ ಮೊದಲು ಶಾಲಾ ಕಾರ್ಯಕ್ರಮಗಳನ್ನು ಆಯೋಜಿಸಿದಾಗ ಪೋಷಕರು ಶಾಲೆಗೆ ಬರಲು ಹಿಂದೇಟು ಹಾಕುತ್ತಿದ್ದರು, "ಅಲ್ಲೇನಿದೆ ಬಿಡು ಶಾಲ್ಯಾಗ ಮಾಷ್ಟ್ರು ಹುಡುಗ್ರು ಇರ್ತಾರೆ ಅವರ ಪಾಡಿಗೆ ಅವರೇನೋ ಮಾಡ್ತಿರ್ತಾರೆ ಅಲ್ಲೇನು

ಹೋಗೋದಿದೆ" ಎಂಬ ಧೋರಣೆಯಿಂದ ಬರುತ್ತಿರಲಿಲ್ಲ. ಪೆನ್ಸಿಲ್ ಪ್ರಕಟಣೆಯ ನಂತರ ಅದರಲ್ಲಿ ನಮ್ಮ ಶಾಲೆಗಳಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳನ್ನು ಭಾಗವಹಿಸಿದ ಅನುಭವಗಳ ಆಧಾರದ ಮೇಲೆ ತಮ್ಮ ಮಕ್ಕಳು ಬರೆಯಲು ಆರಂಭಿಸಿ, ಪೆನ್ಸಿಲ್ ಪತ್ರಿಕೆಯನ್ನು ಮನೆಗೆ ತೆಗೆದುಕೊಂಡು ಅವರ ಪೋಷಕರಿಗೆ ಮುಂದೆ ತಮ್ಮ ಬರಹಗಳನ್ನು ಓದಿದಾಗ, ಶಾಲೆಯಲ್ಲಿ ವಿಷೇಷ ಚಟುವಟಿಕೆಗಳು ಸಂಘಟಿಸುತ್ತವೆ ಎಂಬ ಧೋರಣೆ ಪೋಷಕರಲ್ಲಿ ಬಂದು ಅವರ ಭಾಗವಿಸುವಿಕೆ ಈಗ ಹೆಚ್ಚಾಗಿದೆ,

### ೨. ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಕ್ಷೀಣಿಸಿದೆ

ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಬಹುದೊಡ್ಡ ಸವಾಲೆಂದರೆ ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗದಿರುವುದು. ನನಗೂ ಇದರಿಂದ ನಿರೀಕ್ಷಿತ ಮಟ್ಟದಲ್ಲಿ ಅಪೇಕ್ಷಿತ ಕಲಿಕೆಯನ್ನು ಕೆಲ ಮಕ್ಕಳಲ್ಲಿ ನಿರೀಕ್ಷಿಸಲಾಗುತ್ತಿದ್ದಿಲ್ಲ. ಇದಕ್ಕೆ ಏನಾದರು ಹೊಸ ಆಲೋಚನೆ ಮಾಡಬೇಕೆಂದಾಗ ಶಾಲೆಯಲ್ಲಿ ಪೆನ್ಸಿಲ್ ಪತ್ರಿಕೆಯ ಪ್ರಯೋಗ ನೆರವಿಗೆ ಬಂದಿತು. ಆಗಾಗ್ಗೆ ಶಾಲೆ ತಪ್ಪಿಸುವ /ಬಿಡುವ ಮಕ್ಕಳ ಪಟ್ಟಿ ಸಿದ್ದ ಮಾಡಿಕೊಂಡು ಅವರಿಗೆ ವಿಶೇಷವಾಗಿ ತರಬೇತಿ ನೀಡಿ ಅವರನ್ನು ಪತ್ರಿಕಗೆ ತಮ್ಮ ಅನುಭವಗಳನ್ನು ಬರೆಯುವಂತೆ ,ಚಿತ್ರ ರಚಿಸಿ ನೀಡುವಂತೆ ಪ್ರೊತ್ಸಾಹಿಸಿ, ಅವುಗಳನ್ನು ಪೋಟೋ ಸಮೇತ ಪ್ರಕಟಿಸಿ, ಅವರ ಮನೆಗೆ ಪತ್ರಿಕೆಯನ್ನು ಕಳುಹಿಸಿದಾಗ ಮಕ್ಕಳು ತಮ್ಮ ಬರಹಗಳು ಪ್ರಕಟವಾಗಿರುವುದನ್ನು ತಮ್ಮ ಪೋಷಕರಿಗೆ ಸಂತಸಪಟ್ಟು ತೋರಿಸಿ ಇಡೀ ತಮ್ಮ ಬೀದಿಯ ತುಂಬಾ ಅದೇ ವಿಷಯ ಚರ್ಚೆಯಾಗಿ, ಪೋಷಕರಿಗೆ ತನ್ನ ಮಗು ಎಲ್ಲರಿಗಿಂತಾ ಭಿನ್ನ ಎಂಬ ದೋರಣೆಯಿಂದ ಈಗ ಗೈರಾಗುವ ಮಗುವನ್ನು ಸ್ವತ: ಶಾಲೆಗೆ ಕರೆತರುತ್ತಿದ್ದಾರೆ ಇದು ಮಕ್ಕಳ ನಿರಂತರವಾಗಿ ಕಲಿಯುವಿಕೆ ಪ್ರೇರಣೆಯಾಗಿದೆ.

### ೩. ನಮ್ಮೂರ ಹೆಮ್ಮೆ–ಸಂದರ್ಶನಗಳು

ಪೆನ್ಸಿಲ್ ಪತ್ರಿಕೆಯಲ್ಲಿ ನಮ್ಮೂರು–ನಮ್ಮೂರ ಹೆಮ್ಮೆ ಅಂಕಣವು ಸಮುದಾಯವನ್ನು ಹೆಚ್ಚು ಆಕರ್ಷಣೆ ಮಾಡಿ ಗ್ರಾಮದಲ್ಲಿ ಮಕ್ಕಳ ಕಲಿಕೆ ಬಗೆಗಿನ ಕಾಳಜಿ ಹೆಚ್ಚಿಸಿದೆ. ನಮ್ಮ ಮಕ್ಕಳು ನಮ್ಮ ಗ್ರಾಮದಲ್ಲಿರುವ ಸಾಧಕರನ್ನು ಅವರ ವಿಶೇಷತೆಗಳನ್ನು ಸ್ವತ: ಅವರ ಮನೆಗೆ ಹೋಗಿ ಅವುಗಳನ್ನು ಸಂದರ್ಶನ ಮಾಡಿ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದಾಗ ಸ್ಥಳೀಯ ಸಾಧಕರನ್ನು ಹೊರ ಜಗತ್ತಿಗೆ ಪರಿಚಯ ಮಾಡುವುದು ಸೇರಿದಂತೆ ಅವರ ಸಾಧನೆಗೆ ಗೌರವ ತಂದುಕೊಡುವ ಕಾರ್ಯವು ಗ್ರಾಮದ ಜನರಿಗೆ ನಮ್ಮ ಮಕ್ಕಳ ಬಗೆಗಿನ ಕಲಿಕಾ ಖಾತ್ರಿ ಒದಗಿಸುತ್ತಿದೆ. ಇದು ಮಕ್ಕಳ ಕಲಿಕೆಯಲ್ಲೂ ಪ್ರಭಾವ ಬೀರಿದೆ.



### ೪. ಪತ್ರಿಕೆಗೆ ದಾನಿಗಳು

ಪೆನ್ಸಿಲ್ ಪತ್ರಿಕೆಯನ್ನು ಓದುವ ಗ್ರಾಮದ ಅನೇಕರು ಇದರ ಪ್ರಕಟಣೆಯ ಖರ್ಚುವೆಚ್ಚದ ಬಗ್ಗೆ ಮಾತನಾಡುವಾಗ ಅವರೂ ಪ್ರಕಟಣೆಗೆ ಸಹಾಯ ಮಾಡುವುದಾಗಿ ಮುಂದೆ ಬಂದಿದ್ದಾರೆ. ಗ್ರಾಮದ ವೆಂಕನಗೌಡ, ರಮೇಶನಾಯಕ, ಶರಣಪ್ಪ, ರಾಮಾಚಾರಿ ಎನ್ನುವವರು. ಪತ್ರಿಕೆಯ ಪ್ರಕಟಣೆಗೆ ಯಾವಾಗ ಬೇಕಾದರೂ ಸಹಾಯ ನೀಡಲು ಸಿದ್ದರಿದ್ದೇವೆ ಎಂಬ ಭರವಸೆ ನೀಡಿದ್ದಾರೆ ಹಾಗೂ ಅನೇಕ ಪತ್ರಿಕಾ ಮಾಧ್ಯಮದ ಮಿತ್ರರಿಗೂ ನಮ್ಮ ಪತ್ರಿಕೆಯ ಬಗ್ಗೆ ಮಾಹಿತಿ ನೀಡಿ ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಪೆನ್ಸಿಲ್ ಬಗ್ಗೆ ಉತ್ತಮ ಬೆಂಬಲಿತ ಬರಹ ಪ್ರಕಟವಾಗುವಂತೆ ಮಾಡಿದ್ದಾರೆ. ಇವೆಲ್ಲವೂ ನಮ್ಮ ಮಕ್ಕಳ ಕಲಿಕಾ ಪ್ರಕ್ರಿಯೆಗಳಲ್ಲಿ ಸಹಾಯಕವಾಗಿವೆ.

### ೫. ನಮ್ಮ ಶಾಲೆ ನಮ್ಮ ಹೆಮ್ಮೆ

ಪೆನ್ಸಿಲ್ ಪತ್ರಿಕೆಯು ಪ್ರಕಟವಾದಾಗಿನಿಂದ ಅಷ್ಟೊಂದು ಗಂಬೀರವಾಗಿ ಪತ್ರಿಕೆ ವಿನ್ಯಾಸ ಹಾಗೂ ವಿಶೇಷ ಕಾಲಂಗಳ ಬಗ್ಗೆ ತಲೆಕೆಡಿಸಕೊಳ್ಳದೇ ಕೇವಲ ಮಕ್ಕಳ ಕಥೆ, ಕವನಗಳು ಚಿತ್ರಗಳನ್ನು ಪ್ರಕಟಿಸುತ್ತಿದ್ದ ನಮಗೆ ಇಂಡಿಯಾ ಫೌಂಡೇಶನ್ ಫಾರ್ ಆರ್ಟ್ಸ್ ಸಂಸ್ಥೆಯ ಒಡನಾಟ ಮತ್ತು ಮಾರ್ಗದರ್ಶನದಿಂದ ಬದಲಾದ ಪತ್ರಿಕೆಯ ವಿನ್ಯಾಸ ಹಾಗೂ ಮಕ್ಕಳ ನೈಜ ಅನುಭಗಳನ್ನು ಹಾಗೂ ಸ್ಥಳೀಯ ಇತಿಹಾಸ, ಕಲಾವಿದರನ್ನು ಅರ್ಥಮಾಡಿಕೊಳ್ಳುವಲ್ಲಿ ಒದಗಿಸುವ ಅವಕಾಶ ನಮ್ಮ ಮಕ್ಕಳ ಕಲಿಕಾ ವಿಸ್ತಾರತೆಗೆ ಸಹಾಯಕವಾಗಿದೆ. ಇದು ನಮ್ಮ ಗ್ರಾಮದ ಅನೇಕರಲ್ಲಿ ಹೊಸ ಆಶಯ ಹುಟ್ಟು ಹಾಕಿದೆ.

ಶಿಕ್ಷಕರು, ಮಕ್ಕಳ ಕಲಿಕೆಯ ಬಗೆಗಿನ ಧೋರಣೆಗಳು ಬದಲಾಗಿ ಸಮುದಾಯದಲ್ಲಿ ನಮ್ಮ ಶಾಲೆಯ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು "ನಮ್ಮ ಶಾಲೆ ನಮ್ಮ ಹೆಮ್ಮೆ" ಎಂಬ ಶೀರ್ಷಿಕೆಯಡಿ ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸುತ್ತಿದ್ದಾರೆ. ಇದರ ಪರಿಣಾಮವಾಗಿ ಈ ವರ್ಷದ ನಮ್ಮ ಶಾಲೆಯಲ್ಲಿ ಮಕ್ಕಳ ದಾಖಲಾತಿ ಹೆಚ್ಚಿದೆ

ಒಟ್ಟಾರೆ ಸಮುದಾಯದ ಸಹಕಾರ ಮತ್ತು ಬೆಂಬಲ ಪತ್ರಿಕೆಗೆ ದೊರಕುತ್ತಾ ಪರೋಕ್ಷವಾಗಿ ನಮ್ಮ ಶಾಲೆಗಳಲ್ಲಿ ಮಕ್ಕಳ ಕಲಿಕೆಗೆ ನಿರಂತರತೆಯನ್ನು ಕಾಪಾಡಿಕೊಳ್ಳಲು ಸಹಾಯಕವಾಗಿದೆ.

* * *

**ಅಶೋಕ ತೊಟ್ನಳ್ಳಿ,** ಕಲಬುರಗಿ

ದೊಡ್ಡಾಟ ಉತ್ತರ ಕರ್ನಾಟಕದ ಗಂಡು ಕಲೆ ಎನಿಸಿಕೊಂಡಿದೆ. ಜಿಲ್ಲೆಯಿಂದ ಜಿಲ್ಲೆಗೆ, ತಾಲೂಕಿನಿಂದ ತಾಲೂಕಿಗೆ ಮತ್ತು ಗ್ರಾಮದಿಂದ ಗ್ರಾಮಕ್ಕೆ ಕುಣಿತ ಮತ್ತು

ಹಾಡುಗಾರಿಕೆ ಮತ್ತು ಮುಖವರ್ಣಿಕೆಯಲ್ಲಿ ವ್ಯತ್ಯಾಸಗಳನ್ನು ಕಂಡಿದೇವೆ. ಕಾಣುತ್ತಿದ್ದೇವೆ. ಕಾರಣ ಇಲ್ಲಿ ನಿರ್ದಿಷ್ಟ ಕಲಿಕಾ ಕ್ರಮಗಳಿಲ್ಲ ಮತ್ತು ಇದಕ್ಕೆ ಸೇಡಂ ತಾಲೂಕಿನ ಜಾಕನಪಲ್ಲಿಯೂ ಹೊರತಲ್ಲ. ನಾನು ದೊಡ್ಡಾಟ ಕಲಿ-ಕಲಿಸು ಯೋಜನೆ ತೆಗೆದುಕೊಂಡದ್ದು ೨೦೧೪ ರಲ್ಲಿ. ಕಾರಣ ಇಂಥಾಹ ಕಲಾ ಪ್ರಕಾರಗಳು ಶಾಲೆಯೊಳಗೆ ಬಂದು ಮಕ್ಕಳ ಪಠ್ಯ ಮತ್ತು ಕಲೆ, ಕಲಾವಿದರು ಮತ್ತು ಮಕ್ಕಳ ಅನುಸಂದಾನ ಮಾಡಬೇಕಿತ್ತು. ಈ ನಿಟ್ಟಿನಲ್ಲಿ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆ ಮಕ್ಕಳಿಗೆ ಈ ಅನುಸಂದಾನದ ಮೂಲಕ ಶೈಕ್ಷಣಿಕ ಪ್ರಗತಿ ಕಾಣಲು ಅಥವಾ ಕಂಡುಕೊಳ್ಳಲು ಯೋಜನೆಗೆ ಅನುದಾನ ನೀಡಿತ್ತು. ನಾನು ಕಲಿ-ಕಲಿಸು ಯೋಜನೆಯಡಿಯಲ್ಲಿ 'ದೊಡ್ಡಾಟ ಕಲಿ-ಕಲಿಸು' ಎನ್ನುವ ಹೆಸರಿನಲ್ಲಿ ಮಕ್ಕಳಿಗೆ ದೊಡ್ಡಾಟದ ಆಯಮಗಳನ್ನು ಅರ್ಥೈಸುವುದು, ಹತ್ತಿರದಿಂದ ಕಾಣುವುದು ಮತ್ತು ಅನುಭವಿಸುವುದು, ಈ ಮೂಲಕ ಪಠ್ಯವನ್ನು ಅರ್ಥ ಮಾಡಿಕೊಳ್ಳುವುದು ಇದರ ಉದ್ದೇಶವಾಗಿತ್ತು.

ಆಧುನಿಕ ಮಾಧ್ಯಮಗಳ ಪ್ರಭಾವದಿಂದ ಯುವಕರು ಮತ್ತು ಈ ಮೊದಲು ಆಡಿ-ಹಾಡಿದ್ದವರು ಸಹ ಈ ಕಲೆಯಿಂದ ದೂರ ಉಳಿದಿದ್ದರು. ಯಾವುದೇ ಒಂದು ಕಲೆ ಉಳಿದು ಬೆಳೆಯಬೇಕಾದರೆ ಅದು ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ಮಾತ್ರಸಾದ್ಯವೆಂದು ಮನಗಂಡಿದ್ದೆ. ಹಾಗಾಗಿ ಈ ಕಲೆಯನ್ನು ಆಯ್ಕೆ ಮಾಡಿಕೊಂಡು ಪಠ್ಯದಲ್ಲಿರುವ ಸಣ್ಣ ಕಥೆಗಳನ್ನು ಇಟ್ಟು ಕೊಂಡು, ಗ್ರಾಮದಲ್ಲಿರುವ ದೊಡ್ಡಾಟದ ಕಲಾವಿದರನ್ನೆ ಕರೆಯಿಸಿ, ದೊಡ್ಡಾಟದ ಹಾಡು, ಗತ್ತು, ಕುಣಿತ ಬಳಸಿ ಎಚ್. ಎಸ್. ವೇಂಕಟೇಶ ಮೂರ್ತಿಯವರ 'ಬಿಲ್ಲ ಹಬ್ಬ' ಪಠ್ಯವನ್ನು ಇಲ್ಲಿ ಮುಖಾ ಮುಖಿಯಾಗಿಸಿದೆ. ಈ ಮೂಲಕ ಕನ್ನಡದ ಸಾಹಿತಿ ಕಲಾವಿದರ ಪರಿಚಯ ಮತ್ತು ಅವರ ಬರವಣಿಗೆ. ಅವರ ಸಾಹಿತ್ಯವನ್ನು ಓದಿ ದೊಡ್ಡಾಟದ ಚೌಕಟ್ಟಿನಲ್ಲಿ ಕಲ್ಪಿಸಿಕೊಳ್ಳುವುದು. ಜಾಕನಪಲ್ಲಿ ಆಂದ್ರದ ಹತ್ತಿರವಿರುವ ಗಡಿ ಗ್ರಾಮ ವಾಗಿರುವುದರಿಂದ ಮಾತೃ ಭಾಷೆ ತೆಲುಗು, ಕನ್ನಡತನ ಮತ್ತು ಭಾಷೆಯ ಉಳಿವು ಮತ್ತು ಸ್ಪಷ್ಟ ಕಲಿಕೆಯನ್ನು ಸಾಧ್ಯಗೊಳಿಸುವುದು.

ಮಕ್ಕಳು ಇಲ್ಲಿ ಪಠ್ಯವನ್ನು ಸರಳವಾಗಿ ಅರ್ಥ ಮಾಡಿಕೊಂಡರು ಮತ್ತು ಅದಕ್ಕಿಂತ ಹೆಚ್ಚಾಗಿ ದೊಡ್ಡಾಟ ಉಳಿವಿಗೆ ಕಾರಣರಾದರು. ಕಥೆಗೆ ಪೂರಕವಾಗಿ ಹಾಡು ಮತ್ತು ಆಶು ವಿಸ್ತರಣೆಗೆ ತಮ್ಮನ್ನು ತಾವು ತೆರೆದು ಕೊಳ್ಳುವುದು. ಬೇರೆ ಜಿಲ್ಲೆಯ ದೊಡ್ಡಾಟದ ಹಾಡುಗಾರಿಕೆ, ತಾಳ, ಲಯ-ತಾಲಿತ್ಯ ಗಳ ಮುಖಾಮುಖಿ, ಸ್ಥಳಿಯ ಕಲಾವಿದರೊಟ್ಟಿಗೆ ಮತ್ತು ಮಕ್ಕಳೊಟ್ಟಿಗೆ ಬೆರೆತು ತಾಳ-ಲಯ- ತಾಲಿತ್ಯಗಳ ಆಸ್ವಾದನೆಯಿಂದ ಮಕ್ಕಳ ಮನಸ್ಸಿನಲ್ಲಿ ನಾವು ಹೀಗೆ ಹಾಡಬೇಕು, ಆಡಬೇಕು ಮತ್ತು ಹೊಸ ತಾಲಿತ್ಯಗಳ ಹುಡುಕಾಟಕ್ಕೆ ತಮ್ಮನ್ನ ತಾವು ತಮಗರಿವಿಲ್ಲದಂತೆ



ತರೆದುಕೊಳ್ಳುವಿಕೆ. ಪಠ್ಯದಲ್ಲಿರುವ ಇನ್ನುಳಿದ ಯಾವುದೆ ಪಾಠವಾದರೂ ಈ ಕಲಾ ಪ್ರಕಾರದ ಮೂಲಕ ನೋಡುವುದು. ಮಕ್ಕಳು ಈ ಯೋಜನೆಯ ತಯಾರಿಯಲ್ಲಿ ಮಕ್ಕಳು ಪರಿಕರಗಳ ತಯಾರಿಕೆಯ ಅನುಭವ, ಮುಖವರ್ಣಿಕೆಯ ಅನುಭವ, ವಸ್ತ್ರವಿನ್ಯಾಸದ ಅನುಭವಗಳನ್ನು ಪಡೆದುಕೊಂಡರು. ಯೋಜನೆಯ ನಂತರದ ಅನೇಕ ಪ್ರಯೋಗಗಳಲ್ಲಿ ಈ ಅನುಭಗಳ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾರೆ.

ಇಲ್ಲಿ ಸೌಂದರ್ಯ ಪ್ರಜ್ಞೆ ಮಕ್ಕಳಿಗೆ ಬಹಳ ಮುಖ್ಯ. ಈ ಎಲ್ಲಾ ಕ್ರಿಯೆಗಳಲ್ಲಿ ತೊಡಗಿಕೊಳ್ಳುತ್ತಲೆ ತಮಗರಿವಿಲ್ಲದೆ ಬಣ್ಣ, ಆಕಾರ, ವಿನ್ಯಾಸಗಳಂತ ದೊಡ್ಡಾಟದ ಭಾಗಗಳಲ್ಲಿಯ ಸೌಂದರ್ಯ ಪ್ರಜ್ಞೆ ಮಕ್ಕಳ ಮನಸ್ಸಿನಲ್ಲಿ ಅವರಿಗೆ ಅವರಿವಿಲ್ಲದಂತೆ ಸೇರಿಕೊಂಡು ಬಿಡುತ್ತವೆ. ಈ ಯೋಜನೆಯ ನಂತರ ಗ್ರಾಮದ ಕಲಾವಿದರು ೧೪ ವರ್ಷಗಳ ಕಾಲ ನಿಂತಿದ್ದ ದೊಡ್ಡಾಟದ ಪ್ರದರ್ಶನಗಳು ಈ ಪ್ರಭಾವಗಳಿಂದ ಮತ್ತೆ ಪೂರ್ಣಾವಧಿ ಆಟಗಳು ನಡೆಯುವಂತಾಗಿರುವುದು ಈ ಯೋಜನೆಯ ಬಹುದೊಡ್ಡ ಯಶಸ್ಸು ಎನ್ನುತ್ತೆವೆ.

* * *

**ಪ್ರಶಾಂತ್ ಕುಮಾರ್,** ಮೈಸೂರ

ಪಠ್ಯದಲ್ಲಿನ ಗದ್ಯ-ಪದ್ಯದಿಂದ ಆಯ್ದ ಕೆಲವು ಪಠ್ಯವನ್ನು ಆಪ್ತರಂಗದ ವಿನ್ಯಾಸಕ್ಕೆ ಅಳವಡಿಸಿ ವಿಧ್ಯಾರ್ಥಿಗಳನ್ನೆಲ್ಲಾ ಆಪ್ತರಂಗದ ಪ್ರಯೋಗಕ್ಕೆ ಸಿದ್ದಪಡಿಸುವುದು

ಪಠ್ಯವನ್ನು ಆಪ್ತರಂಗ ಪ್ರದರ್ಶನಕ್ಕೆ ಅಳವಡಿಸುವ ಮೂಲ ಉದ್ದೇಶ ಪ್ರೇಕ್ಷಕರ ಹಾಗೂ ನಟರ ನಡುವೆ ಯಾವುದೇ ಸೇತುವೆ ಇಲ್ಲದೆ ಜೊತೆ-ಜೊತೆಯಾಗಿ ಪ್ರದರ್ಶನದಲ್ಲಿ ಭಾಗಿಯಾಗುವಿಕೆ ಹಾಗೂ ನಟರಿಗೆ ಆಗುವ ಅನುಭವ ಪ್ರೇಕ್ಷಕರಿಗೂ ಆಗಬೇಕೆನ್ನುವುದು.

ಆಪ್ತರಂಗಗದ ನಾಟಕಕಗಳು ಪ್ರದರ್ಶನದ ವಿನ್ಯಾಸವಾಗಿದ್ದು ರಂಗಮಂದಿರದಾಗಿರುವುದಿಲ್ಲ ಹಾಗಾಗಿ ಇದಕ್ಕೆ ಯಾವುದೇ ಒಂದು ನಿರ್ದಿಷ್ಟ ಜಾಗದ ಅವಶ್ಯಕತೆ ಇರುವುದಿಲ್ಲ. ಈ ಯೋಜನೆಗೆ ನಾನು ಆಯ್ದುಕೊಂಡಿರುವುದು ಮಂಡ್ಯ ಜಿಲ್ಲೆಯ ಕೆ.ಆರ್ ಪೇಟೆ ತಾಲ್ಲೂಕಿನ, ಅಕ್ಕಿಹೆಬ್ಬಾಲು ಗ್ರಾಮದ ಸರ್ಕಾರಿ ಪ್ರೌಢಶಾಲೆಯ ೮ ನೇತರಗತಿ ವಿಧ್ಯಾರ್ಥಿಗಳನ್ನು ಹಾಗೂ ಪಠ್ಯದಲ್ಲಿನ ಮೂವರು ವಿಭಿನ್ನ ಶೈಲಿಯ ಭಾಷಾ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟದ ಲೇಖಕರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಕಥೆ ಹೆಣೆಯುದರಲ್ಲಿ ನಿರೂಪಣೆ ಹಾಗೂ ಚಿತ್ರದ ಮೂಲಕ ದೃಶ್ಯ ಕಟ್ಟಿಕೊಡುವುದನ್ನು ತಿಳಿದುಕೊಂಡಿದ್ದು, ಇದರಿಂದ ಭಾಷೆಯ ಉಚ್ಚಾರಣೆಯ ಮಹತ್ವ, ವಾಕ್ಯ ರಚಿಸುವುದು ಹಾಗೂ ಪ್ರವಾಸ ಕಥನದಿಂದ ಖಂಡಗಳ ನಡುವಿನ

ಸಾಂಸ್ಕೃತಿಕ ವ್ಯತ್ಯಾಸ-ಸಾಮ್ಯತೆ ಹಾಗೂ ಆರ್ಥಿಕ ಸ್ಥಿತಿಗತಿ ನೈಸರ್ಗಿಕ ಸಂಪತ್ತು, ಇತಿಹಾಸ ವ್ಯವಹಾರ ರಾಜಕೀಯ ವ್ಯವಸ್ಥೆ ಹಾಗೂ ಭೌಗೋಳಿಕ ಸ್ಥಿತಗತಿಗಳನ್ನು ತಿಳಿದುಕೊಂಡು ಅವಲೋಕಿಸುವ ಜೊತೆಗೆ ಪ್ರಶ್ನೆ ಮಾಡುವ ಅವಕಾಶ ಮಕ್ಕಳಿಗೆ ದಕ್ಕಿದ್ದು ಯೋಜನೆಯ ಆಶಯ ಲಭಿಸಿದಂತಾಗಿದೆ

ನನ್ನ ಈ ಯೋಜನೆಗೆ ಶಾಲೆಯ ಸಮುದಾಯದಿಂಧ ಅಪಾರವಾದ ಪ್ರೋತ್ಸಾಹ ಹಾಗೂ ಗೌರವ ಸಿಕ್ಕಿದ್ದು ಮುಂದಿನ ದಿನಗಳಲ್ಲಿ ಇನ್ನಷ್ಟು ಕೆಲಸ ಮಾಡಲು ಈ ಶಾಲೆ ಪ್ರೇರಣೆಯಾಗಿದೆ

* * *

**ಗಂಗಪ್ಪ ಎಸ್. ಎಲ್.** ಧಾರವಾಡ

ಜಾಗತಿಕ ಮಟ್ಟದಲ್ಲಿ ಮಾನವರ ಪ್ರಯಾಣ ನಿರಂತರವಾಗಿ ಸಾಗುತ್ತಿರುತ್ತದೆ. ಅನೇಕ ಜನಾಂಗಗಳು ಒಂದು ನೆಲೆಯಿಂದ ಇನ್ನೊಂದು ನೆಲೆಗೆ ವಲಸೆ ಬಂದು ನೆಲೆ ನಿಂತಿವೆ. ಅಂತಹದೊಂದು ಸಮುದಾಯವು ಮಹಾರಾಷ್ಟ್ರ ರಾಜ್ಯದಿಂದ ತಮ್ಮ ದನಕರುಗಳನ್ನು ಮೇಯಿಸುತ್ತಾ ವಲಸೆ ಬಂದು ನೆಲೆನಿಂತಿರುವ ಪ್ರದೇಶ ಅಲ್ಕೇರಿ ಗೌಳಿವಾಡ. ಆ ವಲಸೆಯ ಸಂದರ್ಭದಲ್ಲಿ ಅನೇಕ ವಿಭಿನ್ನ ಅನುಭವಗಳನ್ನು ಅನುಭವಿಸಿರುತ್ತಾರೆ. ಅಂತಹ ವಿಭಿನ್ನ ಅನುಭವಗಳನ್ನು ಅವರದೇ ಶಾಲಾ ಮಕ್ಕಳಿಗೆ ದಾಖಲೀಕರಣ ಮಾಡುವ ಮಹತ್ವದ ಕಾರ್ಯ ಇದಾಗಿದೆ

ಗೌಳಿ ಸಮುದಾಯವು ತಮ್ಮದೇ ಆದ ವಿಶಿಷ್ಟ ಕಲೆ ಸಂಸ್ಕೃತಿಗಳನ್ನು ಹೊಂದಿದ್ದು; ಇಂದಿಗೂ ಅವುಗಳನ್ನು ಉಳಿಸಿಕೊಂಡು ಬಂದಿದೆ. ಇಂದು ಶಾಲೆಗೆ ಬರುತ್ತಿರುವ ಮಕ್ಕಳು ಮೊದಲ ತಲೆಮಾರಿನ ಅಕ್ಷರಸ್ಥರಾಗಿದ್ದಾರೆ ಇವರ ಮೂಲಕ ಗೌಳಿ ಸಮುದಾಯದ ವಲಸೆಯ ರೋಚಕ ಕಥೆಗಳನ್ನು ದಾಖಲಿಸುತ್ತಾ ಸಾಗುತ್ತಿರುವುದು ಮಕ್ಕಳು ತಮ್ಮದೇ ಸಮುದಾಯದ ಅನುಭವಗಳನ್ನು ಮತ್ತು ಅವರ ಹಿರಿಯರನ್ನು ನೆನಪಿಸಿಕೊಂಡು ತಮ್ಮ ಇತಿಹಾಸವನ್ನು ದಾಖಲಿಸಿಲು ಅನುಕೂಲ ಮಾಡಿಕೊಡುತ್ತಿದ್ದಾರೆ. ಇದರಿಂದಾಗಿ ಅವರದೇ ಸಮುದಾಯದ ನೆಲೆಗಳನ್ನು ಪತ್ತೆ ಹಚ್ಚಲು ಹಾಗೂ ವಿಶಿಷ್ಟತೆಗಳನ್ನು ಅರಿಯಲು ಪೂರಕವಾಗಿದೆ.

ಈ ಚಟುವಟಿಕೆಯ ಭಾಗವಾಗಿ ಮಕ್ಕಳೊಂದಿಗೆ ನಾನು ಸಮುದಾಯದ ಹತ್ತಿರ ಹೋದಾಗ ಅವರಿಗೆ ನಮ್ಮ ಶಾಲೆ ಅವರ ಚಲನಶೀಲತೆಯನ್ನು ಉಳಿಸುವ ಹಾಗೂ ಗೌರವಿಸುವ ಕೇಂದ್ರ ಎನ್ನುವ ಭಾವ ಬರತೊಡಗಿತು ಇದು ಗೈರು ಹಾಜರಾಗುವ ಮಕ್ಕಳನ್ನು ಪೋಷಕರು ಶಾಲೆಗೆ ನಿರಂತರವಾಗಿ ಕಳುಹಿಸಲು ಸಹಾಯಕವಾಗಿದೆ.



ಗೌಳಿಸಮುದಾಯದ ರೋಚಕ ಕಥೆಗಳನ್ನು ರೂಪಿಸುವಾಗಿ ಪಡೆಯುವ ಸಹಾಯಗಳಿಗೆ ನಾವು ಸಲ್ಲಿಸುವ ಕೃತಜ್ಞತೆಗಳು ಅವರ ಆಸಕ್ತಿಯನ್ನು ಶಾಲೆಯ ಕಡೆಗೆ ಆಕರ್ಷಿಸಿದೆ ಇದು ಮಕ್ಕಳ ಕಲಿಕೆಗೆ ಪೂರಕವಾಗಿ. ಸಹಾಯ ಸಹಕಾರ ಪಡೆಯಲು ಸಹಾಯಕವಾಗಿದೆ.

* * *

**ಸೈಯದ್ ಸಾದಿಕ್. ಎಸ್.** ಮೈಸೂರ

ಪ್ಲೇಬ್ಯಾಕ್ ಥಿಯೇಟರ್ ಮಾದರಿಯ ನಾಟಕದ ಪ್ರದರ್ಶನವು ಶಾಲೆ, ಕಾರಾಗೃಹ, ಮಾರುಕಟ್ಟೆ, ನಿಲ್ದಾಣ ಮತ್ತು ಹಬ್ಬಹರಿದಿನಗಳಲ್ಲಿ ಪ್ರದರ್ಶಿಸುತ್ತಾ ಇದು ಎಲ್ಲಾ ತರಹದ ವ್ಯಕ್ತಿಗಳ ಜೀವನಾನುಭವವನ್ನು ಹಂಚಿಕೊಳ್ಳುವ ಮಾರ್ಗವಾಯಿತು. ಪ್ಲೇಬ್ಯಾಕ್‌ಥಿಯೇಟರ್ ಒಂದು ಅನನ್ಯ ವಿಧವಾದ ಪರಸ್ಪರ ಸಂವಹನದ ನಟನಾ ಕ್ರಮವಾಗಿದೆ. ಇಲ್ಲಿ ಪ್ರೇಕ್ಷಕರು ಮತ್ತು ನಟರು ಒಂದುಗೂಡಿ ನಾಟಕವನ್ನು ಕಟ್ಟುತ್ತಾರೆ. ಪ್ಲೇಬ್ಯಾಕ್ ಥಿಯೇಟರ್ ಸಾಮಾನ್ಯವಾಗಿ ಎಲ್ಲಾ ನಾಟಕಗಳ ಹಾಗೆ ರೂಢಿಯಿಂದ ಬಂದಿರುವ ಹಸ್ತಾಕ್ಷರ ಪ್ರತಿಯುಳ್ಳ, ಲಿಖಿತ ಪಠ್ಯವುಳ್ಳ ರಂಗಪ್ರಕಾರವಲ್ಲ. ಬದಲಾಗಿಇಲ್ಲಿ ಪ್ರೇಕ್ಷಕರ ಕಥೆಗಳು, ಕನಸುಗಳು, ಅಮೂಲ್ಯ ಕ್ಷಣಗಳು, ದಿನನಿತ್ಯಜೀವನದ ಆಗು ಹೋಗುಗಳು ಮುಂತಾದ ವಿಷಯಗಳನ್ನು ಇದು ಒಳಗೊಂಡಿರುತ್ತದೆ.

ಪ್ಲೇಬ್ಯಾಕ್‌ಥಿಯೇಟರ್ ಮುಖ್ಯವಾಗಿ ಬದುಕಿನ ನೋವು ಸಂಕಟದ, ಜೀವನವನ್ನು ನೋಡುವ ರೀತಿಯನ್ನು ಬದಲಾಯಿಸುವಂತಹ, ನಮ್ಮನ್ನು ಧೈರ್ಯ ಸಾಹಸಮಯ ಮತ್ತು ಶಕ್ತಿಯುತ ಗೊಳಿಸುವ ಕಥೆಗಳನ್ನು ಪ್ರದರ್ಶನಕ್ಕೆ ಆಹ್ವಾನಿಸುವುದರ ಜೊತೆಗೆ ವೈಯುಕ್ತಿಕ ಕಥೆ ಮತ್ತು ಅನುಭವಗಳನ್ನು ಪ್ರದರ್ಶಿಸುವ ಮೂಲಕ ಜನರ ಭಾವನೆಗಳೊಂದಿಗೆ ನಟರನ್ನು ಮತ್ತು ಪ್ರೇಕ್ಷಕರನ್ನು ಜೊತೆಗೂಡಿಸುತ್ತದೆ.

ಒಂದು ಅಂಶವನ್ನು ಇಲ್ಲಿ ಗಮನಿಸುವುದಾದರೆ ಒಬ್ಬ ವ್ಯಕ್ತಿಯ ಜೀವನದಲ್ಲಿ ನಡೆಯುವ ಎಲ್ಲಾ ಘಟನೆಗಳು ಒಂದು ರೀತಿಯಲ್ಲಿ ಸಾರ್ವತ್ರಿಕ ಅಥವ ವಿಶ್ವವ್ಯಾಪಿ ಯಾಗಿರುತ್ತದೆ. ಇಂತಹ ಕಥೆಗಳು ನಮಗೆ ಹೊಸ ವೈಚಾರಿಕತೆ, ತಿಳುವಳಿಕೆಯನ್ನು ಕೊಟ್ಟು ಬದುಕನ್ನು ನೋಡುವ ಮತ್ತು ಅನುಭವಿಸುವ ರೀತಿಯನ್ನು ಜೊತೆಗೆ ತಾಳ್ಮೆಯಿಂದ ಬಾಳುವ ಪರಿಪಾಠವನ್ನು ಕಲಿಸಿ ಕೊಡುತ್ತದೆ. ಪ್ಲೇಬ್ಯಾಕ್‌ಥಿಯೇಟರ್ ನಾಟಕ ಪ್ರಕಾರವು ರಂಗಭೂಮಿಯ ಮೂಲ ಉದ್ದೇಶವನ್ನು ಅಭಿವೃದ್ಧಿಗೊಳಿಸುವ ಸಾಧನವಾಗಿದೆ.

■■

## ವಿಚಾರ ಮಂಡಣೆ – ೩

# ಜಾನಪದ ಚಿಂತನೆಗಳು, ಕಲಾಪ್ರಕಾರಗಳು ಮತ್ತು ಸಾಹಿತ್ಯ ಉದಾಹರಣೆಗಳು–ಕಲಿಕೆ ಅನ್ನುವುದರ ಮೂಲ ವೇದಿಕೆ

**ಗುರುರಾಜ ಎಲ್.,** ಕುಷ್ಟಗಿ, ಕೊಪ್ಪಳ

ಮಕ್ಕಳ ಹೆಜ್ಜೆಗಳು ಜಾನಪದದತ್ತ. ಎಂಬ ಹೆಸರಿನಡಿಯಲ್ಲಿ ಕಾರ್ಯ ಚಟುವಟಿಕೆಗಳನ್ನು ನಡೆಸಿದಾಗ ಹೊಸ ದಾರಿಯೇ ನನಗೆ ಗೋಚರಿಸಿತು. ಹೆಜ್ಜೆಗಳು ಜಾನಪದದತ್ತ... ಹೆಸರಿನಡಿ ನಮ್ಮ ಕಾರ್ಯ ಸಾಗಿದ್ದು ನೇರವಾಗಿ ನಮ್ಮ ಮಕ್ಕಳ ಮನೆಗಳೆಡೆಗೆ ಸಾಗಿತು. ಅಜ್ಜಿ, ಮುತ್ತಜ್ಜಿಯರ ಜೊತೆ ಯುವತಿಯರು ತಾಯಂದಿರು ಸೇರಿ ನಮ್ಮ ಮಕ್ಕಳಿಗಾಗಿ ಜನಪದವನ್ನು ಹಾಡಿ ತಾವು ಕಲಿಯುವಾಗ ಇರುತ್ತಿದ್ದ ಅಂದಿನ ಸ್ಥಿತಿ ಗತಿಗಳನ್ನು ಅವರು ಅನುಭವಿಸಿದ ಅನುಭವಗಳನ್ನು ಹೇಳುತ್ತಿದ್ದರು. ಇಂದು ಮಕ್ಕಳು ಹಿರಿಯರೊಂದಿಗೆ ಹಾಡುತ್ತಿರುವುದು ತುಂಬಾನೇ ಸಂತೋಷವಾಗುತ್ತದೆ. ಮಕ್ಕಳ ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿಯ ಜೊತೆಗೆ ನಮ್ಮ ನಾಟಕಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು ವಿಶೇಷ.

ನಮ್ಮ ವಿದ್ಯಾರ್ಥಿಗಳ ಮನೆ ಮನೆಗಳಲ್ಲಿ ಬೀಸುವ ಸಂದರ್ಭದಲ್ಲಿ, ಕುಟ್ಟೋ ಸಂದರ್ಭದಲ್ಲಿ ನಮ್ಮ ಮಕ್ಕಳ ಮೂಲಕ ದಾಖಲಾತಿಯನ್ನು ಮಾಡುತ್ತಿದ್ದೇನೆ. ಮಕ್ಕಳೇ ಆ ಹಾಡುಗಳನ್ನು ಕಲಿಯುವ ಪ್ರಯತ್ನದ ಜೊತೆಗೆ ಉಳಿಸುವ ಕಾರ್ಯವನ್ನು ಮಾಡುತ್ತಿರುವುದು ಗ್ರಾಮದ ಹಿರಿಯರಿಗೆ ಎಲ್ಲಿಲ್ಲದ ಆನಂದ. ಮನೆಯಲ್ಲಿ ಮಗು ಜನಿಸಿದಾಗ, ತೊಟ್ಟಿಲಿಗೆ ಹಾಕುವಾಗ, ಕಿವಿ ಚುಚ್ಚುವ ಸಂದರ್ಭದಲ್ಲಿ ಹಾಗೆಯೇ ಹೆಣ್ಣು ಮಕ್ಕಳು ಪ್ರಾಯಕ್ಕೆ ಬಂದಾಗ, ಮದುವೆಯ ಸಂದರ್ಭಗಳಲ್ಲಿ, ಮದುಮಗ/ ಮದುಮಗಳನ್ನಾಗಿ ತಯಾರಿ ಮಾಡುವ ಸಂದರ್ಭದಲ್ಲಿ, ಆರತಿ ಬೆಳಗುವ ಸಂದರ್ಭಗಳಲ್ಲಿ, ಮನೆ ತುಂಬಿಸುವ ಸಂದರ್ಭದಲ್ಲಿ, ಬಾಣಂತಿಯಾದಾಗ ಹೀಗೆ ಪ್ರತಿ ಸಂದರ್ಭದಲ್ಲೂ ಹಾಡುವ ಹಾಡುಗಳು ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ



ನಮ್ಮ ಮಕ್ಕಳ ಉತ್ಸಾಹದಿಂದ ತೊಡಗಿಸಿಕೊಂಡಿರುವುದರಿಂದ ಮರುಜೀವಂತಿಕೆ ಪಡೆಯುತ್ತಿವೆ. ನಮ್ಮ ಜನಪದ ನಿರಂತರವಾಗಿ ಉಳಿಸಿಕೊಳ್ಳಬೇಕು ಎನ್ನುವ ಮಾತುಗಳು ನಮ್ಮ ಪಾಲಕರ ಮನೆ ಮನಗಳಲ್ಲಿ ಮೂಡಿ ಬಂದಿರುವುದು ಸಂತೋಷದ ವಿಷಯವಾಗಿದೆ.

ಇನ್ನೂ ಮೊಹರಂ ಹಬ್ಬ ಇನ್ನೊಂದಿಷ್ಟು ವಿಶೇಷವಾಗಿ ನನಗೆ ಸೆಳೆಯಿತು. ಮೊಹರಂನ ರಿವಾಯಿತಿ ಪದಗಳು ಹಾಗೂ ಹೆಜ್ಜೆ ಕುಣಿತ ನಮ್ಮ ಪ್ರಾಜೆಕ್ಟನಲ್ಲಿ ಬಳಸಿಕೊಳ್ಳುವಾಗ ಇದು ಬೇಕಾ ಎಂಬ ಅನುಮಾನ ಹುಟ್ಟಿದ್ದ ನಿಜ. ಆದರೆ ನಾವು ಹಿರಿಯರೊಟ್ಟಿಗೆ ಒಡನಾಟ ಬೆಳೆಸಿ ಅವರೊಂದಿಗೆ ಚರ್ಚಿಸುತ್ತಾ ಸಾಗಿದಾಗ ಮೊಹರಂ ಆಚರಣೆಯ ಹಲವು ಸಾಧ್ಯತೆಗಳು ಬಿಚ್ಚಿಕೊಳ್ಳುತ್ತಾ ಹೋದವು. ಗುದ್ದಲಿ ಪೂಜೆಯಿಂದ ಹಿಡಿದು ಧಫನ್ ಮಾಡುವವರಿಗೂ ಬಗೆಬಗೆಯ ಆಚರಣೆಗಳು ತೆರೆದುಕೊಳ್ಳುತ್ತಾ ಮೂರು ತಿಂಗಳಿಂದ ಹೆಜ್ಜೆ ಕುಣಿತ ಅಭ್ಯಾಸ ಮಾಡುವ ಊರಿನ ಹಿರಿಯರು, ಯುವಕರು ತಮ್ಮ ಹೊಲ ಮನೆ ಕೆಲಸ ಕಾರ್ಯಗಳನ್ನೆಲ್ಲ ಮುಗಿಸಿ ರಾತ್ರಿಯ ಹೊತ್ತು ಎಲ್ಲರೊಡಗೂಡಿ ರಿವಾಯಿತ್ ಪದಗಳನ್ನು ಅಭ್ಯಾಸ ಮಾಡುತ್ತಾ ಹೆಜ್ಜೆ ಕುಣಿತದ ಅಭ್ಯಾಸ ಮಾಡುವುದೇ ವಿಶೇಷ. ಈ ಎಲ್ಲ ಸಂದರ್ಭಗಳಲ್ಲಿ ಮಕ್ಕಳ ಆಸಕ್ತಿ ತಮ್ಮ ಇತರೇ ತರಗತಿಗಳಲ್ಲಿ ಇರುವ ರೀತಿಯಲ್ಲಿರದೇ ನೂರಕ್ಕೆ ನೂರರಷ್ಟು ತಮ್ಮನ್ನು ತಾವು ಕೊಟ್ಟುಕೊಂಡಿದ್ದು ನನ್ನನ್ನು ಸೆಳೆದಿತ್ತು. ಮಕ್ಕಳಿಗೆ ತಮ್ಮ ಹಬ್ಬ ಆಚರಣೆಯನ್ನು ವಿವರಿಸುವುದು ಸಿಹಿಯೂಟ ಮಾಡಿದಷ್ಟು ತೃಪ್ತಭಾವ ಅವರಲ್ಲಿ ಕಂಡುಬಂದಿದ್ದನ್ನು ನಾನು ಗುರುತಿಸಿದ್ದೆ.

ಸಾಹಿತ್ಯದ ಹುಡುಕಾಟವು ನಮ್ಮ ಮಕ್ಕಳಲ್ಲಿ ನಿರಂತರವಾಗಿ ಬೆಳೆಸುತ್ತಿರುವುದರಿಂದ ಇಂದು ನಮ್ಮ ಶಾಲೆಯ ವಿದ್ಯಾರ್ಥಿಗಳು ಕೈ ಬರಹದ ಪತ್ರಿಕೆಯಿಂದ ಪ್ರಾರಂಭಿಸಿದ್ದು ಇಂದು ಬ್ಲಾಗ್ ಗೆ ತಮ್ಮ ಬರಹಗಳನ್ನು ದಾಖಲಿಸುವ ಕಾರ್ಯ ನಡೆದಿರುವುದು ಅತ್ಯಂತ ಹರ್ಷದ ವಿಷಯವಾಗಿದೆ. ಹಲವು ಪತ್ರಿಕೆಗಳಲ್ಲಿ ನಮ್ಮ ಮಕ್ಕಳ ಕಥೆಗಳು, ಕವನಗಳು ಪ್ರಕಟವಾಗಿವೆ. ಸಿದ್ಧಿ ಫೌಂಡೇಶನ್ ಅವರು ಸಂಗ್ರಹಿಸಿ ಪ್ರಕಟಿಸಿದ ಕಥೆ ಹಾಗೂ ಲೇಖನಗಳಲ್ಲಿ ನಮ್ಮ ಮಕ್ಕಳ ಬರಹಗಳು ಪ್ರಕಟವಾಗಿರುವುದಕ್ಕೆ ಹೆಮ್ಮೆ ಎನಿಸುತ್ತದೆ. ಮಕ್ಕಳು ಶಿಕ್ಷಣ ಪಡೆಯಲು ಬೇರೆ ಕಡೆಗೆ ಸಾಗಿದರೂ ಅವರ ಈ ಸಾಹಿತ್ಯ, ಜನಪದ ಹಾಗೂ ಕಲಾ ಶಿಕ್ಷಣದ ಹಿನ್ನಲೆಯಲ್ಲಿಯೇ ಚಿಂತನೆ ನಡೆಸುತ್ತಿರುವುದು ಕಂಡುಬಂದಿದೆ. ಕಲಿಕೆಯ ಮೂಲ ವೇದಿಕೆಯಾಗಿ ನಮ್ಮ ಜಾನಪದೀಯ ಚಿಂತನೆಗಳು, ಕಲಾಪ್ರಕಾರಗಳು ಹಾಗೂ ಸಾಹಿತ್ಯ ಇಂದು ನಮ್ಮ ಗ್ರಾಮದಲ್ಲಿ ಆಗಿರುವುದನ್ನು ಗಮನಿಸಬಹುದು. ಕಲಿಕೆಯ

ಹೊಸ ಸಾಧ್ಯತೆಗಳನ್ನು ನಾವು ಇತರೇ ಸಂಪನ್ಮೂಲಗಳಿಂದ ಪಡೆಯುವ ಪ್ರಯತ್ನವನ್ನು ಸದಾ ನಡೆಸುತಲಿದ್ದು ನಮ್ಮ ಮಕ್ಕಳ ಕಲಿಕೆಗೆ ಪೂರಕವಾಗಿ ಸಿಗುವ ಯಾವುದೇ ಸಂಪನ್ಮೂಲವನ್ನು ಬಳಸುವಲ್ಲಿ ನಾವು ಹಿಂದೆ ಬಿದ್ದಿಲ್ಲವೆಂದು ತಿಳಿಸಲು ಬಯಸುವೆ.

* * *

**ಕಿಶನರಾವ್ ಕುಲಕರ್ಣಿ,** ಕೊಪ್ಪಳ

ಶಾಲಾ ಮಕ್ಕಳಿಗೆ ನೀರಿನ ಮೇಲಿನ ಜನಪದ ಕಥೆಗಳು, ಹಾಡುಗಳು, ಲಾವಣಿಗಳು, ರಿವಾಯಿತ್‌ಪದ, ಡೊಳ್ಳಿನಪದ, ಜೊಕುಮಾರನ ಕಥೆ, ಗುಳ್ಳವನ ಕಥೆ... ವಿವಿಧ ಕಥೆಗಳ ಪರಿಚಯ ಮಾಡುವುದರ ಮೂಲಕ ಇಂತಹ ಸಾಹಿತ್ಯ ಸಂಗ್ರಹ ಮಾಡಲು ತಿಳಿಸಿದಾಗ ಆರಂಭದಲ್ಲಿ ಪಾಲಕ ಸಮುದಾಯದಿಂದ ತೊಂದರೆ ಎದುರಾದವು. 'ಜನಪದದಿಂದ ಜಲಪದ' ಯೋಜನೆಯ ಮೂಲ ಉದ್ದೇಶ ಜಲಸಂರಕ್ಷಣೆಯಾಗಿರುವ ಕಾರಣ ಹಳ್ಳಿಗರಿಗೆ ಮತ್ತು ಮಕ್ಕಳಿಗೆ ಆಕರ್ಷಕವೆನಿಸುವ ರೀತಿಯಲ್ಲಿ ಅವರ ನೆಲದಲ್ಲಿ ಹಾಸುಹೊಕ್ಕಾಗಿರುವ ಜನಪದ ಸಾಹಿತ್ಯ ಸಂಗ್ರಹಿಸುವುದು. ಜಲಸಂರಕ್ಷಣೆಗಾಗಿ ಈ ಭಾಗದಲ್ಲಿ ಮಾಡಿರುವ ಐತಿಹಾಸಿಕ ಪಳೆಯುಳಿಕೆಗಳಾಗಿರುವ ಬಾವಿಗಳು ನಮಗೆ ಮೂಲ ಕಲಿಕಾ ವಸ್ತುಗಳಾಗಿದ್ದವು. ಇವುಗಳನ್ನು ಜಲಸಂರಕ್ಷಣೆಗೆ ಹೆಣೆದುಕೊಂಡು ಯೋಜನೆ ಮುನ್ನಡೆದಿದೆ.

ನೂರಾರು ವರ್ಷಗಳ ಹಿಂದಿನ ಸುಭಿಕ್ಷೆಯ ಆ ದಿನಗಳಲ್ಲಿ ಮಳೆ ನೀರಿನ ಮಹತ್ವ ಅರಿತಿರುವುದು ಕಾಣುತ್ತೇವೆ. ಈ ಸಾಲಿನಲ್ಲಿ ಸೇರುವ ಗುರ್ಜಿಯ ಹಾಡು, ಮಂಟಯ್ಯನ ಮಳೆ ಹಾಡು, ಗ್ಯಾನಪ್ಪಯ್ಯನ ಮಳೆ ಹಾಡು, ಬೆಳದಿಂಗಳಲ್ಲಿ ನಡೆಯುವ ಕೋಲಾಟ, ಡೊಳ್ಳಿನ ಪದಗಳು, ಗೊಗ್ಗಯ್ಯನ ಕಾರ್ಣಿಕ, ಜನಪದೀಯರ ವೇಷ ಭೂಷಣ, ಸಾಹಿತ್ಯ, ಮಕ್ಕಳ ಕಲಿಕೆಗೆ ಹೂರಣದಂತೆ ಇದೆ. ಈ ಜನಪದ ಕಲೆಗಳನ್ನು ಪರಿಚಯಿಸುವುದರ ಜೊತೆಗೆ ಕಲಿಕೆಗೆ ಇಂಬು ನೀಡುವ ಯತ್ನ ಸಾಧ್ಯ ಎಂಬುದು ಕಲಿಕ–ಕಲಿಸು ಯೋಜನೆಯ 'ನಮ್ಮ ಜಲಪದ–ಜನಪದ' ಪ್ರಯೋಗದಿಂದ ಸಾಕಾರಗೊಂಡಿದೆ.

ನೀರಿನ ಸಾಹಿತ್ಯ, ಆಚರಣೆಗಳು, ನಾಟಕಗಳನ್ನು ಮಕ್ಕಳೆ ಸಂಗ್ರಹಿಸಿಕೊಂಡು ತಂದರು. ಜೊತೆಗೆ ಕೆಲ ಜನಪದ ಕಲಾವಿದರ ನೆರವಿನಿಂದ ಹಲಗೆ, ಡೊಳ್ಳು ನುಡಿಸುವುದನ್ನು ಕಲಿತುಕೊಂಡರು. ಕ್ರಮೇಣ ಮಳೆ ನೀರು ಯಾವ ರೀತಿ ಸಂಗ್ರಹಿಸಬಹುದು ಎಂಬುದರ ಮಾದರಿಗಳನ್ನು, ಚಿತ್ರಪಟಗಳನ್ನು ತಯಾರಿಸಿದರು. ಅಲ್ಲದೆ ಹಾಡುಗಳ ಮೂಲಕ, ಕವನಗಳ ಮೂಲಕ ತಾವು ಅರ್ಥೈಸಿಕೊಂಡಿರುವ ವಿಷಯವನ್ನು ಕ್ರೋಢಿಕರಣಗೊಳಿಸಿದರು.

ಮಳೆ ನೀರು ಕೊಯ್ಲು, ಬಾವಿ ನಿರ್ಮಾಣ, ಕೆರೆ ನಿರ್ಮಾಣಗಳಂತಹ ಹಲವಾರು ಜಲ ಮೂಲಗಳ ಹಿಂದೆ ಇರುವ ಜನಪದದ ದಾರಿ ಹಿಡಿದು ಸಾಗಿದರೆ ಶಾಲಾ



ಮಕ್ಕಳಿಗೆ ಅಂತರ್ಜಲದ ಅರಿವು ಮೂಡಿಸುವುದು ಸುಲಭ ಎಂಬುದು ನಮ್ಮ ಪ್ರಯೋಗದಿಂದ ಸಾಧ್ಯವಾಗಿದೆ. ಇಂತಹ ಜನಪದೀಯ ಚಿಂತನೆಗಳಲ್ಲಿ ಮಕ್ಕಳನ್ನು ತೊಡಗಿಸಿದ ಕಾರಣ ಮಕ್ಕಳಿಗೆ ಸ್ಥಳೀಯ ಭೌಗೋಳಿಕ ರಚನೆ, ಸಾಂಪ್ರದಾಯಿಕ ಆಚರಣೆಗಳ ಪರಿಚಯ, ಧಾರ್ಮಿಕ ಆಚರಣೆಗಳ ಮಹತ್ವದ ಬಗ್ಗೆ ಜ್ಞಾನ, ಅನ್ವೇಷಣಾ ಮತ್ತು ಸಂದರ್ಶನ ವಿಧಾನಗಳು, ಕಂಡುಕೊಂಡ ಅನುಭವಗಳನ್ನು ಕಥಾ ರೂಪಕ್ಕೆ ತಂದು ಸಾಮಾಜೀಕರಣಗೊಳಿಸುವ ಪ್ರಯತ್ನ ನಡೆದಿದೆ.

ಜಾನಪದ ಜನರ ನಡುವೆ ಅಂತರ್ಗತವಾಗಿರುವ ಸಾಹಿತ್ಯ. ಅದನ್ನು ಗುರುತಿಸುವಲ್ಲಿ ನಾವು ಎಡವಿದ್ದೇವೆ ಎಂಬುದನ್ನು ಮಕ್ಕಳೆ ಇಲ್ಲಿ ನಿರೂಪಿಸಿದ್ದಾರೆ.

ಹಳ್ಳಿಗರ ಸಾಹಿತ್ಯ ಒಂದರ್ಥದಲ್ಲಿ ಅಭಿವ್ಯಕ್ತಿಯ ಸಂಕೇತವಾಗಿದೆ. ಜನಪದರು, ಹಾಡುವ ಹಾಡುಗಳನ್ನು ಹೇಳುವ ಕತೆಗಳನ್ನು, ಒಡಪು, ಒಗಟು ಮತ್ತು ನುಡಿಗಟ್ಟುಗಳಲ್ಲಿ ಅಂತರ್ಗತವಾಗಿರುವ ಸಾಹಿತ್ಯ ಮಕ್ಕಳಿಗೆ ಪರಿಚಯ ಮಾಡಿಕೊಂಡಿದ್ದಾರೆ. ಗ್ರಾಮದ ಹಿನ್ನೆಲೆ ಇಟ್ಟುಕೊಂಡು ಕಥಾ ರಚನೆಗೆ ಮಕ್ಕಳೇ ವಿಷಯ ಆಯ್ಕೆ ಮಾಡಿಕೊಂಡಿದ್ದರಿಂದ ಗ್ರಾಮದ ಜನರ ಜೀವನ ಶೈಲಿಯ ಮೇಲೆ ಬೆಳಕು ಚೆಲ್ಲುತ್ತಿದೆ. ಗ್ರಾಮೀಣರ ರೋಚಕ ಅನುಭವಗಳನ್ನು ಕಥೆಗಳಿಗೆ ಇಳಿಸಿ ಅವರಲ್ಲಿ ಸಾಹಿತ್ಯ ಅರಿವು ಮೂಡಿಸುವಲ್ಲಿ ಮಕ್ಕಳಿಗೆ ಪೂರಕವಾಗಿದೆ.

ಪ್ರವಾಸ ಅಧ್ಯಯನ ಕೈಕೊಂಡಾಗ ವಿದ್ಯಾರ್ಥಿಗಳೇ ಜನಪದರೊಂದಿಗೆ ನೇರ ಮಾತಿಗೆ ಇಳಿದ ಕಾರಣವಾಗಿ ಅವರಲ್ಲಿ ಬರವಣಿಗೆ, ಮಾತುಗಾರಿಕೆ, ಓದುವುದು, ಅಭಿವ್ಯಕ್ತಿ, ಮಾಹಿತಿ ಸಂಗ್ರಹಣೆ, ಸಂಶೋಧನೆ, ಸೂಕ್ಷ್ಮ ಸಂವೇದನೆಯಂತಹ ಕೌಶಲ್ಯಗಳ ಬೆಳವಣಿಗೆಗೆ ಕಾರಣವಾಗಿದೆ. ಹಳ್ಳಿಯ ಜನರ ಬದುಕಿಗೆ ರಂಜನೆ ನೀಡಿ ಅವರ ನಲಿವು–ನೋವುಗಳಿಗೆ ಸ್ಪಂದಿಸುತ್ತಿದ್ದ ಕಲಾ ಸಂಸ್ಕೃತಿ ಸಂಗ್ರಹವಾಗಿದೆ.

ಮಕ್ಕಳಿಗೆ ಇಂತಹ ಜನಪದೀಯರ ಸಂಪರ್ಕದಿಂದಾಗಿ ಭೌಗೋಳಿಕ ಪರಿಸರ, ಸಾಮಾಜಿಕ ಸ್ತರವಿನ್ಯಾಸ, ಧಾರ್ಮಿಕ ಆಚರಣೆಗಳು, ನಂಬಿಕೆಗಳು, ಜನಪದ ಜ್ಞಾನದ ಅವಲೋಕನ, ಜನಪದ ಕಥೆಗಳನ್ನು, ಜನಪದಗಳನ್ನು ಹಾಡುವವರನ್ನು ಮಕ್ಕಳೆ ಸಂದರ್ಶನದ ಮೂಲಕ ದಾಖಲೀಕರಣಗೊಳಿಸುತ್ತಿದ್ದಾರೆ.

* * *

**ರವಿಚಂದ್ರ ಡಿ.,** ರಾಯಚೂರ

ಇಂದು ನವಮಾಧ್ಯಮಗಳ ಭರಾಟೆಯಲ್ಲಿ ಮಕ್ಕಳು ಪಾಶ್ಚಿಮಾತ್ಯ ಸಂಗೀತ ಸಾಹಿತ್ಯಕ್ಕೆ ಜೋತು ಬಿದ್ದಿರುವ ಇಂದಿನ ದಿನಗಳಲ್ಲಿ ನಮ್ಮ ಪಂಪರೆಯಿಂದ ಬಂದ ಜಾನಪದ ಜ್ಞಾನದ ಸದ್ಬಳಕೆಗಾಗಿ ಮಕ್ಕಳಲ್ಲಿ ಜಾನಪದ ಸಾಹಿತ್ಯದತ್ತ ಒಲವು ಬೆಳೆಸಬೇಕಾಗಿದೆ. ಅಲ್ಲದೆ ಸಮುದಾಯವನ್ನೂ ಜಾನಪದದತ್ತ ಸೆಳೆಯಬೇಕಾಗಿದೆ.

ಅದಕ್ಕಾಗಿಯೇ ನಮ್ಮ ಸ ಹಿ ಪ್ರಾ ಶಾಲೆ ಮಲ್ಲಾಪುರದಲ್ಲಿ ನಾನು ನಡೆಸಿದ ಪಠ್ಯಂತರ್ಗತ ಜಾನಪದ ಪರಿಕಲ್ಪನೆಯು ಮೂರು ಆಯಾಮಗಳನ್ನು ಒಳಗೊಂಡಿದ್ದು ಮೊದಲಿಗೆ ಶಾಲಾ ಮಕ್ಕಳಿಂದ ಜಾನಪದ ಕ್ಷೇತ್ರಕಾರ್ಯ, ಶಾಲಾ ಮಕ್ಕಳ ತಾಯಂದಿರು, ಊರಿನ ಜಾನಪದ ಕಲಾವಿದರಿಂದ ಜಾನಪದ ಸಂಗ್ರಹ, ನಂತರ ಬರಹರೂಪಕ್ಕಿಳಿಸುವುದು, ಹಾಡುವಿಕೆ, ನೃತ್ಯ ಕಲಿಯುವಿಕೆ, ಪ್ರದರ್ಶನದ ಜೊತೆಗೆ ಅದೇ ಜಾನಪದ ಲಯ, ಶೈಲಿಯನ್ನು ಉಳಿಸಿಕೊಂಡು ಕನ್ನಡ, ಗಣಿತ, ಸಮಾಜ ವಿಜ್ಞಾನ, ಪರಿಸರ ಅಧ್ಯಯನದ ಶಾಲಾ ಪಠ್ಯದ ಪಠ್ಯಾಂಶಗಳನ್ನು ಜಾನಪದಗಳೊಂದಿಗೆ ಮರುಸೃಷ್ಟಿಸಿ ಕಲಾಂತರ್ಗತಗೊಳಿಸಿ ಸಮುದಾಯದಲ್ಲಿ ಮುಖಾಮುಖಿಯಾಗಿಸಿ ಪ್ರದರ್ಶನಕ್ಕೂ ಮಕ್ಕಳನ್ನು ಸಿದ್ದಗೊಳಿಸುವ ವ್ಯಾಪಕ ಪ್ರಕ್ರಿಯೆಯೇ ಪಠ್ಯಂತರ್ಗತ ಜಾನಪದ ಪ್ರಯೋಗ. ಈ ಪ್ರಯೋಗದ ಶೈಕ್ಷಣಿಕ ಫಲಿತಗಳನ್ನು ಹೀಗೆ ಗುರುತಿಸಬಹುದು.

೧. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ ಉದ್ದೇಶಗಳ ಅನ್ವಯ ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು, ಕಲಿಕೆಯನ್ನು ಜೀವನ ಅವಶ್ಯಕತೆಗಳೊಂದಿಗೆ ಜೋಡಿಸುವುದು, ಹಾಗೂ ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುತ್ತ ಕಲಿಕಾ ಗುಣಮಟ್ಟ ಹೆಚ್ಚಿಸುವ ಉದ್ದೇಶಿತ ಗುರಿ ಸಾಧ್ಯವಾಗಿದೆ.

ಉದಾಹರಣೆಗೆ : ನಮ್ಮ ಜಾನಪದ ಪಠ್ಯಂತರ್ಗತ ಪ್ರಯೋಗಿಕ ಕೃತಿ ನಮ್ಮೂರ ಜಾನಪದ ಅನುಸಂಧಾನ ಪುಸ್ತಕದಲ್ಲಿ ಇರುವ ಈ ಕೆಳಗಿನ ಜಾನಪದ ಶೈಲಿಯ ಮರುಸೃಷ್ಟಿಯ ಹಾಡುಗಳನ್ನು ಗಮನಿಸಬಹುದು.

ಸೂವ್ವೀ ಸೂವ್ವೀ ಸೂವಮ್ಮಾ //
ಓಣ್ಯಾಗ ಅಡಬ್ಯಾಡ ಶಾಲೀಗೇ ಹೋಗಮ್ಮಾ.
ಶಾಲೀಗಾ ಹೋಗಿ ನೀನಾರು ಕಲಿಯಮ್ಮಾ /ಸುವ್ವೀ ಸುವ್ವೀ/
ನಿಮ್ಮಪ್ಪಾಗಾ ಹೆದರಾಬ್ಯಾಡ ಹೊಲಕಾ ನೀ ಬರಬ್ಯಾಡ
ಎಲ್ಲಾ ದಗುದಾವಾ ನಾನೇ ಮಾಡುವೇ
ನೀ ಬೇಸು ಓದಮ್ಮಾ / ಸುವ್ವೀ ಸುವ್ವೀ/

ಇದನ್ನು ಕಲಿತ ಮಕ್ಕಳಲ್ಲಿ, ಪಾಲಕರಲ್ಲಿ ಶೈಕ್ಷಣಿಕ ಜಾಗೃತಿ ಕಾಳಜಿ ಹೆಚ್ಚಿದ್ದು ಬೌದ್ಧಿಕ ವಿಕಾಸದ ಸಾಧ್ಯತೆಗಳ ವಿಸ್ತರಣೆಯಾಗಿದ್ದು ಶಿಕ್ಷಣದ ಕುರಿತಾದ ಅವರ ಗ್ರಹಿಕೆಯಲ್ಲೂ ಬದಲಾವಣೆ ಮೂಡಿದೆ. ಹೆಚ್ಚಿನ ಹಾಡುಗಳಿಗೆ ಹಾಗು ಮಾಹಿತಿಗೆ "ನಮ್ಮೂರ ಜಾನಪದ ಅನುಸಂಧಾನ" ಕೃತಿಯನ್ನು ಪರಾಮರ್ಶಿಸಬಹುದು. ಅಲ್ಲದೆ ಈ ಕೆಳಗಿನ ಯೂಟ್ಯೂಬ್ ಲಿಂಕ್ ತೆರೆದು ನೋಡಬಹುದು. https://youtu.be/SbF7FvBQgBY



೨. ಜಾನಪದಗಳಲ್ಲಿ ಕಲಾ ಶಿಕ್ಷಣ ಮತ್ತು ಸಮುದಾಯದ ಒಳಗೊಳ್ಳುವಿಕೆ ಹೆಚ್ಚಿದೆ. ಸ್ಥಳೀಯ ಜಾನಪದಗಳ ಮೂಲಕ ಸಮುದಾಯವನ್ನೂ ಸಹ ಒಳಗೊಳ್ಳುವ ಮೂಲಕ ಜಾಗೃತಿಗೊಳಿಸಲು ಸಹ ಬಳಸಿಕೊಳ್ಳಬಹುದಾಗಿದೆ.

೩. ಪಠ್ಯಂತರ್ಗತ ಜಾನಪದಗಳಲ್ಲಿ ಕಲಾಂತರ್ಗತ ಕಲಿಕೆ ಮತ್ತು ತರಗತಿ ಕೋಣೆಯಲ್ಲಿ ನಾವೀನ್ಯತೆಯೊಂದಿಗೆ ಕಲಿಕೆಯಾಗಿದೆ.

"ಹೇ ಜಾಣ.. ಹೇಳ್ ಜಾಣ..//
ಒಂದಂಬುದೇನ್ ಜಾಣ ಒಂದಂಬುದೇನು..?
ಒಂದೇನೆಂಬುದು ಎತ್ತನ ಬಾಲ
ಎರಡಂಬುದೇನ್ ಜಾಣ ಎರಡಂಬುದೇನು ?
ಎರಡೇನ್ ಎಂಬುದು ಎತ್ತಿನ ಕೋಡು. // ಹೇ ಜಾಣ // "

ಈ ಗೀತೆಯಲ್ಲಿ ಗಣಿತ ಜ್ಞಾನವನ್ನು ಎಷ್ಟು ಸುಲಭವಾಗಿ ಹಾಡುತ್ತಲೇ ಸಂತಸದಿಂದ ಕಲಿತಿದ್ದಾರೆ.

೪. ಮಕ್ಕಳಲ್ಲಿ ಮತ್ತು ಸಮುದಾಯದಲ್ಲಿ ವೈಜ್ಞಾನಿಕತೆ ಮತ್ತು ಜಾಗೃತಿ ಮೂಡಿಸುವಲ್ಲಿ ಪಠ್ಯಂತರ್ಗತ ಜಾನಪದಗಳನ್ನು ಹೆಚ್ಚಾಗಿ ಬಳಸಲಾಗಿದೆ.

೫ ಭಾಷಾ ಕೌಶಲ ಮತ್ತು ಕಲಿಕೆಯ ಪುನರ್ಬಲನಕ್ಕೆ ಪೂರಕವಾಗಿದೆ.

೬. ಪಠ್ಯಕ್ಕೆ ಪೂರಕ ಮರುಸೃಷ್ಟಿ ಕಾರ್ಯ ಯಶಸ್ವಿಯಾಗಿ ನಡೆದಿದೆ.

ಹೀಗೆ ಮಕ್ಕಳಲ್ಲಿ, ಶಿಕ್ಷಕರಲ್ಲಿ, ಸಮುದಾಯದಲ್ಲಿ ಕಲೋತ್ಸಾಹದ ಜೊತೆಗೆ ಬೌದ್ಧಿಕ ವಿಕಾಸಕ್ಕೆ ಪೂರಕವಾಗಿವೆ. ಜಾನಪದಗಳಲ್ಲಿ ಪರಂಪರೆಯ ಜ್ಞಾನದೊಂದಿಗೆ ಜೀವನ ಶಿಕ್ಷಣ, ನೈತಿಕ ಶಿಕ್ಷಣದೊಂದಿಗೆ ವ್ಯಕ್ತಿತ್ವ ವಿಕಸನಕ್ಕೂ ಪೂರಕವಾಗಿವೆ . ಸಮಾಜಮುಖಿ ವರ್ತನೆಯಲ್ಲಿ ಬದಲಾವಣೆ, ನಾಯಕತ್ವ ಗುಣ ಬೆಳವಣಿಗೆ, ಕಲಾಭಿವ್ಯಕ್ತಿ, ಕಲೋಪಾಸನೆ ಮೂಲಕ ಖಿನ್ನತೆ ದೂರಮಾಡುವಲ್ಲಿಯೂ ಜಾನಪದಗಳು ಪರಿಣಾಮಕಾರಿಯಾಗಿವೆ.

* * *

**ಸಂತೋಷ್ ಡಿ. ಡಿ.ದಿಂಡಗೂರ್,** ಹಾಸನ್

ಜಾನಪದೀಯ ಚಿಂತನೆಗಳು ಇಂದಿನ ಕಾಲಕ್ಕೆ ಬಹಳ ಅವಶ್ಯಕವಾದ ಒಂದು ಪ್ರತಿಮೆ. ಜನಪದಕ್ಕೆ ಇರುವ ದೊಡ್ಡ ಶಕ್ತಿ ಎಂದರೆ, ಒಂದು ಸಮಾಜವನ್ನು, ಸಮುದಾಯವನ್ನು, ವ್ಯಕ್ತಿಯನ್ನು– ಬಿಡಿಯಾಗಿ ಮತ್ತು ಇಡಿ ಯಾಗಿ ನೋಡಬಲ್ಲ ಸಮಷ್ಟಿಯ ಪ್ರಜ್ಞೆ.

ಇಂತಹ ಒಂದು ಜನಪದ ಎಂಬ ದೇಸೀಯ ಮಾರ್ಗಗಳು ವಿದ್ಯಾರ್ಥಿಗಳ ಮನಸಿನಲ್ಲಿ ಬೇರೂರುವಂತೆ ಮಾಡಿ, ಜ್ಞಾನದ ಹಾದಿಯ ಕಡೆಗೆ ಕೊಂಡೊಯ್ಯುವ ಪ್ರಯತ್ನವನ್ನು ಜಾನಪದದ ಕಲಿಕಾರ್ಥಿ ಆದ ನಾನು ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ನ ಸಹಕಾರ ದೊಂದಿಗೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ದಿಂಡಗೂರು ಗ್ರಾಮದ ಸರ್ಕಾರಿ ಹಿರಿಯಪ್ರಾಥಮಿಕ ಪಾಠ ಶಾಲೆಯ ಮಕ್ಕಳಿಗೆ "ದೇಸಿ ರಂಗ ಕಲೆಯ (ಸೋಮನ ಕುಣಿತ) ಮುಖೇನ ಪಠ್ಯದ ಅಭಿವ್ಯಕ್ತಿ" ಎಂಬ ಪ್ರಾಜೆಕ್ಟ್ ಅನ್ನು ಸಿದ್ದ ಪಡಿಸಿ, ಇದರ ಸಂಬಂಧ ತರಗತಿಗಳನ್ನು ನಡೆಸಿ, ಪ್ರಯೋಗಗಳನ್ನು ಕೈಗೊಂಡು, ಈ ಅವದಿಯಲ್ಲಿ ಮಕ್ಕಳಲ್ಲಿ ಆದಂತಹ ಕೆಲವಾರು ಬದಲಾವಣೆಯ, ಬೆಳವಣಿಗೆಯ ಅಂಶಗಳನ್ನು ಇಲ್ಲಿ ತುಂಬಾ ಕುತೂಹಲಕಾರಿಯಾಗಿ ಹಂಚಿಕೊಳ್ಳಲು ಬಯಸುತ್ತೇನೆ.

ಪ್ರಾರಂಭದಲ್ಲಿ ಸೋಮನ ಕುಣಿತ ಹಾಗೂ ನಮ್ಮ ಊರಿನ ದೇವರುಗಳ ಸುತ್ತ ಇರುವ ಜಾತಕ ಕತೆಗಳನ್ನ ತಿಮ್ಮಯ್ಯ ಎಂಬ ಸ್ಥಳೀಯ ಜನಪದ ಕಲಾವಿದರಿಂದ ಹೇಳಿಸಿದೆ. ವಿಚಿತ್ರ ಎಂದರೆ ಮುಂದಿನ ತರಗತಿಯಲ್ಲಿ ಸೋಮನ ಹಾಗೂ ನಮ್ಮ ಊರಿನ ದೇವತೆ ಗಳ ಬಗ್ಗೆ ಹಲವಾರು ಕತೆಗಳನ್ನು ನಮ್ಮ ಹುಡುಗರು ಕಲೆ ಹಾಕಿ ತಂದು ವಿಭಿನ್ನ ಶೈಲಿಯಲ್ಲಿ ಅದನ್ನ ಹೇಳಿದರು. ನಾನು ಅದನ್ನು ಆಶು ವಿಸ್ತರಣೆಗೆ ಪ್ರೇರೇಪಿಸಿದೆ ಅವರು ಮತ್ತಷ್ಟು ಉರುಪು ತುಂಬಿಕೊಂಡು ಅವರೇ ಪಾತ್ರ, ಸನ್ನಿವೇಶ, ರಂಗಸ್ಥಳ ಗಳನ್ನೂ ಆಯ್ದುಕೊಂಡು ಬಹಳ ಗಾಂಭೀರ್ಯದಿಂದ ಮಾಡಿ ಸೈ ಎನಿಸಿ ಕೊಂಡರು. ಈ ಒಂದು ಪ್ರಯೋಗದಲ್ಲಿ ಶಿಕ್ಷಕರೂಭಾಗವಹಿಸಿದ್ದು ನಮಗೆ ಮತ್ತಷ್ಟು ಖುಷಿ ತಂದಿತು.

ತರಗತಿಯಲ್ಲಿ ಸ್ಥಳೀಯ ಕಲಾವಿದೆ ಆದ ಸಣ್ಣಮ್ಮ ಹಾಗೂ ದೊಡ್ಡಮ್ಮ ಅವರಿಂದ ಸೋಬಾನೆ ಹಾಡಿಸಿದೆ ಅದನ್ನು ಕೇಳಿದ ಮಕ್ಕಳು ಮುಂದಿನ ತರಗತಿಯಲ್ಲಿ ಅವರ ಮನೆಯಲ್ಲಿ ಅವರ ಅಜ್ಜಿ ತಾತರನ್ನ ಪೀಡಿಸಿ, ಕಾಡಿಸಿ ಸೋಬಾನೆ ಪದವನ್ನು ಕಲಿತು ಅವರವರೇ ಗುಂಪಾಗಿ ಸೋಬಾನೆ ಹಾಡಿದ್ದು ನನಗೆ ನನ್ನ ಕೆಲಸದ ಮೇಲೆ ಅತ್ತಷ್ಟು ನಂಬಿಕೆ ಹುಟ್ಟುವಂತೆ ಮಾಡಿತು. ನಾನು ಮೊದಲೇ ಹೇಳಿದಂತೆ ಗುಂಪಿನ ಒಂದು ಸಾಂಗತ್ಯವನ್ನು ಬೆಸೆಯುವಲ್ಲಿ ಜನಪದ ತುಂಬ ಗುಪ್ತವಾಗಿ ಕೆಲಸ ಮಾಡುತ್ತದೆ ಎಂಬುದಕ್ಕೆ ಇಲ್ಲಿ ನನಗೆ ಸಾಕಷ್ಟು ಸಾಕ್ಷಿ ದೊರೆಯಿತು.

ಸಾಮಾನ್ಯವಾಗಿ ಮಕ್ಕಳಿಗೆ ಹಬ್ಬ ಎಂದರೆ ಎಲ್ಲಿಲ್ಲದ ಖುಷಿ ಮತ್ತು ಸಂಭ್ರಮ ಆದರೆ ನಮ್ಮ ಈ ಹಬ್ಬಗಳ ಬಗ್ಗೆ ಜಾತ್ರೆಯ ಬಗ್ಗೆ ಅದರ ವಿಶೇಷತೆಯ ಬಗ್ಗೆ ತರಗತಿಯಲ್ಲಿ ನಾನು ಮಾತನಾಡಿದ್ದರ ಪರಿಣಾಮದಿಂದಾಗಿ ನಮ್ಮೂರ ಜಾತ್ರೆ ಯ ಸಂಧರ್ಭದಲ್ಲಿ ನಮ್ಮ ಶಾಲೆಯ ಮಕ್ಕಳೆಲ್ಲ ಒಂದು ಕಡೆ ಸೇರಿ ನಾನು ತರಗತಿಯಲ್ಲಿ ಹೇಳಿದ ವಿವರಣೆಗಳನ್ನು ಗಮನಿಸುತ್ತ, ಅವರವರಲ್ಲೆ ಖಾತ್ರಿ ಪಡಿಸಿಕೊಳ್ಳುತ್ತಾ,



ಜಾತ್ರೆ ಎಲ್ಲ ಮುಗಿದ ಮೇಲೆ ನನ್ನ ಹತ್ತಿರ ಬಂದು ಅವರ ಅನುಭವವನ್ನ ಬಹಳ ಸಂಭ್ರಮದಿಂದ ಹಂಚಿಕೊಂಡರು.

ಹೀಗೆ ಅವರ ಕ್ರಿಯಾಶೀಲತೆ ನನ್ನ ಕಲಿಕೆಗೆ ದೊಡ್ಡ ಪಾಠ ವಾಯಿತು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

* * *

**ಡಾ. ನಿಂಗು ಸೊಲಗಿ,** ಮುಂಡರಗಿ, ಗದಗ

ಮನೆಯಂಗಳದ ಜನಪದರ ಆಟಗಳು ಮಕ್ಕಳ ಕಲಿಕೆಯ ಸರಳ ಮತ್ತು ಆಸಕ್ತದಾಯಕ ಮಾಧ್ಯಮಗಳೆಂದರೆ ಅತಿಶಯೋಕ್ತಿಯಾಗಲಾರದು. ಮಕ್ಕಳು ಬೆಳೆದು ದೊಡ್ಡವರಾಗುವವರೆಗೆ ಬದುಕಿನ ವಿವಿಧ ರಂಗದಲ್ಲಿ ಅವರು ಬಹುಪಾಲು ಅನುಕರಣೆಯಿಂದಲೇ ಕಲಿಯುತ್ತಾರೆ. ತಮ್ಮ ಸೃಜನಾತ್ಮಕ ಆಟಗಳ ಮೂಲಕ, ತಮ್ಮ ದರ್ಶಕ-ಪ್ರದರ್ಶಕ ಗುಣದಿಂದ ನಿತ್ಯ ಜೀವನದ ಹಲವು ಪಾತ್ರಗಳನ್ನು ನೋಡತ್ತಾ; ಅನುಕರಿಸಿ, ಅಭಿನಯಿಸಿ ಕಲಿಯುತ್ತಾ; ಬೆಳೆಯುತ್ತಾರೆ. ಈ ರೀತಿ ತಮ್ಮ ಬಾಲ್ಯದ ಸೃಜನಶೀಲ ಆಟಗಳಿಂದ ಸಾಮಾಜಿಕ ವರ್ತನೆಗಳನ್ನು ಅರಿತು ರೂಢಿಸಿಕೊಳ್ಳುತ್ತ ಸಾಮಾಜೀಕರಣಗೊಳ್ಳುತ್ತಾರೆ ಎಂಬುದನ್ನು ನನ್ನ ಅನುಭವ ಹಾಗೂ ಅಧ್ಯಯನದಿಂದ ತಿಳಿದಿದ್ದೇನೆ. ಆದರೆ ಇತ್ತೀಚಿನ ದಿನಗಳಲ್ಲಿ ಮಕ್ಕಳು ಇಂಥ ಆಟಗಳಿಂದ ದೂರವಾಗುತ್ತಿದ್ದಾರೆ. ಅಥವಾ 'ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳು ಆಡುತ್ತ ಕಾಲಹರಣ ಮಾಡದೇ ಟ್ಯೂಶನ್‌ಗೆ ಹೋಗಲಿ, ಹೋಮ್‌ವರ್ಕ್ ಮಾಡಲಿ' ಎಂದು ಪಾಲಕರೇ ಇಂತಹ ಆಟಗಳಿಂದ ದೂರ ಮಾಡುತ್ತಿದ್ದಾರೆ.

ಮಕ್ಕಳ ಕಲಿಕಾ ಮಾಧ್ಯಮಗಳಾದ ಈ ಸೃಜನಾತ್ಮಕ ಆಟಗಳಿಂದ ಮಕ್ಕಳು ದೂರವಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಇದರಿಂದ ಮಕ್ಕಳ ಭಾವನಾತ್ಮಕ ಬೆಳವಣಿಗೆಗೆ ಅಡ್ಡಿಯಾಗುತ್ತಿದೆ. ಅಲ್ಲದೆ, ತಮ್ಮ ಪರಿಸರದ ಅನುಭವದಿಂದ ವಂಚಿತರಾಗುವಂತೆ ಮಾಡುತ್ತದೆ. ದೇಸೀಯ ಕಲೆ-ಸಾಹಿತ್ಯ ಹಾಗೂ ಜೀವನಾನುಭವಗಳಿಂದ ಕೂಡಿದ ಕೌಶಲಗಳು ದಕ್ಕದಂತಾಗುತ್ತವೆ. ಈ ಕಾರಣದಿಂದಾಗಿಯೇ 'ಮನೆಯಂಗಳದ ಮಕ್ಕಳ ಸೃಜನಾತ್ಮಕ ಆಟಗಳಿಂದ ಜೀವನ ಕೌಶಲ ಪಾಠ' ವಿಷಯವಾಗಿ ಯೋಜನೆ ರೂಪಿಸಿ ಇಂಡಿಯಾ ಫೌಂಡೇಶನ್ ಫಾರ್ ಆರ್ಟ್ಸ್ ಸಂಸ್ಥೆಯ ನೆರವಿನಲ್ಲಿ; ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಅನುಷ್ಠಾನಗೊಳಿಲು ಪ್ರಯತ್ನಿಸಿದೆ. ಈ ಮೂಲಕ ಮಕ್ಕಳು ಸ್ವತಃ ಕಲಿಯುವ ಅವಕಾಶ ಮಾಡಿಕೊಟ್ಟು; ಅನುಭವ ವಿಸ್ತರಿಸಿಕೊಳ್ಳುವಂತೆ, ಜೀವನ ಕೌಶಲ ರೂಢಿಸಿಕೊಳ್ಳುವಂತೆ, ರಚನಾ ಕ್ರಿಯೆಯಲ್ಲಿ ತೊಡಗಿಕೊಳ್ಳುವಂತೆ ಪ್ರೋತ್ಸಾಹಿಸಿದೆ.

ಈ ಕ್ರಿಯೆ ಶಾಲೆಗೆ ಮಾತ್ರ ಸೀಮಿತವಾಗದೇ ಶಾಲೆಯ ಹೊರಗೆ ಮತ್ತು ಒಳಗೆ, ಶಾಲಾ ಅವಧಿಯಲ್ಲಿ ಹಾಗೂ ಶಾಲಾ ಅವಧಿಯ ನಂತರ; ನನ್ನ

ಸಹೋದ್ಯೋಗಿಗಳ, ಹಿರಿಯ ವಿದ್ಯಾರ್ಥಿಗಳ, ಆತ್ಮೀಯ ಪಾಲಕ-ಪೋಷಕರ ಸಹಕಾರ ಪಡೆದು; ಶಾಲೆಯಿಂದಾಚೆ ಮನೆಯಲ್ಲಿ ಶಿಶುವಿಹಾರಗಳಲ್ಲಿ, ಅಂಗನವಾಡಿಗಳಲ್ಲಿ ಬೆಳೆಯುತ್ತಿರುವ ಮಕ್ಕಳ ಆಟ-ಚೆಲ್ಲಾಟಗಳನ್ನು ತಿಳಿದುಕೊಳ್ಳುತ್ತ; ಅಧ್ಯಯನ ನಡೆಸಿದೆ. ಇಂಥ ಆಟಗಳ ಮೂಲಕ ಶಾಲಾ ಅಂಗಳ ಪ್ರವೇಶಿಸುವ ಮಕ್ಕಳಿಗೆ ಒತ್ತಡದಿಂದ ಮುಕ್ತವಾಗಿ ತಮ್ಮ ನೆಚ್ಚಿನ ಆಟಗಳೊಂದಿಗೆ ಸಂತಸ ಕಲಿಕೆಯಲ್ಲಿ ತೊಡಗುವಂತೆ ಪೂರಕ ವಾತಾವರಣ ನಿರ್ಮಾಣ ಮಾಡಲು ಸಾಧ್ಯ ಎಂಬುದನ್ನು ಈ ಮೂಲಕ ಅರಿತುಕೊಂಡೆ.

ಆಟಗಳನ್ನು ಪಠ್ಯ ಪೂರಕವಾಗಿ ಪರಿಸರ ಅಧ್ಯಯನ, ಗಣಿತ ಪರಿಕಲ್ಪನೆಗಳೊಂದಿಗೆ ಭಾಷಾ ಸಾಮರ್ಥ್ಯಗಳ ಅಭಿವೃದ್ಧಿ ಸಾಧಿಸಲು ಬಳಸಿಕೊಳ್ಳಬಹುದಾದ ಸಾಧ್ಯತೆಗಳನ್ನು ಕಂಡುಕೊಳ್ಳಲಾಯಿತು. ಪಾಲಕ-ಪೋಷಕ-ಶಿಕ್ಷಕರಿಗೆ ಈ ಮನೆಯಾಟಗಳ ಕುರಿತು ಜಾಗೃತಿ ಮೂಡಿಸುವ ಮೂಲಕ ಮಕ್ಕಳಿಗೆ ಇಂಥ ಆಟಗಳನ್ನಾಡಲು ಪ್ರೋತ್ಸಾಹಿಸುವಂತೆ ಪ್ರೇರೇಪಿಸಲಾಯಿತು. ಮಕ್ಕಳು ತಮ್ಮ ಕಲಿಕೆಯನ್ನು ಶಾಲಾ ಅವಧಿಗೆ ಸೀಮಿತಗೊಳಿಸದೇ; ಕಲಿಕೆಯನ್ನು ಒಂದು ಆಟವಾಗಿಸಿಕೊಂಡು ಎಲ್ಲೆಂದರಲ್ಲಿ ಪ್ರಯೋಗಿಸಿ ಕಲಿಯುವಂತೆ; ಕಲಿಕೆಯ ಅವಕಾಶಗಳನ್ನು ಹಾಗೂ ಸ್ಥಳವನ್ನು ಮಕ್ಕಳೇ ಸ್ವತಃ ವಿಸ್ತರಿಸಿಕೊಳ್ಳುವಂತೆ ಪ್ರೇರಣೆ, ಪ್ರೋತ್ಸಾಹ ನೀಡಲು ಸಮುದಾಯಕ್ಕೆ ಮನವರಿಕೆ ಮಾಡಿಕೊಡಲಾಯಿತು.

ಮಕ್ಕಳು ಮನೆಯಾಟಗಳನ್ನು ಶಾಲೆಯಲ್ಲೂ ಆಡಲು ಇಚ್ಛಿಸುತ್ತಾರೆ. ಇಂಥ ಆಟಗಳಿಗೆ ಅವಕಾಶ ನೀಡಿದಾಕ್ಷಣ ತರಗತಿಯಲ್ಲಿ ಮೂಗನ/ಳಂತಿದ್ದವರು ಬಾಯಿತುಂಬ ಮಾತನಾಡುತ್ತ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುತ್ತ; ತಮ್ಮನ್ನು ತಾವು ಮುಕ್ತವಾಗಿ ತೆರೆದುಕೊಳ್ಳುವ ಮೂಲಕ ಶಾಲಾ ಆವರಣವನ್ನು ಪ್ರೀತಿಸುವುದನ್ನು ಕಂಡುಕೊಂಡಿದ್ದೇನೆ. ನಾನು ಈಗಾಗಲೇ ಹಲವು ಕಡೆ ಈ ಪ್ರಯೋಗಗಳನ್ನು ಮಾಡುತ್ತ ಬಂದವನಾಗಿದ್ದು ಇಲ್ಲಿ ಸಹಪಾಠಿ ಶಿಕ್ಷಕರ ನೆರವಿನೊಂದಿಗೆ ಶಾಲಾ ಆವರಣದಲ್ಲಿ ಆಡಿಸುವ ಮೂಲಕ ಈ ಸತ್ಯವನ್ನು ಮನಗಂಡಿದ್ದೇನೆ.

ಈ ಹಿನ್ನೆಲೆಯಲ್ಲಿ ಶಾಲಾ ಆವರಣದಲ್ಲಿಯೇ ಆಟದ ನೆಲೆಗಳನ್ನು ಸೃಷ್ಟಿಸಿಕೊಂಡು ಪ್ರಯೋಗ-ಪ್ರಕ್ರಿಯೆಗೆ ಆದ್ಯತೆ ನೀಡುವ ಮೂಲಕ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುವುದು ಅಗತ್ಯವಿದೆ. ಹಾಗಾಗಿ ಈ ಪರ್ಯಾಯ ಕಲಿಕಾ ವಿಧಾನಗಳ ಪ್ರಯೋಗಶೀಲತೆಯ ಕುರಿತು ಚರ್ಚಿಸುತ್ತ ಹೊಸ ಶಿಕ್ಷಣ ನೀತಿಯನ್ನನುಸರಿಸಿ ಹೊಸ ಪಠ್ಯಕ್ರಮವೂ ಪರ್ಯಾಯ ವಿಧಾನಗಳಿಗೆ ಅವಕಾಶ ನೀಡಿರುವುದರಿಂದ ಪರಾಮರ್ಶಿಸುವ ಮೂಲಕ ಶಾಲಾ ಅಂಗಳವನ್ನು ಮನೆಯಂಗಳವಾಗಿಸಲು ಸಾಧ್ಯತೆಗಳನ್ನು ಗುರುತಿಸಿಕೊಳ್ಳೋಣ.

■■



Over 20 Years of Celebrating the Arts

India Foundation for the Arts

I F A

ಕಲಿ-ಕಲಿಸು

AN ARTS EDUCATION TEACHER INITIATIVE

KALI-KALISU

## ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಕರ್ನಾಟಕದ ಸರ್ಕಾರಿ ಶಾಲೆಗಳ ಶಿಕ್ಷಕ/ಶಿಕ್ಷಕಿಯರಿಂದ ಯೋಜನಾ ಪ್ರಸ್ತಾವನೆಗಳನ್ನು ಅಹ್ವಾನಿಸಿದೆ.

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ.ಎಫ್.ಎ) ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾ ಶಿಕ್ಷಣ ನೀಡಲು ಶಾಲಾ ಶಿಕ್ಷಕ/ಶಿಕ್ಷಕಿಯರಿಂದ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ. ಇದು ಈಗಾಗಲೇ ಚಾಲ್ತಿಯಲ್ಲಿರುವ 'ಕಲಿ-ಕಲಿಸು' ಯೋಜನೆಯ ಮುಂದುವರಿಕೆ ಭಾಗವಾಗಿದೆ. ಶಿಕ್ಷಕರು, ಶಾಲಾ ಸಮುದಾಯ ಹಾಗೂ ಸ್ಥಳೀಯ ಕಲಾವಿದರ ಸಂಬಂಧವನ್ನು ಗಟ್ಟಿಗೊಳಿಸುವುದು ಈ ಯೋಜನೆಯ ಮುಖ್ಯ ಗುರಿ.

ಈ ಅನುದಾನದ ಮುಖ್ಯ ಉದ್ದೇಶವೆಂದರೆ, ಶಿಕ್ಷಕರು ತಮ್ಮ ವಿಷಯದ ಪರಿಮಿತಿಯ ಚೌಕಟ್ಟನ್ನು ದಾಟಿ, ಕಲಾ ಪ್ರಕಾರಗಳನ್ನು ತಾವು ಕಲಿಸುತ್ತಿರುವ ವಿಷಯಗಳಲ್ಲಿ ಅಳವಡಿಸಿಕೊಳ್ಳುವುದು, ಈ ಮೂಲಕ ಎಲ್ಲಾ ವಿಷಯಗಳ ಪಠ್ಯಕ್ರಮದಲ್ಲಿ ಹಾಗೂ ತರಗತಿಯಲ್ಲಿ ಸ್ಥಳೀಯ ಕಲಾಪ್ರಕಾರಗಳನ್ನು ಅಳವಡಿಸಿಕೊಂಡು ಕಲಾವಿದರಿಗೆ ಹಾಗೂ ಶಿಕ್ಷಕರಿಗೆ ಹೊಸ ಕಲಿಕೆಯ ಅವಕಾಶವನ್ನು ಕಲ್ಪಿಸುವುದಾಗಿದೆ. ಅದರ ಜೊತೆಗೆ ಪರಿಸರ ಹಾಗೂ ಜಾನಪದ ಸಂಸ್ಕೃತಿಯನ್ನು ಶಾಲಾ ಶಿಕ್ಷಣದಲ್ಲಿ ಮತ್ತೆ ಪರಿಚಯ ಮಾಡುವ ಕೆಲಸ ಆಗಿದೆ.

ಅನುದಾನದ ಅವಧಿಯ ನಂತರವೂ ಯೋಜನಾ ಕಾರ್ಯಕ್ರಮವು ಮುಂದುವರೆಯಬಹುದಾದ ಎಲ್ಲಾ ಸಾಧ್ಯತೆಗಳನ್ನು ಐ.ಎಫ್.ಎ. ನಿರೀಕ್ಷಿಸುತ್ತದೆ.

**ಈ ಯಜೋನಾ ಪ್ರಸ್ತಾವನಕ್ಕೆ ಬೇಕಾದ ಅರ್ಹತೆ** :

ಸರ್ಕಾರಿ ಶಾಲಾ ವಿಷಯ ಶಿಕ್ಷಕರು, ಕಲಾಶಿಕ್ಷಕರು, ಜಿಲ್ಲಾ ತರಬೇತಿ ಕೇಂದ್ರದ (DIET) ಉಪನ್ಯಾಸಕರು.

**ಯೋಜನೆಯ ವ್ಯಾಪ್ತಿ** :

ಯೋಜನೆಯು ವ್ಯಾಪ್ತಿಯಲ್ಲಿ ಕೆಳಕಂಡ ಯಾವುದಾದರೊಂದು ಅಂಶವಿರಬೇಕು.

- ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾಸೇವೆಯಲ್ಲಿ ತೊಡಗಿರುವವರೂ ಒಳಗೊಂಡಂತೆ ಇನ್ನೂ ಹಲವು ಪಾಲುದಾರರನ್ನು ಕಲಾ ಯೋಜನೆಯ ಪರಿಧಿಯಲ್ಲಿ ತರಬೇಕು.
- ಬೋಧನೆಯಲ್ಲಿ ಸ್ಥಳೀಯ ಹಾಗೂ ಪ್ರಾಂತೀಯ ಕಲಾ ಪ್ರಕಾರಗಳನ್ನು ಬಳಸಿಕೊಳ್ಳುವ ಮೂಲಕ ಕಲಿಕೆಯನ್ನು ಶ್ರೀಮಂತಗೊಳಿಸುವುದು.
- ವಿದ್ಯಾರ್ಥಿ ಕೇಂದ್ರಿತ ಕಲಿಕೆಗೆ ಪ್ರೋತ್ಸಾಹಿಸುವುದು. ಉದಾಹರಣೆಗೆ ಕಲಾ ಪ್ರಕಾರಗಳನ್ನು ಬಳಸಿಕೊಳ್ಳುವ ಮೂಲಕ ಕಲಿಕೆಯನ್ನು ಶ್ರೀಮಂತಗೊಳಿಸುವುದು.
- ಕೇಂದ್ರಿತ ಕಲಿಕೆಗೆ ಪ್ರೋತ್ಸಾಹಿಸುವುದು. ಉದಾಹರಣೆಗೆ ಕಲಾ ಪ್ರಕಾರಗಳನ್ನು ಪರಿಚಯಿಸಿ, ಮಕ್ಕಳು ವಿವಿಧ ಕಲಾ ಪ್ರಕಾರಗಳಲ್ಲಿ ನಿರಂತರವಾಗಿ ತೊಡಗುವಂತೆ ಪ್ರೋತ್ಸಾಹಿಸುವುದು. ಅವುಗಳ ಬಗ್ಗೆ ನಿತ್ಯ ಅನುಭಾವಿಸುವುದು ಹಾಗೂ ಹೆಚ್ಚೆಚ್ಚು ಅಭ್ಯಸಿಸುವ ಕೆಲಸ ಆಗು ಮಾಡುವುದು. (ರಂಗ, ಚಿತ್ರಕಲೆ, ಸಿನಿಮಾ, ಸಾಹಿತ್ಯ, ಛಾಯಾಚಿತ್ರ, ಸಂಗೀತ ಇತ್ಯಾದಿ)
- ಯೋಜನೆಯು ಕಲಾ ಕಲಿಕೆಯ ಮೂಲಕ ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂಬಂಧಿ ಅರಿವು ಮೂಡಿಸಲು ಶಾಲಾ ಸಮುದಾಯವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಬೇಕು.

**ಯೋಜನಾ ಪ್ರಸಾವನೆ ಸಲ್ಲಿಸುವ ಪ್ರಕ್ರಿಯೆಯ ಮಾರ್ಗಸೂಚಿ**

- ಯೋಜನೆಯ ನಿರೀಕ್ಷಿತ ಕಾಲಾವಧಿ ಕನಿಷ್ಠ ಒಂಬತ್ತು ತಿಂಗಳದ್ದಾಗಿರಬೇಕು ಹಾಗೂ ಗರಿಷ್ಠ ೧೮ ತಿಂಗಳ ಅವಧಿಯದ್ದಾಗಿರಬೇಕು.
- ನಿಮ್ಮ ಯೋಜನೆಯನ್ನು ಕನ್ನಡ, ಉರ್ದು, ಹಿಂದಿ, ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಬರೆಯಬಹುದು.
- ಕೊನೆಯ ದಿನಾಂಕದ ಮೊದಲು ನಿಮ್ಮ ಪ್ರಸ್ತಾವನೆಯು ಐ.ಎಫ್.ಎ. ಗೆ ತಲುಪಲು ನೀವೇ ಜವಾಬ್ದಾರರಾಗಿರುತ್ತೀರಿ ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
- ನಿಮ್ಮ ಪ್ರಸ್ತಾವನೆ ಆಯ್ಕೆಯಾದಲ್ಲಿ ನಿಗಧಿಪಡಿಸಿದ ದಿನಾಂಕದಂದು ಖುದ್ದು ಚರ್ಚೆಗೆ ಬರಬೇಕು.



**ನಿಮ್ಮ ಯೋಜನೆಯು ಈ ಕೆಳಕಂಡ ವಿಷಯಗಳ ವಿವರಗಳನ್ನು ಒಳಗೊಂಡಿರಬೇಕು**.

೧. ಯೋಜನೆಯ ಉದ್ದೇಶಗಳು

೨. ಕಾರ್ಯ ಯೋಜನೆಗಳ ವಿವರ

೩. ಯೋಜನೆಯಿಂದ ಬರಬಹುದಾದ ಅಪೇಕ್ಷಿತ ಫಲಿತಾಂಶಗಳು.

೪. ಖರ್ಚು-ವೆಚ್ಚಗಳ ವಿವರ.

**ಬಜೆಟ್**

- ರೂ. ೧,೦೦,೦೦೦/ ವರೆಗೆ ಧನಸಹಾಯ ದೊರೆಯುತ್ತದೆ.
- ಪ್ರತಿ ಬಜೆಟ್ ಯೋಜನೆಗೆ ಯೋಜಿಸಿದ ನಿರ್ದಿಷ್ಟ ಖರ್ಚುವೆಚ್ಚಗಳ ವಿವರ ಹೊಂದಿರಬೇಕು.
- ಯೋಜನೆಗೆ ಯೋಜಿಸಿದ ವೈಯಕ್ತಿಕ ಗೌರವಧನ, ಪ್ರಯಾಣ ಹಾಗೂ ಚಟುವಟಿಕೆಗಳ ವಿವರ ಹೊಂದಿರಬೇಕು. ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಗತ್ಯವಿರುವ ನೂತನ ಉಪಕರಣಗಳನ್ನು ಮತ್ತು ವಸ್ತುಗಳನ್ನುಕೊಳ್ಳಲು ಅವಕಾಶವಿರುವುದಿಲ್ಲ.
- ಸಾಂಸ್ಥಿಕ ಖರ್ಚು ವೆಚ್ಚಗಳು, ಕಟ್ಟಡದ ಖರ್ಚು ವೆಚ್ಚಗಳು ಮತ್ತು ಹೊಸ ಕಾಮಗಾರಿಗಳಿಗಾಗಿ ಅನುದಾನವಿರುವುದಿಲ್ಲ.
- ಲೆಕ್ಕ ಪರಿಶೀಲಕರಿಗಾಗಿ ನಿಗಧಿ ಪಡಿಸಿರುವ ರೂ. ೨,೦೦೦/-ನ್ನು ಯೋಜನೆಯ ಖರ್ಚು ವೆಚ್ಚಗಳಲ್ಲಿ ಸೂಚಿಸಿರಬೇಕು.

**ಅನುದಾನಕ್ಕೆ ಆಯ್ಕೆಯಾದ ಶಿಕ್ಷಕರಿಂದ ನಿರೀಕ್ಷೆಗಳೇನೆಂದರೆ**

- ಮುಂದಿನ ದಿನಗಳಲ್ಲಿ ಅನುಷ್ಠಾನಕ್ಕೆ ತರಬಹುದಾದ ಒಂದು ನೂತನ ಪಠ್ಯಕ್ರಮದ ಅಭಿವೃದ್ಧಿಪಡಿಸುವಿಕೆ. ಅನುದಾನ ಚಟುವಟಿಕೆಗಳು, ಎದುರಾದ ಸಮಸ್ಯೆಗಳು ಮತ್ತು ಕಲಿಕೆಗಳ ದಾಖಲೆ.
- ಯೋಜನೆಯು ಸರಿಯಾದ ಕ್ರಮದಲ್ಲಿ ನಡೆಯುತ್ತಿರುವುದನ್ನು ತೋರಿಸಲು ಕಾಲಕಾಲಕ್ಕೆ ಸರಿಯಾದ ದಾಖಲೆಗಳ ಸಲ್ಲಿಕೆ (ದಾಖಲೆಗಳು ಛಾಯಾಚಿತ್ರ/ ಆಡಿಯೋ/ವಿಡಿಯೋ/ವರದಿಯ ರೂಪದಲ್ಲಿರಬೇಕು)
- ಯೋಜನಾ ಅವಧಿಯಲ್ಲಿ ಮಧ್ಯಂತರ ವರದಿ ಹಾಗೂ ಯೋಜನೆಯ ಕೊನೆಯಲ್ಲಿ ಸಮಗ್ರ ವರದಿ.

- ಯೋಜನಾ ಅವಧಿಯ ನಂತರ ಹಣಕಾಸಿನ ವರದಿಯ ಜೊತೆ ಯೋಜನೆಯ ಸಂಪೂರ್ಣ/ಸವಿಸ್ತಾರ ವರದಿ.

ನಿಮ್ಮ ಪ್ರಸ್ತಾವನೆಗಳನ್ನು ಹಾಗೂ ಸಂದೇಹಗಳನ್ನು

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಅಪೂರ್ವ ನೆಲಮಹಡಿ, ಸಂಖ್ಯೆ ೨೫೯, ೪ನೇ ಅಡ್ಡ ರಸ್ತೆ ರಾಜಮಹಲ್ ವಿಲಾಸ್
ಎರಡನೇ ಹಂತ, ಬೆಂಗಳೂರು.
ದೂರವಾಣಿ- 8762954080- 7829327739

For more information on Kali-Kalisu follow this link :

http://www.indiaifa.org/programmes/arts-education.html

krishna@indiaifa.org, radhika@indiafa.org ಗೆ ಕಳುಹಿಸಿ ಕೊಡಲು ಕೋರಲಾಗಿದೆ.



## ಅನುಬಂಧ ೧

## ಮುಖಾಮುಖಿಯಲ್ಲಿರುವ ಶಿಕ್ಷಕರು, ಕಲಾವಿದರು ಹಾಗೂ ಅವರು ಯೋಜನೆ ಕೈಗೊಂಡ ಶಾಲೆಗಳ ವಿವರ

| ಕ್ರ.ಸಂ | ಹೆಸರು | ಯೋಜನೆ ಕೈಗೊಂಡ ಶಾಲೆಯ ವಿಳಾಸ |
|---|---|---|
| ೧ | ಅರುಣ ಗೊಪ್ಪೇನಹಳ್ಳಿ | ಸ. ಹಿ. ಪ್ರಾ ಶಾಲೆ ಗೊಪ್ಪೇನಹಳ್ಳಿ. ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ |
| ೨ | ಮಧುಕರ ಎಲ್. ಚಾಮರಾಜನಗರ | ಸ. ಹಿ. ಪ್ರಾ. ಶಾಲೆ ಗುಂಬಳ್ಳಿ. ಚಾಮರಾಜನಗರ ಜಿಲ್ಲೆ |
| ೩ | ಗಂಗಾಧರ ನಾಯ್ಕ ಶಿರಸಿ | ಸ. ಹಿ. ಪ್ರಾ. ಶಾಲೆ ಗಾಂಧೀನಗರ. ಶಿರಸಿ |
| ೪ | ಭಾರತಿ ಎ. ಕೊಪ್ಪ | ಸ. ಕಿ. ಪ್ರಾ ಶಾಲೆ ಸಣ್ಣಕೆರೆ. ಚಿಕ್ಕಮಗಳೂರು ಜಿಲ್ಲೆ. |
| ೫ | ಕಾವ್ಯ ಚಂದ್ರಶೇಖರ್ | ಸ. ಹಿ. ಪ್ರಾ ಶಾಲೆ ಎಂ. ಕರೇನಹಳ್ಳಿ. ಬಿಡದಿ. ರಾಮನಗರ ಜಿಲ್ಲೆ |
| ೬ | ಎಂ. ಜೆ ರಾಜೀವಗೌಡ | ಸ. ಹಿ. ಪ್ರಾ ಶಾಲೆ ಚೀಮಂಗಲ. ಚಿಕ್ಕಬಳ್ಳಾಪುರ ಜಿಲ್ಲೆ |
| ೭ | ಗುಂಡುರಾವ್ ದೇಸಾಯಿ | ಸ. ಮಾ. ಹಿ. ಪ್ರಾ ಶಾಲೆ (ಕೇಂದ್ರ ಶಾಲೆ) ಮಸ್ಕಿ. ರಾಯಚೂರು |
| ೮ | ಸದಾನಂದ ಬೈಂದೂರು | ಸರ್ಕಾರಿ ಪ್ರೌಢಶಾಲೆ ಕೋಣಿ. ತಾ. ಕುಂದಾಪುರ. ಜಿ. ಉಡುಪಿ |
| ೯ | ಅಪರ್ಣಾ ದೇಶಪಾಂಡೆ | ಸ. ಹಿ. ಪ್ರಾ ಶಾಲೆ ವಿಜಯನಗರ. ಜಿಲ್ಲೆ ಬೆಳಗಾವಿ |
| ೧೦ | ಕೊಟ್ರೇಶ ಬಿ. | ಸ. ಮಾ. ಹಿ. ಪ್ರಾ ಶಾಲೆ ಬೆಳಗುರ್ಕಿ. ತಾ.ಸಿಂಧನೂರು ಜಿ.ರಾಯಚೂರು |
| ೧೧ | ಆಶೋಕ ತೋಟ್ನಳ್ಳಿ | ಸರ್ಕಾರಿ ಪ್ರೌಢಶಾಲೆ ಜಾಕನಪಲ್ಲಿ. ಸೇಡಂ ತಾ. ಗುಲಬರ್ಗಾ ಜಿಲ್ಲೆ. |
| ೧೨ | ಪ್ರಶಾಂತಕುಮಾರ ಮೈಸೂರು | ಸರ್ಕಾರಿ ಪ. ಪೂ. ಕಾಲೇಜು (ಪ್ರೌಢಶಾಲೆ) ಅಕ್ಕಿಹೆಬ್ಬಾಳು. ಕೆ. ಆರ್. ಪೇಟೆ. ಮಂಡ್ಯ |
| ೧೩ | ಗಂಗಪ್ಪ ಎಸ್. ಎಲ್. | ಸ.ಹಿ.ಪ್ರಾ. ಶಾಲೆ ಅಲ್ಕೇರಿ ಗೋಳಿವಾಡ. ಯಲ್ಲಾಪುರ.ಜಿಲ್ಲೆ ಉತ್ತರಕನ್ನಡ |
| ೧೪ | ಸೈಯದ್ ಸಾಧಿಕ್ | ಕರ್ನಾಟಕ ಪಬ್ಲಿಕ್ ಶಾಲೆ ಕುವೆಂಪುನಗರ (ಪ್ರೌಢಶಾಲೆ ವಿಭಾಗ) ಮೈಸೂರು |
| ೧೫ | ಗುರುರಾಜ ಎಲ್. | ಸರ್ಕಾರಿ ಪ್ರೌಢ ಶಾಲೆ ಜಾಗೀರಗುಡದೂರು. ಕೊಪ್ಪಳ ಜಿಲ್ಲೆ |
| ೧೬ | ಕಿಶನ್‌ರಾವ್ ಕುಲಕರ್ಣಿ | ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲೆ ವಿಭಾಗ) ಹನುಮಸಾಗರ ಜಿ,ಕೊಪ್ಪಳ |
| ೧೭ | ರವಿಚಂದ್ರ ಡಿ. | ಸ.ಹಿ.ಪ್ರಾ. ಶಾಲೆ ಮಲ್ಕಾಪುರ. ಮಸ್ಕಿ ತಾಲೂಕು. ರಾಯಚೂರು ಜಿಲ್ಲೆ |
| ೧೮ | ಸಂತೋಷಕುಮಾರ್ ದಿಂಡಿಗೂರು | ಸ.ಹಿ.ಪ್ರಾ. ಶಾಲೆ ದಿಂಡಗೂರು. ಚನ್ನರಾಯಪಟ್ಟಣ ತಾ. ಹಾಸನ ಜಿ. |
| ೧೯ | ಡಾ. ನಿಂಗು ಸೊಲಗಿ | ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೋಟೆ ಮುಂಡರಗಿ, ಗದಗ ಜಿಲ್ಲೆ. |